ಮಾನವಿಕ ಕರ್ಣಾಟಕ

ಸಂಪುಟ ೩೧

ಸಂಚಿಕೆ ೧

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ೫೭೦ ೦೦೬

೨೦೦೧

Manavika Karnataka Vol-32, SI-2

ಮಾನವಿಕ ಕರ್ನಾಟಕ

ಸಂಪುಟ ೩೨ ಸಂಚಿಕೆ ೨

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೨೦೦೨

ಪ್ರಕಾಶಕರ ಮಾತು

'ಮಾನವಿಕ ಕರ್ಣಾಟಕ' ಪತ್ರಿಕೆಯ ಸಂಪುಟ – 32 ಸಂಚಿಕೆ 2 ಇದೀಗ ಹೊರಬರುತ್ತಿದೆ. ಪ್ರಸಾರಾಂಗ ಪ್ರಕಟಿಸುತ್ತಿರುವ ಮೂರು ವಿದ್ವತ್ ಪತ್ರಿಕೆಗಳನ್ನು ಸಕಾಲದಲ್ಲಿ ಹೊರತಂದು ಆಸಕ್ತ ಓದುಗರಿಗೆ ಉಪಯುಕ್ತವೆನಿಸುವ ದಿಕ್ಕಿನಲ್ಲಿ ನಾವು ಪ್ರಯತ್ನ ಶೀಲರಾಗಿದ್ದೇವೆ. ಮಾನವಿಕ ಕರ್ಣಾಟಕದ ಮೂಲಕ ವ್ಯಾಪಕವಾದ ಮಾನವಿಕ ವಿಷಯಗಳ ಕುರಿತು ಅನೇಕ ಬಗೆಯ ವಿದ್ವತ್ಪೂರ್ಣವಾದ ಲೇಖನಗಳು ಓದುಗರ ಕೈಸೇರುತ್ತಿರುವುದು ಸಂತೋಷದ ವಿಚಾರ.

ವಿಶ್ವವಿದ್ಯಾನಿಲಯದ ಸರ್ವತೋಮುಖ ಬೆಳವಣಿಗೆಯ ಬಗೆಗೆ ದೂರದೃಷ್ಟಿಯುಳ್ಳ, ಸಕಾರಾತ್ಮಕ ಚಿಂತನಶೀಲರಾದ ಮತ್ತು ನೆಚ್ಚಿನ ಕುಲಪತಿಗಳಾದ ಪ್ರೊ. ಎಸ್.ಎನ್. ಹೆಗ್ಡೆಯವರ ಕ್ರಿಯಾಶೀಲತೆ, ಆಡಳಿತಾತ್ಮಕ ವಿಚಾರಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಹಂತಗಳಲ್ಲೂ ವಿಶ್ವಾಸದಿಂದ ನೆರವಾಗುವ ಕುಲಸಚಿವರಾದ ಶ್ರೀ ಎನ್. ಡಿ. ತಿವಾರಿ ಅವರ ಪ್ರೋತ್ಸಾಹ ನಮ್ಮ ಪ್ರಸಾರಾಂಗದ ಕೆಲಸಕಾರ್ಯಗಳಿಗೆ ಚೇತೋಹಾರಿಯಾಗಿದೆ. ಈ ಇಬ್ಬರು ಮಹನೀಯರನ್ನು ಈ ಹೊತ್ತು ವಿಶೇಷವಾಗಿ ಸ್ಮರಿಸುವೆ.

ಈ ಸಂಚಿಕೆಗಳನ್ನು ಹೊರತರುವ ಹೊಣೆಗಾರಿಕೆ ಹೊತ್ತು ಕಾರ್ಯನಿರ್ವಹಿಸಿದ ಸಂಪಾದಕರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಮತ್ತು ಡಾ. ರಾಮಕೃಷ್ಣ ಅವರಿಗೂ, ಡಿ.ಟಿ.ಪಿ. ವಿನ್ಯಾಸ ಮಾಡಿಕೊಟ್ಟ ಎಚ್. ಎಸ್. ಕಂಪ್ಯೂಟರ್ಸ್‌ನ ಮೀನಾಸುರೇಶ್ ಅವರಿಗೂ, ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟಿರುವ ವಿಶ್ವವಿದ್ಯಾನಿಲಯ ಅಚ್ಚುಕೂಟದ ಸಿಬ್ಬಂದಿವರ್ಗದವರಿಗೂ, ಪ್ರಸಾರಾಂಗದ ಕಾರ್ಯ ಚಟುವಟಿಕೆಗಳನ್ನು ಶ್ರದ್ಧಾಸಕ್ತಿಗಳಿಂದ ನಿರ್ವಹಿಸುತ್ತಿರುವ ಕಾರ್ಯಭಾರಿ ಉಪನಿರ್ದೇಶಕರಾದ ಶ್ರೀ ಬಾ. ವೇ. ಶ್ರೀಧರ ಮತ್ತು ಸಹೋದ್ಯೋಗಿ ಮಿತ್ರರಿಗೂ ನಾನು ಆಭಾರಿಯಾಗಿರುತ್ತೇನೆ.

ಪ್ರೊ. ಲಕ್ಷ್ಮೀನಾರಾಯಣ ಅರೋರಾ
ನಿರ್ದೇಶಕ
ಪ್ರಸಾರಾಂಗ

ಸಂಪಾದಕೀಯ

ಪ್ರಕೃತ ಸಂಚಿಕೆಯು ಅರ್ಥಶಾಸ್ತ್ರ, ಭಾಷಾ ವಿಜ್ಞಾನ, ಇತಿಹಾಸ, ಜಾನಪದ, ತತ್ವಶಾಸ್ತ್ರ ಮುಂತಾದ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಎಂಟು ಸಂಶೋಧನಾತ್ಮಕ ಬರಹಗಳನ್ನು ತನ್ನ ಒಡಲೊಳಗೆ ಹುದುಗಿಸಿಕೊಂಡಿದೆ. ಆಯಾ ಶಿಸ್ತುಗಳಲ್ಲಿ ಸದ್ಯ ಪ್ರಚಲಿತವಿರುವ ಒಲವು ನಿಲುವುಗಳನ್ನು ಬಿಂಬಿಸುವ ಈ ಬರಹಗಳನ್ನು ಓದುಗರ ಕೈಗಿಡಲು ಸಂತೋಷವಾಗುತ್ತದೆ.

ಈ ಸಂಚಿಕೆಯ ಮೊದಲ ಬರಹ ಕೆ.ಸಿ. ಬಸವರಾಜು ಅವರ 'ಕರ್ನಾಟಕ ಕೃಷಿ ನೀತಿ : ಒಂದು ಅಧ್ಯಯನ' ಹೊಸ ಆರ್ಥಿಕ ನೀತಿಯ ಬೆಳಕಿನಲ್ಲಿ ಕೃಷಿ ಕ್ಷೇತ್ರದ ಅಳಿವು-ಉಳಿವು ಮತ್ತು ರೈತನ ಹಿತರಕ್ಷಣೆ ಬಗೆಗೆ ಅನನ್ಯ ಕಾಳಜಿ ತೋರಿಸುತ್ತದೆ. ಸ್ವಯಂ ಕೃಷಿಕರೂ ರೈತ ಸಂಘಟನೆಯ ಮುಂಚೂಣಿ ನಾಯಕರೂ ಆಗಿರುವ ಕೆ.ಸಿ. ಬಸವರಾಜು ಅವರು ನಮ್ಮ ನಾಡಿನ ಒಬ್ಬ ಶ್ರೇಷ್ಠ ಕೃಷಿ ನೀತಿ ಚಿಂತಕರು. ಪ್ರಕೃತ ಬರಹದಲ್ಲಿ ಅವರು ಕರ್ನಾಟಕ ರಾಜ್ಯದ ಪ್ರಸಕ್ತ ಕೃಷಿ ನೀತಿಯ ನ್ಯೂನತೆಗಳನ್ನು ಎತ್ತಿ ಹೇಳಿರುವರಲ್ಲದೆ ಅವಕ್ಕೆ ಸೂಕ್ತ ಪರಿಹಾರೋಪಾಯಗಳನ್ನು ಸೂಚಿಸಿರುವುದು ಗಮನಾರ್ಹ. ಕೃಷಿ ನೀತಿ ಆಶಯಗಳನ್ನು ಸೂಕ್ಷ್ಮವಾಗಿ ಪರಿಚಯಿಸಿ ಅದರ ಕಾರ್ಯತಂತ್ರಗಳ ಬಗೆಗೆ ಅರಿವು ಮೂಡಿಸುವ ಅವರ ಯತ್ನ ಪ್ರಾಮಾಣಿಕವಾದುದು. ವಾಣಿಜ್ಯೀಕರಣಕ್ಕೆ ಗುರಿಯಾಗಿರುವ ಇಂದಿನ ಕೃಷಿ ನೀತಿ ಹೇಗೆ ನಮ್ಮ ರೈತಾಪಿ ಬದುಕನ್ನು ಸುಧಾರಿಸಲು ಶಕ್ತವಾಗಿದೆ ಎಂಬುದನ್ನೂ ಅದರ ಇತಿಮಿತಿಗಳನ್ನೂ ಇಲ್ಲಿ ವಿಶ್ಲೇಷಿಸಿದ್ದಾರೆ. ಒಟ್ಟಿನಲ್ಲಿ ಇದು ಪ್ರಸಕ್ತ ಕೃಷಿ ವಿದ್ಯಮಾನಗಳ ಬಗೆಗೆ ನಮ್ಮ ಅರಿವನ್ನು ವಿಸ್ತರಿಸುವ ಒಂದು ಗಂಭೀರ ಪ್ರಯತ್ನ ಎಂದು ಹೇಳಬಹುದು.

ಸೋಮಶೇಖರಗೌಡ ಅವರ 'ಸಮಾಜ, ಸಂಸ್ಕೃತಿ ಮತ್ತು ಭಾಷೆ' ಲೇಖನ ಭಾಷೆ, ಸಮಾಜ ಮತ್ತು ಸಂಸ್ಕೃತಿಗಳನ್ನು ಏಕಮುಖವಾದ ಒಂದೇ ಅಧ್ಯಯನ ಶಿಸ್ತಿಗೆ ಒಳಪಡಿಸಿ ವಿಶ್ಲೇಷಿಸುವುದು ಸಾಧುವಲ್ಲ ಎಂಬುದನ್ನು ಮನಗಾಣಿಸುವ ಒಂದು ಉಪಯುಕ್ತ ಬರಹ. ಸಮಾಜ, ಸಂಸ್ಕೃತಿ, ಭಾಷೆ-ಇವನ್ನು ಒಂದು ನಿರ್ವಾತದಲ್ಲಿಟ್ಟು ಅಧ್ಯಯನ ಮಾಡುವುದು ಸಾಧ್ಯವಿಲ್ಲ ಎಂಬ ಸತ್ಯವನ್ನು ಸೂಕ್ತ ಸಾಕ್ಷ್ಯಾಧಾರಗಳೊಡನೆ ಸಮರ್ಥವಾಗಿ ಅವರು ಶೋಧಿಸಿದ್ದಾರೆ. ಸಮಾಜ, ಸಂಸ್ಕೃತಿ, ಭಾಷೆ - ಇವು ಮೂರೂ ಒಂದರೊಡನೊಂದು ಅವಿನಾ ಸಂಬಂಧಿಯಾಗಿ ಹೆಣೆದುಕೊಂಡಿರುವುದರಿಂದ ಅವನ್ನು ಒಟ್ಟಾಗಿಯೇ ಗ್ರಹಿಸುವುದು ಯುಕ್ತ ಎಂದು ಅವರು ಅಭಿಪ್ರಾಯಪಟ್ಟಿರುವುದು ಸಮರ್ಥನೀಯವಾಗಿದೆ.

'ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರ ಕಾರ್ಯ ಯೋಜನೆಗಳು' ಎಂಬ ಡಿ.ಎಸ್. ಜಯಪ್ಪಗೌಡ ಅವರ ಬರಹ ವಿಶ್ವೇಶ್ವರಯ್ಯನವರ ಕೊಡುಗೆಗಳ ಮೇಲೆ ಹೊಸ ಬೆಳಕು ಚೆಲ್ಲುವ ಯತ್ನ ಮಾಡುತ್ತದೆ. ಒಬ್ಬ ಪ್ರತಿಭಾವಂತ ಎಂಜಿನಿಯರ್ ಆಗಿ, ದಕ್ಷ ಆಡಳಿತಗಾರ ರಾಗಿ, ದೂರದೃಷ್ಟಿಯ ಆರ್ಥಿಕ ಚಿಂತಕರಾಗಿ ಮೈಸೂರನ್ನು ಸದೃಢ ಸಂಪನ್ನ ರಾಜ್ಯವನ್ನಾಗಿ ರೂಪಿಸಿದ ವಿಶ್ವೇಶ್ವರಯ್ಯನವರ ಅನನ್ಯ ದೇಶಪ್ರೇಮ ಹಾಗೂ ದಕ್ಷತೆಯ ಸ್ವರೂಪವನ್ನು ಕಟ್ಟಿಕೊಡಲಾಗಿದೆ. ವಿಶ್ವೇಶ್ವರಯ್ಯನವರ ನಿಸ್ವಾರ್ಥಮನೋಭಾವ, ವೈಜ್ಞಾನಿಕ ದೃಷ್ಟಿ, ಶಿಸ್ತು ಮತ್ತು ದೂರದೃಷ್ಟಿ ಹೇಗೆ ಅವರ ಕಾರ್ಯ ಯೋಜನೆಗಳಿಗೆ ಮೆರುಗು ನೀಡಿದವು ಎಂಬುದನ್ನು ಇಲ್ಲಿ ಜಯಪ್ಪಗೌಡ ಅವರು ಪ್ರಬುದ್ಧವಾಗಿ ನಿರೂಪಿಸಿದ್ದಾರೆ.

ಟಿ. ಗೋವಿಂದರಾಜು ಅವರು ನಮ್ಮ ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಗಂಭೀರ ಆಲೋಚಕರಾಗಿ, ಹೊಸ ಹೊಸ ಪ್ರಯೋಗಗಳಿಗೆ - ಅಲೆಗಳಿಗೆ ಕಾರಣರಾಗುತ್ತಿರುವವರು. ಜನಪದ ಸಂಸ್ಕೃತಿಯನ್ನು ವಿವಿಧ ನೆಲೆಗಳಲ್ಲಿ ಅಧ್ಯಯನ ಮಾಡುವ ಗಂಭೀರ ಯತ್ನಗಳು ನಡೆಯುತ್ತಿರುವ ಇಂದಿನ ದಿನಗಳಲ್ಲಿ ಇವರು ಇನ್ನೂ ಎರಡು ಸಾಧ್ಯತೆಗಳ ಬಗೆಗೆ 'ಜಾನಪದ ಅಧ್ಯಯನ : ಎರಡು ಹೊಸ ಸಾಧ್ಯತೆಗಳು' ಎಂಬ ಬರಹದಲ್ಲಿ ವಿಶ್ಲೇಷಿಸಿದ್ದಾರೆ. ಪ್ರಾಚ್ಯ ಜಾನಪದೀಯ ಅಧ್ಯಯನ ಹಾಗೂ ಕ್ಯಾಂಡಿಡ್ ಜಾನಪದಗಳ ಸ್ವರೂಪವನ್ನು ತಿಳಿಸಿಕೊಟ್ಟಿರುವುದಲ್ಲದೆ ಆ ಸಾಧ್ಯತೆಗಳನ್ನು ಬಳಸಿಕೊಳ್ಳುವ ಅಗತ್ಯವನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ತಮ್ಮ ಈ ಪ್ರಯತ್ನಗಳ ಮೂಲಕ ಗೋವಿಂದರಾಜು ಅವರು ಕನ್ನಡ ಜಾನಪದ ಅಧ್ಯಯನದ ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿದ್ದಾರೆ.

ಅಂಬಳಿಕೆ ಅವರ 'ಕನ್ನಡ ಜಾನಪದಕ್ಕೆ ಹಾಮಾನಾ ಕೊಡುಗೆ' ಬರಹದಲ್ಲಿ ಹಾಮಾನಾ ಅವರ ಬರವಣಿಗೆ ಮತ್ತು ವಿಚಾರಗಳಲ್ಲಿ ಕಾಣಿಸುವ, ಜಾನಪದ ಅಧ್ಯಯನದ ಬಗೆಗಿನ ಹಾಮಾನಾ ಅವರ ಸ್ವತಂತ್ರ ಆಲೋಚನೆಗಳನ್ನು ಕ್ರೋಢೀಕರಿಸುವ ಯತ್ನವಿದೆ. ಹಾಗೆ ಮಾಡುವಾಗ ಜಾನಪದದ ಬಗ್ಗೆ ಹಾಮಾನಾ ಅವರಿಗಿದ್ದ ಗಾಢವಾದ ಜ್ಞಾನ ಮತ್ತು ಕಾಳಜಿಗಳು ಯಾವ ಸ್ವರೂಪದವು ಎಂಬುದನ್ನು ಪರೀಕ್ಷೆಗೆ ಒಡ್ಡಿರುವುದು ಸ್ವಾಗತಾರ್ಹ.

ಭೌಗೋಳಿಕವಾಗಿ ಮಲೆನಾಡು, ಅರೆ ಮಲೆನಾಡು ಹಾಗೂ ಬಯಲು ನಾಡುಗಳ ಸಂಗಮವಾಗಿರುವ ಚಿಕ್ಕಮಗಳೂರಿನ ಜಾನಪದದ ಒಂದು ಸ್ಥೂಲ ಪರಿಚಯ 'ಚಿಕ್ಕಮಗಳೂರು ಜಿಲ್ಲೆ: ಜಾನಪದ ಸಂಪತ್ತು' ಲೇಖನದ ಉದ್ದೇಶವಾಗಿದೆ. ಇದರ ಕರ್ತೃ ಎಂ.ಪಿ. ಮಂಜಪ್ಪಶೆಟ್ಟಿ ಮಸಗಲಿ ಅವರು ಜಾನಪದ ಅಧ್ಯಯನದಲ್ಲಿ ಮೊದಲಿನಿಂದಲೂ ಶ್ರದ್ಧಾಸಕ್ತಿಗಳನ್ನು ತೋರುತ್ತಾ ಬಂದಿರುವವರು. ಲೇಖಕರು ಸ್ಪಷ್ಟಪಡಿಸಿರುವಂತೆ, ಹಲವು ಬಗೆಯ ವೈಪರೀತ್ಯಗಳು ಹಾಗೂ ಸಾದೃಶ್ಯಗಳ ಆಗರವಾಗಿರುವ ಚಿಕ್ಕಮಗಳೂರಿನ ಜಾನಪದ ಆ ವೈಪರೀತ್ಯಗಳಿಗನುಗುಣವಾಗಿ ವಿಶಿಷ್ಟ ರೂಪು ತಳೆದಿರುವುದು ಗಮನಾರ್ಹ. ಹಲವು ಧರ್ಮ, ಜಾತಿ-ಪಂಗಡಗಳಿಗೆ ನೆಲೆ ಒದಗಿಸಿರುವ ಚಿಕ್ಕಮಗಳೂರು ಜಿಲ್ಲೆ ಹೇಗೆ ಸಹಜ ವಾಗಿಯೇ ಸಾಂಸ್ಕೃತಿಕ ಭಿನ್ನತೆಗಳ ಕೇಂದ್ರವಾಗಿದೆ ಎಂಬುದನ್ನು ಮಸಗಲಿ ಅವರು ಇಲ್ಲಿ ಸವಿವರವಾಗಿ ಸಾದರಪಡಿಸಿದ್ದಾರೆ. ಈ ಪ್ರದೇಶದಲ್ಲಿ ಪ್ರಚಲಿತವಿರುವ ಎಲ್ಲ ಮುಖ್ಯ ಜಾನಪದ ಪ್ರಕಾರಗಳ ಸ್ಥೂಲ ಪರಿಚಯವನ್ನು ಇಲ್ಲಿ ಒದಗಿಸಿರುವುದು ಸ್ತುತ್ಯಾರ್ಹ.

ಜಿ. ಶಿವಪ್ಪ ಅವರ 'ಹೈದರಾಲಿಯ ಸೈನಿಕ ಸುಧಾರಣೆಗಳು' ಲೇಖನ ಆಗಿನ ಮೈಸೂರು ರಾಜ್ಯದಲ್ಲಿ ಹೈದರಾಲಿ ಜಾರಿಗೆ ತಂದ ಸುಧಾರಣೆಗಳನ್ನು ಸಾಧಾರವಾಗಿ ನಿರೂಪಿಸುವ ಒಂದು ಕುತೂಹಲಕರ ಬರಹ ಎನಿಸಿದೆ. ಆಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿದ್ದ ಇಂಗ್ಲಿಷರನ್ನು ಹಿಮ್ಮೆಟ್ಟಿಸಲು ಅಗತ್ಯವೆನಿಸಿದ್ದ ಯುದ್ಧ ಸಲಕರಣೆಗಳನ್ನು ಉತ್ಪಾದಿಸುವ, ಸೈನ್ಯವನ್ನು ಸಜ್ಜುಗೊಳಿಸುವ ಕಾರ್ಯಯೋಜನೆಯಲ್ಲಿ ಹೈದರಾಲಿ ತೋರಿದ ಪರಿಶ್ರಮ ಅನುಪಮ ವಾದುದು. ಹೈದರನ ನಿರಂಕುಶ ಪ್ರಭುತ್ವ ಸೈನ್ಯದ ಆಧುನೀಕರಣಕ್ಕೆ ಒತ್ತಾಸೆಯಾಗಿದ್ದುದನ್ನು ಲೇಖಕರು ಪರಾಮರ್ಶಿಸುತ್ತಾ ಹೈದರಾಲಿ ಸುಧಾರಿತ ಸೇನೆಯನ್ನು ಹೊಂದುವುದರ ಮೂಲಕ ಆಗಿನ ಮೈಸೂರನ್ನು ಹೇಗೆ ಬಲಿಷ್ಠ ರಾಜ್ಯವನ್ನಾಗಿಸಿದ ಎಂಬುದನ್ನು ಇಲ್ಲಿ ವಿವೇಚಿಸಲಾಗಿದೆ.

ಎಂ. ಅನುಸೂಯ ಅವರ 'ಮಾತೃತ್ವದ ಚಿಲುಮೆಯಾಗಿ ಶ್ರೀಶಾರದಾದೇವಿಯವರು'

ಎಂಬ ಬರಹ ಶ್ರೀರಾಮಕೃಷ್ಣ ಪರಮಹಂಸರ ಜೀವನ ಸಂಗಾತಿಯಾಗಿ ಶಾರದಾದೇವಿಯವರು ಆಧ್ಯಾತ್ಮಿಕ ಸಾಧನೆಗೆ ಯಾವ ಬಗೆಯ ಸ್ಫೂರ್ತಿ ಪ್ರೇರಣೆಗಳನ್ನು ಒದಗಿಸಿದರು ಎಂಬ ಸಂಗತಿಯನ್ನು ಚರ್ಚಿಸುತ್ತದೆ. ಶಾರದಾದೇವಿಯವರಲ್ಲಿದ್ದ ಹಿರಿಯ ಗುಣವೇ ತಾಯೊಲುಮೆ ಎಂದು ಪ್ರತಿಪಾದಿಸುತ್ತ ಅವರ ಪ್ರೀತಿ, ವಾತ್ಸಲ್ಯ, ಶಾಂತಚಿತ್ತತೆ ಗುಣಗಳನ್ನು ಪ್ರಶಂಸಿಸ ಲಾಗಿದೆ.

ಒಟ್ಟಿನಲ್ಲಿ ೩೨ನೇ ಸಂಪುಟದ ಈ ಸಂಚಿಕೆ ಸಾಕಷ್ಟು ಪ್ರಬುದ್ಧ ಎನಿಸಿದ ಬರಹ ಗಳನ್ನೊಳಗೊಂಡ ಒಂದು ಉತ್ತಮ ಸಂಚಿಕೆಯಾಗಿ ರೂಪುಗೊಂಡಿದ್ದು ಈ ಬರಹಗಳು ಆಸಕ್ತರ ಅರಿವನ್ನು ವಿಸ್ತರಿಸುವ ಪ್ರಾಮಾಣಿಕ ಪ್ರಯತ್ನಗಳಾಗಿವೆ ಎನ್ನಬಹುದು.

ಅಂಬಳಿಕೆ ಹಿರಿಯಣ್ಣ
ಆರ್. ರಾಮಕೃಷ್ಣ

ಈ ಸಂಚಿಕೆಯ ಬರಹಗಳು

ಕರ್ನಾಟಕ ಕೃಷಿ ನೀತಿ : ಒಂದು ಅಧ್ಯಯನ

ಕೆ. ಸಿ. ಬಸವರಾಜು

ದೇಶದ ಶೇಖಡ ೭೦ ರಷ್ಟು ಜನಸಂಖ್ಯೆ ಕೃಷಿ ಮತ್ತು ಅದರ ಸಂಬಂಧಿ ಕಸುಬುಗಳಲ್ಲಿ ತೊಡಗಿಸಿಕೊಂಡಿದ್ದರೂ ಅಖಿಲ ಭಾರತ ಮಟ್ಟದಲ್ಲಿ ಕೃಷಿ ನೀತಿಯಿಲ್ಲದಿರುವುದು ಒಂದು ದುರಂತ. ಇಂದಿಗೂ ಕೈಗಾರಿಕಾ ಬೆಳವಣಿಗೆ, ಇತರ ಉತ್ಪಾದಕ ಕ್ಷೇತ್ರಗಳು ಕೃಷಿಯ ಬೆಳವಣಿಗೆಯನ್ನೇ ಅವಲಂಬಿಸಿವೆ. ಬರ, ಕ್ಷಾಮದಂತಹ ಪರಿಸ್ಥಿತಿಗಳು ಕೃಷಿ ಮತ್ತು ಅದರ ಸಂಬಂಧಿ ಕಸುಬುಗಳ ಬೆಳವಣಿಗೆಗೆ ಅಡ್ಡಿಯಾದಾಗ ಉಳಿದೆಲ್ಲಾ ಕ್ಷೇತ್ರಗಳು ಸರಿಯಾದ ಬೇಡಿಕೆ ಕಾಣದೆ ತತ್ತರಿಸುತ್ತವೆ. ದೇಶದ ಅಭಿವೃದ್ಧಿಯಲ್ಲಿ ಇಂತಹ ಮಹತ್ವದ ಸ್ಥಾನ ಕೃಷಿಯದಾಗಿದ್ದರೂ ಈ ಕ್ಷೇತ್ರದ ಯೋಜಿತ ಬೆಳವಣಿಗೆಗೆ ಸ್ವತಂತ್ರ್ಯ ಭಾರತದಲ್ಲಿ ಒಂದು ನೀತಿಯಿಲ್ಲದಿರುವುದು, ಈ ಕ್ಷೇತ್ರವನ್ನು ಅವಲಂಬಿಸಿ ಬದುಕುತ್ತಿರುವ ಬಹುಸಂಖ್ಯಾತ ಜನರ ಬಗ್ಗೆ ದೇಶದ ಆಳುವ ವರ್ಗದ ಕಾಳಜಿಯೇನು ಎಂಬುದನ್ನು ತೋರಿಸುತ್ತದೆ.

ದೇಶದ ಅಭಿವೃದ್ಧಿಯಲ್ಲಿ ಕೃಷಿಯನ್ನು ನಿರ್ಲಕ್ಷಿಸಲಾಗಿದೆ. ಈ ನಿರ್ಲಕ್ಷವನ್ನು ಮೊದಲನೆಯ ಯೋಜನೆಯ ಕರಡು ಪ್ರತಿಯಲ್ಲೇ ವ್ಯಕ್ತಪಡಿಸಲಾಗಿದೆ. ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿ ಕೃಷಿಯನ್ನು ಕೃಷಿ ಉತ್ಪನ್ನಗಳ ಬೆಲೆಯನ್ನು ಹಿಡಿದಿಟ್ಟು ಕೊಳ್ಳ ಬೇಕೆಂಬ ನೀತಿಯನ್ನು ಪ್ರಕಟಪಡಿಸಲಾಗಿದೆ. ಇದರಿಂದಾಗಿ ಕೃಷಿ ಉತ್ಪನ್ನಗಳು ಉತ್ತಮ ಬೆಲೆ ಪಡೆಯಲಾಗದೆ, ಉತ್ಪಾದನೆಗೆ ಉತ್ತೇಜನವಿಲ್ಲದೆ ಸೊರಗುವಂತೆ ಮಾಡಿದೆ. ಈ ಕಾರಣಗಳಿಂದಾಗಿ ಕೃಷಿಕ್ಷೇತ್ರದ ಬೆಳವಣಿಗೆ ಸ್ವಾತಂತ್ರ್ಯ ನಂತರದ ಭಾರತದಲ್ಲಿ ಗಣನೀಯ ಏರಿಕೆ ಕಾಣಲಾಗಲಿಲ್ಲ. ಆದರೆ ಅದನ್ನೇ ಅವಲಂಬಿಸಿದ ಜನರ ಪ್ರಮಾಣದಲ್ಲಿ ಯಾವ ಕಡಿತವೂ ಆಗದೆ ಅದನ್ನು ಅವಲಂಬಿಸಿದವರಲ್ಲಿ ಕಡಿಮೆ ಆದಾಯ, ನಿರುದ್ಯೋಗ, ಬಡತನದ ತೀವ್ರತೆಯನ್ನು ಕಾಣುತ್ತಿದ್ದೇವೆ.

ಕರ್ನಾಟಕದ ಕೃಷಿ ಪರಿಸ್ಥಿತಿ

(ಅ) ಕರ್ನಾಟಕ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಮೂರನೇ ಒಂದು ಭಾಗದಷ್ಟು ಕೃಷಿ ಮತ್ತು ಅದರ ಸಂಬಂಧಿ ಕಸುಬುಗಳಿಂದ ಬರುತ್ತದೆ. ೧೯೮೦ರ ದಶಕದಲ್ಲಿ ಶೇಕಡ ೪೫ ರಷ್ಟಿದ್ದ ಉತ್ಪನ್ನ ೧೯೯೦ರ ದಶಕದಲ್ಲಿ ಶೇಕಡ ೩೦ಕ್ಕೆ ಇಳಿದಿದೆ. ೧೯೮೦-೯೩ರ ಅವಧಿಯಲ್ಲಿ ಈ ಕ್ಷೇತ್ರ ವಾರ್ಷಿಕ ೨. ೮ ರಂತೆ ಬೆಳವಣಿಗೆ ಕಂಡಿದೆ. ೧೯೯೦ರ ಪ್ರಾರಂಭದಲ್ಲಿ ಚೇತರಿಕೆ ತೋರಿಸಿದರೂ ಇದು ಇನ್ನೂ ಶಕ್ತಿಯುತವಾಗಿ ಹೊರಹೊಮ್ಮಬೇಕಾಗಿದೆ.

(ಅ) ಕರ್ನಾಟಕದ ಕೃಷಿಯಲ್ಲಿ ಸಾರ್ವಜನಿಕ ಬಂಡವಾಳದ ಪಾಲು ಕಡಿಮೆಯಾಗುತ್ತಿದೆ. ಇದು ಅಖಿಲ ಭಾರತ ಮಟ್ಟದಲ್ಲೂ ನಿಜ. ಈ ಕಾರಣದಿಂದಾಗಿ ಖಾಸಗಿ ಬಂಡವಾಳ ಹೂಡುವಿಕೆಯು ನಿರಾಶಾದಾಯಕವಾಗಿದ್ದು, ಈ ಕ್ಷೇತ್ರದ ಬೆಳವಣಿಗೆಗೆ ಸಹಕಾರಿಯಾಗಿಲ್ಲ.

(ಇ) ಕರ್ನಾಟಕದ ಹವಾಗುಣ ತೋಟಗಾರಿಕೆ ಬೆಳೆಗಳಿಗೆ ಅನುಕೂಲಕರವಾಗಿದ್ದು ಈ ಸಾಮರ್ಥ್ಯದ ಬಳಕೆಯಾಗದೆ ಉಳಿದಿದೆ. ತೋಟಗಾರಿಕೆಯ ಪರಂಪರೆ ಕರ್ನಾಟಕಕ್ಕೆ ಬಹಳ ಹಿಂದಿನಿಂದಲೂ ಇದ್ದು, ಅಧಿಕ ಆದಾಯ ತರಬಲ್ಲ ಮತ್ತು ಅಧಿಕ ಮೌಲ್ಯವರ್ಧನೆ ಕ್ಷೇತ್ರವಾಗಿದ್ದು ಇದನ್ನು ಸಮರ್ಥವಾಗಿ ಬಳಸಬೇಕಾಗಿದೆ.

(ಈ) ರೇಷ್ಮೆ ಕೃಷಿಯು ಕರ್ನಾಟಕದ ಹೆಮ್ಮೆಯ ಕೃಷಿ ಆಧಾರಿತ ಗುಡಿ ಕೈಗಾರಿಕೆಯಾಗಿದೆ. ಇದು ಮಹತ್ವದ ನಗದು ಬೆಳೆ ಮತ್ತು ಹೆಚ್ಚಿನ ಉದ್ಯೋಗ ಸೃಷ್ಟಿಸುವ ಕ್ಷೇತ್ರ ವಾಗಿದ್ದು ಈ ಕ್ಷೇತ್ರದ ಸಮಗ್ರ ಅಭಿವೃದ್ಧಿಯಾಗಬೇಕಾಗಿದೆ.

(ಉ) ರಾಜ್ಯದ ೨೫೦೦೦ ಚದರ ಕಿ. ಮೀ. ನಷ್ಟು ಕರಾವಳಿ ಪ್ರದೇಶವನ್ನು ಮೀನುಗಾರಿಕೆಗೆ ಸರಿಯಾಗಿ ಬಳಸಬೇಕಾಗಿದೆ. ೩೦೦ ಕಿ. ಮೀ. ಉದ್ದದ ಸಮುದ್ರತೀರ, ೪. ೬ ಲಕ್ಷ ಹೆಕ್ಟೇರ್‌ಗಳ ಒಳನಾಡು ಜಲಪ್ರದೇಶ ಮೀನುಗಾರಿಕೆಗೆ ಹೆಚ್ಚು ಅವಕಾಶ ಒದಗಿಸುತ್ತದೆ.

(ಊ) ಗ್ರಾಮೀಣ ಜನರ ಆದಾಯ ಹೆಚ್ಚಿಸುವಲ್ಲಿ ಮತ್ತು ಉದ್ಯೋಗ ಸೃಷ್ಟಿಸುವಲ್ಲಿ ಹೈನುಗಾರಿಕೆ ಮಹತ್ವದ ಪಾತ್ರ ವಹಿಸುತ್ತದೆ. ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು ಕೃಷಿ ಉತ್ಪನ್ನಗಳನ್ನು ಮತ್ತು ಮೇವನ್ನು ಬಳಸಿಕೊಂಡು ಹೈನುಗಾರಿಕೆ ಮಾಡಿ ತಮ್ಮ ಶಕ್ತಿಯನ್ನು ವೃದ್ಧಿಸಿಕೊಳ್ಳಬಹುದು.

(ಋ) ಕೃಷಿಯ ಬೆಳವಣಿಗೆಗೆ ಮುಖ್ಯವಾಗಿ ಒಣ ಭೂಮಿ ಬೇಸಾಯದಲ್ಲಿ ದಕ್ಷತೆ ಹೆಚ್ಚಿಸುವುದು ಒಂದು. ಕರ್ನಾಟಕದ ಕೃಷಿಯಲ್ಲಿ ಹೆಚ್ಚು ಪಾಲು ಒಣಬೇಸಾಯ ವಾಗಿದ್ದು, ಈ ಕೃಷಿಯಲ್ಲಿ ಮಳೆ ನೀರು ಸದ್ಬಳಕೆ, ಅಂತರ್ಜಲ ಬಳಕೆ, ಬೀಜ ಗೊಬ್ಬರ ಮತ್ತು ಬೇಸಾಯ ಪದ್ಧತಿಗಳಲ್ಲಿ ಬದಲಾವಣೆ ತರುವುದು ಮುಖ್ಯ ವಾಗಿರುತ್ತದೆ.

ಈ ಎಲ್ಲಾ ಚಟುವಟಿಕೆಗಳಿಗೆ ೧೯೯೫ರ ಕರ್ನಾಟಕ ಕೃಷಿ ನೀತಿಯು ಸುಮಾರು ೫೦೦೦ ಕೋಟಿ ರೂ. ಗಳ ಸಂಪನ್ಮೂಲದ ಅವಶ್ಯಕತೆಯನ್ನು ಕಂಡುಕೊಂಡಿದೆ.

ಕರ್ನಾಟಕ ಕೃಷಿ ನೀತಿಯ ಆಶಯಗಳು

ಈ ಪರಿಸ್ಥಿತಿಯನ್ನು ಕರ್ನಾಟಕವು ೧೯೯೫ರಲ್ಲಿ ಮೊದಲಬಾರಿಗೆ ಕೃಷಿ ನೀತಿಯನ್ನು ತರುವ ಪ್ರಯತ್ನ ಮಾಡಿದೆ. ಈ ನೀತಿಯ ಮೂಲಕ ಕರ್ನಾಟಕದ ಗ್ರಾಮೀಣ ಬದುಕನ್ನು ಉತ್ತಮಗೊಳಿಸುವ ಆಶಯ ವ್ಯಕ್ತಪಡಿಸಿದೆ.

(ಅ) ೧೯೯೦ರ ದಶಕದಲ್ಲಿನ ಭಾರತದ ಹೊಸ ಆರ್ಥಿಕ ವಾತಾವರಣದಲ್ಲಿ ಕೃಷಿ ಮತ್ತು ಅದರ ಅವಲಂಬಿತ ಕಸುಬುಗಳು ಹೇಗೆ ಅವಕಾಶಗಳನ್ನು ಪಡೆದು ದೇಶ ಮತ್ತು ವಿಶ್ವಮಟ್ಟದಲ್ಲಿ ಲಾಭ ಪಡೆಯಬಹುದು ಎಂದು ಗುರುತಿಸಲಾಗಿದೆ. ಈ

ಬೆಳವಣಿಗೆಯ ಸ್ವರೂಪ ಉದ್ಯೋಗವನ್ನು ಸೃಷ್ಟಿ ಮಾಡಿ ಅದರ ಮೂಲಕ ಗ್ರಾಮೀಣ ಕರ್ನಾಟಕದ ಬಡತನ ಕಡಿಮೆ ಮಾಡುವುದು ಆಗಿದೆ. ಇದರೊಂದಿಗೆ ಸಂಪನ್ಮೂಲಗಳ ಸದ್ಬಳಕೆ ಮತ್ತು ವಾತಾವರಣ ರಕ್ಷಣೆಯನ್ನು ಮಾಡುವ ಆಶಯ ಇಟ್ಟುಕೊಳ್ಳಲಾಗಿದೆ.

(ಆ) ಗ್ರಾಮೀಣ ಕರ್ನಾಟಕದ ವೈವಿಧ್ಯತೆಯನ್ನಾಧರಿಸಿ, ಇದಕ್ಕೆ ಸಮಂಜಸವಾದ ಸಾಂಸ್ಥಿಕ ಚೌಕಟ್ಟನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ. ಇದರಿಂದ ವಿವಿಧ ವರ್ಗಗಳು ತೀರ್ಮಾನ ಕೈಗೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸುವುದರಲ್ಲದೆ, ತಮ್ಮ ಹಿತ ಕಾಪಾಡಿಕೊಂಡು, ತಮ್ಮ ಪಾಲಿನ ಅಭಿವೃದ್ಧಿ ಫಲವನ್ನು ಪಡೆಯಲು ಸಾಧ್ಯ ವಾಗುತ್ತದೆ.

(ಇ) ಕೃಷಿಯ ಸಮಗ್ರ ಬೆಳವಣಿಗೆಯ ಆಶಯದೊಂದಿಗೆ ಕೃಷಿ, ರೇಷ್ಮೆ, ತೋಟಗಾರಿಕೆ, ಪುಷ್ಪಕೃಷಿ, ತೋಟಗಾರಿಕೆ, ಮೀನುಸಾಕಣೆ, ಹೈನುಗಾರಿಕೆ ಇತ್ಯಾದಿ ಚಟುವಟಿಕೆ ಗಳೊಂದಿಗೆ ರೈತ ಬದುಕಿನ ಸ್ಥಿತಿಗಳನ್ನು ಸುಧಾರಿಸುವುದು.

ಕರ್ನಾಟಕ ಕೃಷಿ ನೀತಿಯ ಕಾರ್ಯ ತಂತ್ರ

(ಅ) ಕರ್ನಾಟಕ ಕೃಷಿ ನೀತಿಯು ಕೃಷಿ ಬೆಳವಣಿಗೆಗೆ ಅಗತ್ಯವಾಗಿ ಕೈಗಾರಿಕಾ ನೀತಿಯನ್ನೇ ಅನ್ವಯಿಸಬೇಕೆಂದು ಆಶಿಸುತ್ತದೆ. ಕೃಷಿಯಲ್ಲಿ ತೊಡಗಿಸುವ ಬಂಡವಾಳ, ಬೆಲೆ ನಿಗದಿ ಮಾಡುವುದು, ಸಾಲ ಒದಗಿಸುವುದು ಮತ್ತು ಕಾರ್ಮಿಕ ಕಲ್ಯಾಣ ವಿಷಯಗಳಲ್ಲಿ ಕೃಷಿಯನ್ನು ಕೈಗಾರಿಕೆಯಂತೆಯೇ ಪರಿಗಣಿಸಬೇಕು. ಅಂತರ್ ರಾಷ್ಟ್ರೀಯ ವ್ಯಾಪಾರದ ಲಾಭ ಪಡೆದುಕೊಳ್ಳಲು ಕೃಷಿಯನ್ನು ವಾಣಿಜ್ಯೀಕರಣ ಗೊಳಿಸಬೇಕು. ಈ ನಿಟ್ಟಿನಲ್ಲಿ ಸಾಲ ಒದಗಿಸುವುದು ಬೆಲೆ ನಿಗದಿ ಮಾಡುವುದು, ಬಂಡವಾಳ ಹೂಡುವಿಕೆ, ಮೂಲ ಸೌಲಭ್ಯಗಳು, ಮಾರುಕಟ್ಟೆಗಳು, ರಫ್ತು, ಸಂಶೋಧನೆ, ತಂತ್ರಜ್ಞಾನಗಳಲ್ಲಿ ಕೃಷಿಯನ್ನು ಕೈಗಾರಿಕೆಗೆ ಸಮಾನವಾಗಿ ಪರಿಗಣಿಸ ಬೇಕು.

(ಆ) ೧೯೮೦ರ ದಶಕದಿಂದೀಚೆಗೆ ಕಡಿಮೆಯಾಗುತ್ತಿರುವ ಸಾರ್ವಜನಿಕ ಬಂಡವಾಳ ಹೂಡುವಿಕೆಯಿಂದಾಗಿ ಪ್ರಮುಖ ಬೆಳೆಗಳ ಇಳುವರಿ ಇಳಿಮುಖವಾಗಿರುವುದು ಬೆಳವಣಿಗೆಯಲ್ಲಿ ಸ್ಥಗಿತತೆಯುಂಟಾಗಿದೆ. ಆದ್ದರಿಂದ ಬಂಡವಾಳ ಹೂಡುವಿಕೆಯ ಮಟ್ಟವನ್ನು ಹೆಚ್ಚಿಸಬೇಕಾಗಿದೆ. ಕರ್ನಾಟಕದ ಕೃಷಿಯ ಎಲ್ಲಾ ಚಟುವಟಿಕೆಗಳಲ್ಲಿ ಖಾಸಗಿ ವಲಯ ಹೆಚ್ಚು ಹಣ ಹೂಡಬೇಕೆಂದು ಈ ನೀತಿಯು ಅಪೇಕ್ಷಿಸುತ್ತದೆ. ಉತ್ಪಾದನೆ, ಮಾರಾಟ, ಸಂಸ್ಕರಣ, ಬೀಜ ಉತ್ಪಾದನೆ, ಹೆಚ್ಚಿನ ತಂತ್ರಜ್ಞಾನದ ಕೃಷಿ, ಹೂವುಗಾರಿಕೆ, ತೋಟಗಾರಿಕೆ, ರೇಷ್ಮೆ ವ್ಯವಸಾಯ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮಾಂಸ ಉತ್ಪಾದನೆ ಈ ಎಲ್ಲಾ ಕ್ಷೇತ್ರಗಳಲ್ಲಿ ಖಾಸಗಿ ಬಂಡವಾಳ ಹೂಡುವಿಕೆಗೆ ಪ್ರೋತ್ಸಾಹ ಒದಗಿಸಲಾಗಿದೆ. ವಿದೇಶಿ ಬಂಡವಾಳಕ್ಕೂ ಅವಕಾಶ ಒದಗಿಸಲಾಗಿದೆ. ಈ ಖಾಸಗಿ ಬಂಡವಾಳ ರೈತರಿಗೆ ಮಾರುಕಟ್ಟೆ, ಒದಗಿಸಿ ರೈತ ಸಮುದಾಯದ ಸಮೃದ್ಧಿಯನ್ನು ಸಾಧಿಸುತ್ತದೆಂದು ನಿರೀಕ್ಷಿಸಲಾಗಿದೆ. ಕೃಷಿಯಲ್ಲಿ

ಸಾರ್ವಜನಿಕ ಬಂಡವಾಳ ಹೂಡುವಿಕೆಯನ್ನು ಆರ್ಥಿಕ ಮತ್ತು ಸಾಮಾಜಿಕ ಮೂಲ ಅವಶ್ಯಕತೆಗಳನ್ನು ಪೂರೈಸುವ ಮೂಲಕ ಒದಗಿಸಲಾಗುವುದು. ಕೃಷಿ ಸಂಶೋಧನೆ, ಅಭಿವೃದ್ಧಿ ಹೂಡಿಕೆ, ನೀರಾವರಿ ಯೋಜನೆಗಳು, ನೀರು ಬಳಕೆ, ರಸ್ತೆ, ಮಾರುಕಟ್ಟೆ ಮತ್ತು ಸಾಮಾಜಿಕ ಪರಿಕರಗಳಾದ ಆರೋಗ್ಯ ಶಿಕ್ಷಣದ ಮೂಲಕ ಒದಗಿಸ ಲಾಗುವುದು.

(ಇ) ಕೃಷಿಗೆ ಒದಗುತ್ತಿರುವ ಸಾಲದಲ್ಲಿ ತೀವ್ರ ಕೊರತೆಯಿದ್ದು, ಸಾಲ ನೀಡಿಕೆ ಸಂಸ್ಥೆಗಳನ್ನು ಪುನಃ ರೂಪಿಸಲು 'ಕರ್ನಾಟಕ ಕೃಷಿ ಹಣಕಾಸು ನಿಗಮ' ಎಂಬ ಸಂಸ್ಥೆ ರೂಪಿಸಲು ಆಯೋಜಿಸಿದೆ. ಸಾಲದ ಅವಶ್ಯಕತೆ ಪೂರೈಸಲು ಸಾಲ ವಿಧಾನ ಸರಳಗೊಳಿಸುವುದು, ಏಕ ಗವಾಕ್ಷಿ ವ್ಯವಸ್ಥೆ ಮಾಡುವುದು.

(ಈ) ನೀರಾವರಿ, ಕೃಷಿ ಅಭಿವೃದ್ಧಿಗೆ ಜೀವಾಳ. ನೀರಾವರಿ ಸಾಮರ್ಥ್ಯ ಹೆಚ್ಚು ಮಾಡುವುದು ಹಳೇ ನೀರಾವರಿ ಕಾಮಗಾರಿಗಳನ್ನು ಪುನಃಶ್ಚೇತನಗೊಳಿಸುವುದು. ರಾಜ್ಯದ ಈಗಿರುವ ೨೪ ಲಕ್ಷ ಹೆಕ್ಟೇರ್ ನೀರಾವರಿ ಸಾಮರ್ಥ್ಯವನ್ನು ಮುಂದಿನ ವರ್ಷಗಳಲ್ಲಿ ೪೫ ಲಕ್ಷ ಹೆಕ್ಟೇರ್ ನೀರಾವರಿ ಸಾಮರ್ಥ್ಯಕ್ಕೇರಿಸುವುದು.

(ಉ) ನೀರಾವರಿಯ ಉತ್ತಮ ಬಳಕೆಯಾಗಿದ್ದರೂ ಕರ್ನಾಟಕದ ಹೆಚ್ಚು ಪ್ರದೇಶ ಒಣಭೂಮಿಯಾಗಿಯೇ ಉಳಿದಿದೆ. ತೀರ ಕಡಿಮೆ ಮಳೆ ಬೀಳುವ ಮತ್ತು ಅನಿಶ್ಚಿತ ಮಳೆ ಆಗುವ ಹಾಗೂ ಕಡಿಮೆ ನೀರಾವರಿ ಸೌಕರ್ಯ ಇರುವ ಪ್ರದೇಶಗಳಲ್ಲಿ ಭೂ ಮತ್ತು ತೇವಾಂಶ ಸಂಸ್ಕರಣೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗುತ್ತದೆ.

(ಊ) ಕೃಷಿ ಉತ್ಪನ್ನಗಳ ಬೆಲೆ ನಿಗದಿ ಮಾಡುವಾಗ ಸಮಗ್ರ ಬೇಡಿಗೆ ಮತ್ತು ಪೂರೈಕೆ ಸ್ಥಿತಿಗಳನ್ನು ಪರಿಗಣಿಸುವುದು ರಾಜ್ಯದ ನೀತಿಯಾಗಿದೆ. ಕನಿಷ್ಠ ಬೆಂಬಲ ಬೆಲೆ ಒದಗಿಸುವ ನೀತಿಯೊಂದಿಗೆ ಈ ನೀತಿಯನ್ನು ಸೇರಿಸಲಾಗುವುದು. ಇದು ಕೃಷಿ ಉತ್ಪನ್ನದ ಬೆಲೆ ಏಕಾಏಕಿ ವಿಪರೀತ ಏರಿಳಿಕೆಗಳಾಗದಂತೆ ತಡೆಯುವುದು.

(ಋ) ಕೃಷಿ ಅಭಿವೃದ್ಧಿಗೆ ಮಾರುಕಟ್ಟೆಗಳೇ ಮೂಲವಾಗಿದ್ದು, ಈಗಿರುವ ಮಾರುಕಟ್ಟೆಗಳ ಜೊತೆಗೆ ರೈತರು ಕಡಿಮೆ ಬೆಲೆಗೆ ಮಾರಾಟ ಮಾಡುವುದನ್ನು ಮತ್ತು ಉತ್ಪನ್ನದ ಗುಣಮಟ್ಟ ಕೆಡದಂತೆ ನೋಡಿಕೊಳ್ಳಲು, ಅನುಕೂಲಕರ ಸ್ಥಳಗಳಲ್ಲಿ ವಿಶೇಷ ಮಾರುಕಟ್ಟೆಗಳು ಮತ್ತು ಉಗ್ರಾಣ ಸೌಲಭ್ಯಗಳನ್ನು ಒದಗಿಸುವುದು. ತೋಟಗಾರಿಕೆ, ಪುಷ್ಪ ಮತ್ತು ಮೀನುಗಾರಿಕೆ ಉತ್ಪನ್ನಗಳಿಗೆ ಹವಾನಿಯಂತ್ರಿತ ದಾಸ್ತಾನು ಸೌಕರ್ಯ ಮತ್ತು ಮಾರುಕಟ್ಟೆ ಕೇಂದ್ರಗಳನ್ನು ಒದಗಿಸುವುದು ಮತ್ತು ಕೃಷಿ ಮಾರುಕಟ್ಟೆಗಳ ಮೇಲೆ ಬಿಗಿಯಾದ ಉಸ್ತುವಾರಿ ಮತ್ತು ಮಾಹಿತಿ ವ್ಯವಸ್ಥೆ ಒದಗಿಸುವುದು.

(ೠ) ಸಾರ್ವಜನಿಕ ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿಗೆ ಸಾಕಷ್ಟು ಹಣ ಒದಗಿಸುವುದು, ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದಲ್ಲಿ ಸರಿಯಾದ ಸಂಶೋಧನೆಗೆ ಆದ್ಯತೆ ನೀಡುವುದು ಮತ್ತು ಹೊಸ ತಾಂತ್ರಿಕ ಜ್ಞಾನ ಅಳವಡಿಸಿ ಕೊಳ್ಳಲು ಸಾಂಸ್ಥಿಕ ಚೌಕಟ್ಟನ್ನು ನಿರ್ಮಿಸುವುದು ಈ ಕೃಷಿ ನೀತಿಯ ಕಾರ್ಯಕ್ರಮ ವಾಗಿದೆ. ಕೃಷಿಯಲ್ಲಿ ಸಂಶೋಧನೆ ಕೈಗೊಳ್ಳುವುದಕ್ಕೆ ಹೊಸ ತಂತ್ರಜ್ಞಾನವನ್ನು ಪ್ರಸಾರ ಮಾಡುವುದಕ್ಕೆ ಮತ್ತು ವಿಸ್ತರಣೆ ಕಾರ್ಯಕ್ರಮದ ಮೂಲಕ ರೈತರಿಗೆ

ಶಿಕ್ಷಣ ನೀಡುವುದಕ್ಕೆ ಖಾಸಗಿ ವಲಯಕ್ಕೆ ಪ್ರೋತ್ಸಾಹ ನೀಡುವುದು ಈ ನೀತಿಯ ಧೋರಣೆಯಾಗಿದೆ. ಸಂಶೋಧನೆ ಮತ್ತು ಅಭಿವೃದ್ಧಿಯ ನೀತಿಯ ಪ್ರಕಾರ ರಾಜ್ಯವು ಮೂಲಭೂತವಾದ ಸಂಶೋಧನೆಯ ಮೇಲೆ, ಮುಖ್ಯವಾಗಿ ಜೈವಿಕ ತಂತ್ರಜ್ಞಾನದ ಬಗ್ಗೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿದೆ. ಅಂತೆಯೇ ಅದರ ಬೆಳವಣಿಗೆ, ಪ್ರಸಾರ ಮತ್ತು ವಿಸ್ತರಣೆಯನ್ನು ಹೆಚ್ಚಾಗಿ ಖಾಸಗಿ ವಲಯಕ್ಕೆ ಬಿಡಲಾಗಿದೆ. ಇಷ್ಟೇ ಅಲ್ಲದೆ ಸಾಂಪ್ರದಾಯಿಕ ಧೋರಣೆಯನ್ನು ಬದಿಗಿಟ್ಟು ಕೃಷಿ ತಂತ್ರಜ್ಞಾನವನ್ನು ಮತ್ತು ಬಂಡವಾಳ ಹೂಡಿಕೆಯನ್ನು ಹೈಟೆಕ್ ಕೃಷಿಯಲ್ಲಿ ಸಮ್ಮಿಳಿತಗೊಳಿಸುವ ನೀತಿಗೆ ಒತ್ತು ಕೊಡಲಾಗಿದೆ.

ಈ ಹಿನ್ನೆಲೆಯಲ್ಲಿ ಮೇಲಿನ ವಿಷಯವನ್ನೊಳಗೊಂಡ ಕೃಷಿ ನೀತಿಯನ್ನು ಕರ್ನಾಟಕದ ಗ್ರಾಮೀಣ ಬದುಕನ್ನು ಎಷ್ಟರಮಟ್ಟಿಗೆ ಪ್ರಗತಿ ಪಥದಲ್ಲಿ ಕೊಂಡೊಯ್ಯಬಹುದೆಂದು ವಿವೇಚಿಸಬಹುದು.

ಕರ್ನಾಟಕದ ಕೃಷಿ ನೀತಿ ಮತ್ತು ವಾಣಿಜ್ಯೀಕರಣ

ರಾಜ್ಯದ ಕೃಷಿ ನೀತಿಯು ಕೃಷಿಯನ್ನು ವಾಣಿಜ್ಯೀಕರಣಗೊಳಿಸುವ ಇರಾದೆಯನ್ನು ವ್ಯಕ್ತಪಡಿಸುತ್ತದೆ. ಈ ವಾಣಿಜ್ಯೀಕರಣ ಸದ್ಯದ ಕೃಷಿ ಪದ್ಧತಿಯಲ್ಲಿ ಎಷ್ಟರಮಟ್ಟಿಗೆ ಸಾಧ್ಯವಾದೀತು? ಕರ್ನಾಟಕ ಕೃಷಿಯನ್ನು ತೋಟಗಾರಿಕೆ, ಪುಷ್ಪ ಕೃಷಿ ಮತ್ತು ಮೀನುಗಾರಿಕೆ ಯೆಂದು ಈ ನೀತಿ ಅರ್ಥೈಸುತ್ತದೆ. ತೋಟಗಾರಿಕೆ ಒಂದು ಉತ್ತಮ ಕೃಷಿ ಪದ್ಧತಿ. ಈ ಕೃಷಿಯು ಉತ್ಪನ್ನಗಳ ಮೌಲ್ಯವನ್ನು ಹೆಚ್ಚುಮಾಡುತ್ತದೆ, ಹೆಚ್ಚು ಆದಾಯ ತರುತ್ತದೆ. ಆದರೆ ಹವಾಮಾನ ಮತ್ತು ಭೌಗೋಳಿಕ ಅಂಶಗಳು ಮತ್ತು ನೀರಾವರಿ ಅಡಚಣೆಗಳು ತೋಟಗಾರಿಕೆಯ ವಿಸ್ತರಣೆಯನ್ನು ಮಾಡುವಲ್ಲಿ ಅಡಚಣೆಗಳನ್ನುಂಟುಮಾಡುತ್ತವೆ. ಅಲ್ಲದೆ ವೈಯಕ್ತಿಕವಾಗಿ ರೈತ ಬಂಡವಾಳ ಹೂಡಿ ತೋಟಗಾರಿಕೆ ಮಾಡಲು ಸಂಪನ್ಮೂಲದ ತೊಂದರೆ ಗಳಿರುವುದರಿಂದ, ಖಾಸಗಿ ಕಂಪನಿಗಳು ಮತ್ತು ಬಂಡವಾಳಗಾರರಿಂದ ಮಾತ್ರ ಇದು ಸಾಧ್ಯ ವಾಗುತ್ತದೆ.

ಪುಷ್ಪ ಕೃಷಿ ರಫ್ತೋದ್ಯಮವಾಗಿ ಉತ್ತಮ ಫಲಿತಾಂಶ ನೀಡುವ ಪದ್ಧತಿಯಾದರೂ ಇದು ಹೆಚ್ಚು ಬಂಡವಾಳ ಅಪೇಕ್ಷಿಸುತ್ತದೆ. ಈ ಕೃಷಿಯಲ್ಲಿ ಹೆಚ್ಚು ರಾಸಾಯನಿಕಗಳ ಬಳಕೆ, ಉತ್ಪನ್ನಗಳ ಸಂರಕ್ಷಣೆ, ಸಾಗಾಣಿಕೆ ಮಾರಾಟ ಮತ್ತು ರಫ್ತು ಮಾಡಲು ಬೇಕಾದ ಅವಶ್ಯಕ ಸೌಕರ್ಯಗಳು ಒದಗಬೇಕಾಗುತ್ತದೆ. ಈ ಅವಶ್ಯಕತೆಗಳನ್ನು ರೈತರ ಮಟ್ಟದಲ್ಲಿ ಪೂರೈಸುವ ಶಕ್ತಿ ಮತ್ತು ತಿಳಿವಳಿಕೆ ಕಡಿಮೆ. ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಭಾರೀ ಬಂಡವಾಳ ಹೂಡಬೇಕಾಗುತ್ತದೆ. ಇದರ ಲಾಭವನ್ನು ಕೆಲವೇ ಬಂಡವಾಳವಿರುವವರು ಪಡೆಯುವ ಸಾಧ್ಯತೆಯಿದೆ.

ಮೀನುಗಾರಿಕೆ ಅಭಿವೃದ್ಧಿ ಮೀನುಗಾರರ ಬದುಕಿನ ದೃಷ್ಟಿಯಿಂದ ಉತ್ತಮವಾದ ಕಾರ್ಯಕ್ರಮ ಎನ್ನಿಸಿದರೂ ಕೃಷಿ ನೀತಿಯು ಅರ್ಥೈಸುವ ಮೀನುಗಾರಿಕೆಯ ಭಾರೀ ಬಂಡವಾಳದ ಉದ್ಯಮದಂತಾದರೆ ವೃತ್ತಿಪರ ಮೀನುಗಾರರ ಕೈಯಿಂದ ಈ ಕೃಷಿಯು ದೊಡ್ಡ ಕಂಪನಿ ವ್ಯವಹಾರದ ಉದ್ಯಮವಾಗಿ ಪರಂಪರಾಗತ ಮೀನುಗಾರರು ಹೊರದೂಡಲ್ಪಡುವ ಅಪಾಯ ವಿರುತ್ತದೆ.

ಕೃಷಿ ನೀತಿಯು ರೈತ ಕೇಂದ್ರಿತವಾಗಿರಬೇಕು

ಕೃಷಿ ಮತ್ತು ಕೃಷಿ ಆಧಾರಿತ ಕಸುಬುಗಳ ಬೆಳವಣಿಗೆ ರೈತ ಕೇಂದ್ರಿತವಾಗಿರಬೇಕು. ಭಾರತದ ಇಂದಿನ ಪರಿಸ್ಥಿತಿಯಲ್ಲಿ ಕೃಷಿ ಮತ್ತು ಅದರ ಅವಲಂಬಿತ ಕಸುಬುಗಳಲ್ಲಿನ ಅವಲಂಬನೆ ಸ್ವಾತಂತ್ರ್ಯಾನಂತರದ ೫೪ ವರ್ಷ ಕಳೆದರೂ ಕಡಿಮೆಯಾಗಿಲ್ಲ. ಅಂತಹದ್ದರಲ್ಲೂ ಸಾರ್ವಜನಿಕ ಬಂಡವಾಳ ಹೂಡುವಿಕೆ ತುಂಬಾ ಕಡಿಮೆಯಾಗಿದ್ದು, ಅವಲಂಬನೆ ಜಾಸ್ತಿಯಾಗಿರುವುದರಿಂದ, ಈ ಕ್ಷೇತ್ರ ಅವಲಂಬಿಸಿದವರ ಬದುಕು ದುಸ್ತರವಾಗುತ್ತಿದೆ. ಆದುದರಿಂದ ಈ ಕ್ಷೇತ್ರದ ಯಾವುದೇ ಬೆಳವಣಿಗೆಯ ಸ್ವರೂಪವೂ ಕೃಷಿಕರನ್ನು ಕೇಂದ್ರಿಕರಿಸಿದ್ದೇ ಆಗಬೇಕಿದೆ. ಆದರೆ ಕರ್ನಾಟಕದ ಕೃಷಿ ನೀತಿಯು ಕೃಷಿ ಮತ್ತು ಅದರ ಸಂಬಂಧಿ ಕಸುಬುಗಳನ್ನು ವ್ಯಾಪಾರೋದ್ಯಮವಾಗಿ ಪರಿಗಣಿಸಿ, ಸಾರ್ವಜನಿಕ ಬಂಡವಾಳ ಹೂಡುವಿಕೆಯಿಂದ ತಪ್ಪಿಸಿಕೊಂಡು ಖಾಸಗೀ ಕ್ಷೇತ್ರದ ಬಂಡವಾಳಕ್ಕೆ ಮತ್ತು ಅದರ ಮೂಲಕ ಅಭಿವೃದ್ಧಿಗೆ ಒತ್ತುಕೊಡುತ್ತದೆ. ಇದು ಈ ಕ್ಷೇತ್ರದ ಅಭಿವೃದ್ಧಿಯಲ್ಲಿ ರೈತರನ್ನು ಕೇಂದ್ರವಾಗಿಸದೆ ಲಾಭ, ರಫ್ತು ದಕ್ಷತೆಯನ್ನು ಮುಂದುಮಾಡಿ, ಪರಂಪರಾಗತ ಅವಲಂಬಿತರನ್ನು ಈ ಕ್ಷೇತ್ರದಿಂದ ಹೊರದೂಡುವ ಪ್ರಕ್ರಿಯೆಯಾಗಿರುತ್ತದೆ.

ಹೊಸ ಆರ್ಥಿಕ ನೀತಿಯ ಹಿನ್ನೆಲೆಯಲ್ಲಿ, ಕೃಷಿ ಆಧುನೀಕರಣವನ್ನು ಜೈವಿಕ ತಂತ್ರಜ್ಞಾನ ಎಂದು ಅರ್ಥೈಸಿದರೆ ಈ ಕ್ಷೇತ್ರದ ಉಳಿವು ಮತ್ತು ರೈತನ ಉಳಿವಿಗೆ ಮಾರಕವಾಗುತ್ತದೆ. ಖಾಸಗಿ ಮತ್ತು ವಿದೇಶಿ ಬಂಡವಾಳಿಗರು ಜೈವಿಕ ತಂತ್ರಜ್ಞಾನದ ಮೂಲಕ ಇಡೀ ಕೃಷಿಯನ್ನು ಮತ್ತು ಸಂಬಂಧಿತ ಕಸುಬುಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಹುನ್ನಾರವಾಗಿರುತ್ತದೆ. ಈ ಪ್ರಕ್ರಿಯೆಯನ್ನು ಸುಲಭವಾಗಿಸಲು ಗ್ಯಾಟ್ ಒಪ್ಪಂದದ ಬೌದ್ಧಿಕ ಸನ್ನದು ಹಕ್ಕು (Intellectual Property rights)ನ್ನು ಅಂತರರಾಷ್ಟ್ರೀಯ ಕಾನೂನನ್ನಾಗಿಸಿ ಆ ಮೂಲಕ ಬಹುಸಂಖ್ಯಾತರ ಬದುಕಾದ ಕೃಷಿಯನ್ನು ನಂತರ ಒಂದು ದೇಶದ ಆಹಾರ ಭದ್ರತೆ (Food security)ಯನ್ನು ವಿದೇಶ ಬಂಡವಾಳಿಗರ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಕಪಿಮುಷ್ಟಿಗೆ ಸಿಲುಕಿಸುವ ತಂತ್ರವೂ ಆಗುತ್ತದೆ. ಆದುದರಿಂದ ಭಾರತದ ಕೃಷಿ ಮತ್ತು ಕರ್ನಾಟಕದ ಕೃಷಿ ಬೆಳವಣಿಗೆಯು ಸಾರ್ವಜನಿಕ ಬಂಡವಾಳ ಹೂಡುವಿಕೆ, ಸಂಶೋಧನೆ, ತಂತ್ರಜ್ಞಾನ ಅಭಿವೃದ್ಧಿ ಸಾರ್ವಜನಿಕ ಸಂಸ್ಥೆಗಳ ಮೂಲಕವೂ, ನವೀಕರಿಸಿದ ಕೃಷಿ ಪದ್ಧತಿಗಳಿಂದಲೂ ರೈತ ಕೇಂದ್ರಿತ ಬೆಳವಣಿಗೆಯಾಗಬೇಕಾದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಸರ್ಕಾರ ಕೃಷಿ ಬಂಡವಾಳವನ್ನು ಸಾರ್ವಜನಿಕ ಸಂಸ್ಥೆಗಳ ಮೂಲಕ ವ್ಯವಸ್ಥೆಗೊಳಿಸಬೇಕು.

ಕೃಷಿ ಅಭಿವೃದ್ಧಿಗೆ ಬೇಕಾದ ಸಂಶೋಧನೆ, ತಂತ್ರಜ್ಞಾನವನ್ನು ಅದು ಜೈವಿಕ ತಂತ್ರಜ್ಞಾನವಾದರೂ ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಭಾರತ ಕೃಷಿ ಅನುಸಂಧಾನ ಸಂಶೋಧನಾ ಮಂಡಳಿಗಳ ಮೂಲಕ ಒದಗಿಸಬೇಕು. ನೀಡಿಕೆ, ಬೇಡಿಕೆಯನ್ನಾಧರಿಸಿದ ಉತ್ಪನ್ನಗಳ ಬೆಲೆ ನೀತಿಯಿಂದ ತತ್ತರಿಸಿರುವ ರೈತರಿಗೆ ವೆಚ್ಚ ಲಾಭವನ್ನಾಧರಿಸಿದ ವೈಜ್ಞಾನಿಕ ಬೆಲೆ ನಿಗದಿ ಮತ್ತು ಅದೇ ಬೆಲೆಯಲ್ಲಿ ಮಾರಾಟವಾಗುವಂತೆ ಮಾಡುವ ಮಾರುಕಟ್ಟೆ ವ್ಯವಸ್ಥೆ ಮಾಡಬೇಕು. ಈ ಮೂಲಕ ಕೃಷಿ ಕ್ಷೇತ್ರವನ್ನು ಸುಸ್ಥಿರಗೊಳಿಸಿ, ಅದನ್ನು ಅವಲಂಬಿಸಿರುವ

ರೈತರ ಒಳ್ಳೆಯ ಬದುಕಿಗೆ ನಾಂದಿಯಾಗಬೇಕು. ಇದರಿಂದ ರಾಜ್ಯದ, ದೇಶದ ಆಹಾರ ಭದ್ರತೆ ಸಾಧ್ಯವಾಗುತ್ತದೆ. ಇದು ಕರ್ನಾಟಕದ ಕೃಷಿ ನೀತಿಯಾಗಬೇಕು. ಅಖಿಲ ಭಾರತ ಮಟ್ಟದಲ್ಲಿ ೧೯೪೭ ರಿಂದಲೂ ಕೃಷಿ ನೀತಿ ಪ್ರಕಟಿಸುತ್ತೇವೆ ಎಂದು ಹೇಳುತ್ತಿದ್ದರೂ ಇದುವರೆಗೆ ಪ್ರಕಟವಾಗಲಿಲ್ಲ. ಯಾವುದೇ ಕೃಷಿ ನೀತಿ ಎಂದರೂ ಅದು ರೈತ ಕೇಂದ್ರಿತವಾಗಿದ್ದಾಗ ಮಾತ್ರ ಸಾರ್ಥಕತೆ ಪಡೆಯುತ್ತದೆ.

ಪರಾಮರ್ಶೆ

1. Draft Agricultural policy Resolution, Govt of Karnataka, State planning board, July, 1995.
2. ಕರಡು ಕೃಷಿ ನೀತಿ ನಿರ್ಣಯ, ಕರ್ನಾಟಕ ಸರ್ಕಾರ, ರಾಜ್ಯಯೋಜನಾ ಮಂಡಳಿ ಜುಲೈ, 1995.
3. Deccan herld, 6 Feb, 2000, p.3.
4. Presidential address of Indian Economic Association by Dr. D.M. Nanjundappa, Dos in Economics, Jabalpur University, Jabalpur M.P. 1977, Dec.

ಸಮಾಜ, ಸಂಸ್ಕೃತಿ ಮತ್ತು ಭಾಷೆ

ಡಾ. ಸೋಮಶೇಖರ ಗೌಡ

ಸಮಾಜ - ಸಂಸ್ಕೃತಿ - ಭಾಷೆ ಇವು ಮೂರೂ ಬಿಡಿಬಿಡಿಯಾಗಿ ನೋಡಿದಾಗ, ಇಡಿಯಾಗಿ ನೋಡಿದಾಗ ವಿಶ್ಲೇಷಣೆಯ ಆಯಾಮಗಳನ್ನು ಲಂಘಿಸುತ್ತವೆ. ಒಂದು ಸಮುದ್ರವನ್ನು ನೋಡಿದಾಗ ಆಗುವ ಅನುಭವ ವಿಸ್ಮಯ, ಒಂದು ಸಮಾಜ ಸಂಸ್ಕೃತಿ ಮತ್ತು ಭಾಷೆಯನ್ನು ನೈಜವಾಗಿ ದರ್ಶಿಸಿದಾಗ ಕೂಡ ಆಗುತ್ತದೆ. ಸಮುದ್ರದ ಆಳ ಮತ್ತು ವಿಸ್ತಾರವನ್ನು ಬರಿಗಣ್ಣಲ್ಲಿ ಹೇಗೆ ಅಳೆಯುವುದು ಸಾಧ್ಯವಿಲ್ಲವೋ ಹಾಗೆಯೇ ಭಾಷೆ ಸಮಾಜ ಸಂಸ್ಕೃತಿಗಳನ್ನು ಏಕಮುಖವಾದ ಒಂದೇ ಅಧ್ಯಯನ ಶಿಸ್ತಿಗೆ ಒಳಪಡಿಸಿ ವಿಶ್ಲೇಷಿಸುವುದು ಕಷ್ಟ, ದುಸ್ತರ. ಇಂಥ ವಿಷಯಗಳ ಜಿಜ್ಞಾಸೆ, ಚರ್ಚೆಗೆ ನಿಂತಾಗ ಖಚಿತ ಅಭಿಪ್ರಾಯಗಳು ಮೂಡುವುದಕ್ಕಿಂತ ಸಂದೇಹಗಳು, ಸಮಸ್ಯೆಗಳು ಎಡತಾಕುವುದೇ ಹೆಚ್ಚು;ಉತ್ತರಗಳು ಹೊರಡುವುದಕ್ಕಿಂತ ಪ್ರಶ್ನೆಗಳು ಉದ್ಭವಿಸುವುದೇ ಹೆಚ್ಚು.

ಭಾಷೆಯನ್ನು ಕುರಿತು ಭಾಷಾ ವಿಜ್ಞಾನಿಗಳು, ಸಮಾಜವನ್ನು ಕುರಿತು ಸಮಾಜಶಾಸ್ತ್ರಜ್ಞರು, ಸಂಸ್ಕೃತಿಯನ್ನು ಕುರಿತು ಮಾನವಶಾಸ್ತ್ರಜ್ಞರು ಶಾಸ್ತ್ರೀಯವಾಗಿ ಅಧ್ಯಯನ ನಡೆಸಿ ವಿಶ್ಲೇಷಣೆ ಮಾಡಿದ್ದರೂ, ಈ ಶಿಸ್ತುಗಳ ಅಧ್ಯಯನ ವಿಷಯ ಈ ವಿಶ್ಲೇಷಕರ ಅಧ್ಯಯನದ ಗಡಿಗಳನ್ನು ದಾಟಿ ಚಾಚಿಕೊಂಡಿರುವುದು, ಏಕಕಾಲಕ್ಕೆ ಅಧ್ಯಯನಗಳ ಮಿತಿಯನ್ನು, ವಿಷಯದ ಗಹನತೆಯನ್ನು ಎತ್ತಿ ತೋರಿಸುತ್ತಿದೆ. ಹಲವಷ್ಟು ಸಮಸ್ಯೆಗಳಿಗೆ ತಮ್ಮ ತಮ್ಮ ನೆಲೆಯಲ್ಲಿ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲರಾದ ಈ ತಜ್ಞರು ತಮ್ಮ ನೆರವಿಗಾಗಿ ಇತರ ಶಿಸ್ತುಗಳತ್ತ ಕೈಚಾಚಿ ನಿಂತದ್ದು ಗಮನಾರ್ಹ ಸಂಗತಿ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಅಂತಃಶಿಸ್ತೀಯ ಅಧ್ಯಯನಗಳಿಗೆ (interdisciplinary studies) ಹೆಚ್ಚಿನ ಮನ್ನಣೆ ಪ್ರಾಪ್ತವಾಗುತ್ತಿದೆ.

ಸಪೀರ್, ವ್ರೋರ್ಫ್, ಹೈಮ್ಸ್, ಗುಂಪರ್ಜ್, ಬರ್ನ್‌ಸ್ಟೈನ್, ಲೆವಿಸ್ಟ್ರಾಸ್, ಡಂಡೆಸ್ ಮುಂತಾದ ವಿದ್ವಾಂಸರು ಏಕಕಾಲದಲ್ಲಿ ಅನೇಕ ವಿಷಯಗಳ ಪರಿಣತಿ ಸಂಪಾದಿಸಿ ಪ್ರಸ್ತುತದ ಸಮಾಜ, ಸಂಸ್ಕೃತಿ, ಭಾಷೆಯ ಅನೇಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತಿದ್ದಾರೆ. ೧೯೫೨ರಿಂದ ಈಚೆಗೆ ಭಾಷಾವಿಜ್ಞಾನದಿಂದ ಹೊರಹೊಮ್ಮಿದ 'ಸಾಮಾಜಿಕ ಭಾಷಾ ವಿಜ್ಞಾನ' (Sociolinguistis) ಸಮಾಜ, ಸಂಸ್ಕೃತಿ ಮತ್ತು ಭಾಷಾ ಸಂಬಂಧಿ ವಿಷಯಗಳನ್ನೇ ತನ್ನ ಅಧ್ಯಯನದ ವಸ್ತುವನ್ನಾಗಿಸಿಕೊಂಡಿದೆ. ಭಾಷೆಯೊಂದೇ ಉತ್ತರಿಸಲಾಗದ, ಸಮಾಜ ವೊಂದೇ ನಿರ್ಧರಿಸಲಾಗದ, ಸಂಸ್ಕೃತಿಯೊಂದೇ ವಿವರಿಸಲಾಗದ ಆದರೆ ಈ ಮೂರೂ ನೆಲೆಗಳಲ್ಲಿ ಹರಡಿಕೊಂಡಿರುವ ಸಮಸ್ಯೆಗಳಿಗೆ ಸಾಮಾಜಿಕ ಭಾಷಾ ವಿಜ್ಞಾನ ಸೂಕ್ತ ಉತ್ತರ, ವಿವರ, ಪರಿಹಾರ ನೀಡುವಲ್ಲಿ ಯಶಸ್ವಿಯಾಗಿದೆ;ಅಂತಃಶಿಸ್ತೀಯ ಅಧ್ಯಯನದ ಅಪರಂಜಿಯಾಗಿದೆ

'Language is a system of arbitrary vocal symbols by means of which a social group co-operates ಎನ್ನುವ ಬ್ಲಾಕ್ ಮತ್ತು ಟ್ರಾಗರ್ ವ್ಯಾಖ್ಯೆಯಾಗಲಿ, 'Language is a social fact' ಎಂಬ ಸಸ್ಸೂರನ ಮಾತಾಗಲಿ ; 'Language is not only an element of culture, it is the basis for all cultural activities' ಎಂಬಂಥ ಕ್ರೋಬರ್‌ನ ಹೇಳಿಕೆಯಾಗಲೀ, ಭಾಷೆ - ಸಮಾಜ ಮತ್ತು ಸಂಸ್ಕೃತಿಯೊಡನೆ ಇಟ್ಟುಕೊಂಡಿರುವ ನಿಕಟ ಸಂಬಂಧವನ್ನು ಸಾರಿಸಾರಿ ಹೇಳುತ್ತಿವೆ.

'Society is a web of social relationship. It is knitted through language' ಎನ್ನುವ ಮಾತಿದೆ. ಸಮಾಜ ಮಾನವ ಸಂಬಂಧಗಳ ಹೆಣಿಕೆಯಾದರೆ, ಇದನ್ನು ಹೆಣೆದ ಮಾಂತ್ರಿಕ ಶಕ್ತಿ ಭಾಷೆ ಎನ್ನುತ್ತಾರೆ ಸಮಾಜಶಾಸ್ತ್ರಜ್ಞರು. 'What people do and think is their culture. Language is the replica of culture' ಎಂಬ ಸಂಸ್ಕೃತಿಯನ್ನು ಕುರಿತ ಸರಳ ವಿವರಣೆಯಲ್ಲಿ 'ಜನರ ದೈಹಿಕ ಹಾಗೂ ಮಾನಸಿಕ ಚಟುವಟಿಕೆಗಳೇ ಅವರ ಸಂಸ್ಕೃತಿ. ಅದು ಭಾಷೆಯಲ್ಲಿ ಪ್ರತೀಕಗೊಳ್ಳುತ್ತದೆ' ಎಂಬ ಅಂಶ ಸ್ಪಷ್ಟವಿದೆ.

ಹೀಗೆ, ವ್ಯಾಖ್ಯೆ ಅಥವಾ ವಿವರಣೆ ಭಾಷೆಯದೇ ಇರಲಿ, ಸಮಾಜದ್ದೇ ಇರಲಿ ಅಥವಾ ಸಂಸ್ಕೃತಿಯದೇ ಇರಲಿ, ಅದರಲ್ಲಿ ಇವು ಮೂರಕ್ಕೂ ಸಮಪಾಲು ಇರುವುದನ್ನು ಮೇಲಿನ ಉದ್ಧೃತ ಹೇಳಿಗಳು ಖಚಿತಪಡಿಸಿವೆ. ಭಾಷೆಯನ್ನು ಬಿಟ್ಟು ಸಮಾಜ, ಸಮಾಜವನ್ನು ಬಿಟ್ಟು ಸಂಸ್ಕೃತಿ, ಇವೆರಡನ್ನೂ ಬಿಟ್ಟು ಭಾಷೆ ಇದನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಯಾವಾಗಲೂ ಇವು ಒಂದರಜೊತೆಗೆ ಇನ್ನೊಂದು ತಳುಕು ಹಾಕಿಕೊಂಡೇ ಉಳಿಯುವಂಥವು; ಬೆಳೆಯುವಂಥವು.

ಭಾಷೆಯಲ್ಲಿ ಏನೋ ಪರಿವರ್ತನೆ, ಬದಲಾವಣೆ ಆಗಿದೆ ಎಂದರೆ ಅದಕ್ಕೆ ಕಾರಣ ಸಮಾಜದಲ್ಲಾದ ಬದಲಾವಣೆ, ಸಂಸ್ಕೃತಿಯಲ್ಲಾದ ಪರಿವರ್ತನೆ. ಈ ಸತ್ಯ ಅರಿತೇ ವಿಲಿಯಂ ಬ್ರೈಟ್ ' Linguistic variations are not infact free, they are correlated with systematic changes in the Social structure' ಎಂದು ಹೇಳಿದ್ದು. ಉದಾಹರಣೆಗೆ, ಎರಡನೇ ಮಹಾಯುದ್ಧದ ತರುವಾಯ ರಷ್ಯನ್ ಸಮಾಜದಲ್ಲಿ ಅವಿಭಕ್ತ ಕುಟುಂಬಗಳು (Joint families) ಕರಗಿ ವಿಭಕ್ತ ಕುಟುಂಬಗಳು (Nuclear families) ರೂಪಗೊಂಡವು. ಇದರಿಂದಾಗಿ ಬಂಧುತ್ವ ಪರಿಭಾಷೆಯಲ್ಲಿ ಸಾಕಷ್ಟು ಬದಲಾವಣೆಯುಂಟಾಯಿತು. 'Shurin' (ಅತ್ತಿಗೆ) ಅನ್ನುವ ಒಂದು Unique word ಒಡೆದು 'Brats-ne' (ಅಣ್ಣನ ಹೆಂಡತಿ) ಅನ್ನುವ ಪದಪುಂಜವಾಗಿ ಒಡೆದುಕೊಂಡಿತು. ಇಲ್ಲಿ 'ಅತ್ತಿಗೆ' ಎನ್ನುವ ವಿಶಿಷ್ಟ ಪದಕ್ಕೆ ಇರುವ ಸಂಬಂಧದ ಗಾಢತೆ 'ಅಣ್ಣನ ಹೆಂಡತಿ' ಎನ್ನುವ ಪದಪುಂಜಕ್ಕೆ ಇಲ್ಲದಿರುವುದು ಸ್ಪಷ್ಟ. ಹೀಗೆ ಸಂಬಂಧದ ಹಾರ್ದಿಕತೆ, ಸಾಮಾಜಿಕ ಕ್ರಾಂತಿಯಿಂದಾಗಿ ಶಿಥಿಲಗೊಂಡದ್ದು ನೇರವಾಗಿ ಭಾಷೆಯಲ್ಲಿ ಕೂಡ ಕಾಣಿಸಿಕೊಂಡಿದೆ. ಸಾಮಾಜಿಕ ಸಂಬಂಧಗಳ ಗಾಢತೆ ಯಾವಾಗಲೂ ಆ ಸಮಾಜದ ಜನರ ಭಾಷೆಯ Kinship terminology ಯಲ್ಲಿ ಸಾಂದ್ರವಾಗಿ ಇರುತ್ತದೆ. ಹೀಗಾಗಿ ಬಂಧುತ್ವದ ಪದಗಳು ಭಾಷೆಗೆ ಬಂಧುರತೆಯನ್ನು ತಂದುಕೊಡುತ್ತವೆ. ಒಂದೊಂದು ಪದವೂ ಒಂದೊಂದು ವಿಶಿಷ್ಟ

ಸಂಬಂಧದ ನೆಲಗಣ್ಣುಗಳಾಗಿರುತ್ತವೆ. ಒಂದು ಪದದಲ್ಲಿ ಅಭಿವ್ಯಕ್ತವಾಗುವ ಈ ಸಂಬಂಧ ಎರಡು ಪದಗಳಲ್ಲಿ ಅಥವಾ ಪದಪುಂಜದಲ್ಲಿ ವ್ಯಕ್ತವಾದರೆ ಅದು ಸಮಾಜದಲ್ಲಿ ಬಂಧುತ್ವದ ಬಿರುಕನ್ನು ಪ್ರತಿಫಲಿಸುತ್ತದೆ. ಕನ್ನಡದ ಅತ್ತೆ, ಮಾವ, ಭಾವ, ಅಣ್ಣ, ಅಕ್ಕ ಇತ್ಯಾದಿ ಪದಗಳಿಗೆ ಇಂಗ್ಲಿಷ್‌ನ Mother-in-law, Father-in-law, Brother-in-law, Elder brother, Elder sitster ಇತ್ಯಾದಿ ಸಂಬಂಧಸೂಚಿ ಪದಗಳನ್ನು ಹೋಲಿಸಿ ನೋಡಿದಾಗ ಆಯಾ ಸಮಾಜದಲ್ಲಿ ಇರುವ ಸಂಬಂಧಗಳ ಹಾರ್ದಿಕತೆ ಮನದಟ್ಟಾಗುತ್ತದೆ. 'ಅಳಿಯ ಅಲ್ಲ ಮಗಳ ಗಂಡ' ಇದೊಂದು ಕನ್ನಡದ ರೂಢಿ ಮಾತು. 'ಅಳಿಯ' ಅಂದರೂ ಒಂದೇ 'ಮಗಳ ಗಂಡ' ಅಂದರೂ ಒಂದೇ ಎಂಬುದಿಲ್ಲಿನ ಮೇಲ್ನೋಟದ ಅರ್ಥ. ಆದರೆ, ಹೆಣ್ಣುಕೊಟ್ಟ ಅತ್ತೆ ಹಾಗೂ ಮಾವ ನೇರವಾಗಿ 'ಅಳಿಯ' ಎಂದು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಅಳಿಯನಾದವನು ಈಗ ಇಲ್ಲ. ಆತ ಅಷ್ಟರಮಟ್ಟಿಗೆ ಅವರ ಬೇಸರಕ್ಕೆ, ಉದಾಸೀನಕ್ಕೆ, ಆಕ್ರೋಶಕ್ಕೆ ತುತ್ತಾಗಿದ್ದಾನೆ. ಹೆಣ್ಣು ಕೊಟ್ಟ ಕಾರಣಕ್ಕಾಗಿ ಈಗ ಅನಿವಾರ್ಯವಾಗಿ ಅವರು ಅವನನ್ನು ಮಗಳ ಗಂಡ ಎಂದು ಹೇಳಬೇಕಾದ ಸ್ಥಿತಿಯಲ್ಲಿ ಇದ್ದಾರೆ. ಸಂಬಂಧಗಳು ಹದಗೆಟ್ಟ ಸೂಚನೆ ಈ ರೂಢಿಮಾತಿನಲ್ಲಿ ಧ್ವನಿಸಿದೆ ಎಂದು ಸಾಮಾಜಿಕ ಭಾಷಾವಿಜ್ಞಾನಿಗಳು ಅರ್ಥೈಸುತ್ತಾರೆ. ಸಮಾಜದ ಇಂಥ ಸೂಕ್ಷ್ಮ ವಿಚಾರಗಳನ್ನು ಭಾಷೆ ತನ್ನ ಗರ್ಭದಲ್ಲಿ ಅಡಗಿಸಿಕೊಂಡು ತನ್ನ ರಚನೆಯಲ್ಲಿ ಎರಕಹುಯ್ಯುತ್ತದೆ. ಅದನ್ನು ಸಮರ್ಥವಾಗಿ ಸಾಮಾಜಿಕ ಭಾಷಾವಿಜ್ಞಾನ ಒರೆಹಚ್ಚಿ ನೋಡುತ್ತಿದೆ.

ಉಪಭಾಷಾವಿಜ್ಞಾನ ಕುಡಿಯೊಡೆಯುವವರೆಗೂ ಆಡುಮಾತಿಗೆ ಭಾಷೆಯ ಅಧ್ಯಯನದಲ್ಲಿ ಸ್ಥಾನ ಇರಲಿಲ್ಲ. ಹಿಂದಿನ ವಿದ್ವಾಂಸರಿಗೆ ಆಡುಮಾತು ನೀರಮೇಲಣ ಗುಳ್ಳೆಯಂತೆ ನಶ್ವರ ಎಂಬ ಭಾವನೆ ಇತ್ತು. ಶಾಶ್ವತ ಎಂಬ ಭ್ರಮೆ ಅಕ್ಷರಸ್ಥ ಅಥವಾ ಗ್ರಂಥಸ್ಥ ಭಾಷೆಯ ಬಗೆಗೆ ಇದ್ದು, ಬರಹದ ಭಾಷೆಗೇ ಅಧ್ಯಯನದಲ್ಲಿ ಮನ್ನಣೆ ಪ್ರಾಪ್ತವಾಗಿತ್ತು. ಹೀಗಾಗಿ, ವಿದ್ಯಾವಂತರ, ಓದುಬರಹಬಲ್ಲವರ, ಸಾಮಾನ್ಯವಾಗಿ ಮೇಲ್ವರ್ಗದವರ ಭಾಷೆಗೆ ಮಾತ್ರ ಅಧ್ಯಯನ ಸವಲತ್ತು ಲಭ್ಯವಾಗಿತ್ತು. ಕಾವ್ಯ, ಮೀಮಾಂಸೆ, ವ್ಯಾಕರಣ ನಿಘಂಟುಗಳು ಬರೆಹದ ಭಾಷೆಯನ್ನು ಅವಲಂಬಿಸಿಯೇ ಸಿದ್ಧವಾದವು. ಮಾತು ಮೊದಲು ಬರಹ ಆಮೇಲೆ (Speech is primary, writing is Secondary) ಎನ್ನುವ ಸತ್ಯ ಮನವರಿಗೆ ಆಗುವವೇಳೆಗೆ ಶತಮಾನಗಳೇ ಕಳೆದುಹೋದವು. ಬಹುಸಂಖ್ಯಾತರ ಆಡುನುಡಿ ಅವಜ್ಞೆಯ ಕತ್ತಲಲ್ಲಿ ಅಸ್ತಿತ್ವ ಇಲ್ಲದೆ ಉಳಿಯಿತು.

ಆಡುನುಡಿಯ ನೆಲೆಗಟ್ಟಿನ ಮೇಲೆ ಭಾಷಾವಿಜ್ಞಾನ ಬೇರುಬಿಟ್ಟಿತು. ಆಡುನುಡಿಯನ್ನು ಸಂರಕ್ಷಿಸುವ, ಸಂಗ್ರಹಿಸಿ ವಿಶ್ಲೇಷಿಸುವ, ಸಾಮಗ್ರಿಸಲಕರಣೆಗಳು ತತ್ವ ವಿಧಾನಗಳು ಭಾಷಾವಿಜ್ಞಾನದಲ್ಲಿ ಆವಿಷ್ಕಾರಗೊಂಡವು. ಇದರಿಂದಾಗಿ ಭಾಷಾ ಅಧ್ಯಯನಗಳು, ಸಂಶೋಧನೆಗಳು, ಓದು ಬರೆಹ ಬಾರದ ಗ್ರಾಮೀಣ ಜನರಕಡೆಗೆ, ಪರಿಶಿಷ್ಟ ಜಾತಿ, ವರ್ಗ, ಬುಡಕಟ್ಟಿನ ಜನರ ಕಡೆಗೆ ಮುಖಮಾಡಿದವು. ಅಲ್ಲಿಯವರೆಗೆ ಅವಜ್ಞೆಗೊಳಗಾಗಿದ್ದ ಆಡುನುಡಿಯ ಲೋಕದಲ್ಲಿ ಭಾಷಾವಿಜ್ಞಾನ ಭಾಸ್ಕರ ಬೆಳಗತೊಡಗಿದೆ. ಭಾಷಾವಿಜ್ಞಾನಿಗಳು ನಡೆಸಿದ ಕ್ಷೇತ್ರಕಾರ್ಯದ ಫಲದಿಂದ ಈ ಮೂಲಗಳ ಅನನ್ಯ ಭಾಷಿಕದತ್ತ ಸಂಗ್ರಹಣೆ ಯಾಯಿತು. ಭಾಷಾವೈಜ್ಞಾನಿಕ ವಿಶ್ಲೇಷಣೆಗಳು ಸಂಗ್ರಹಿತ ದತ್ತದ ಭಾಷಾ ಸಾಮರ್ಥ್ಯವನ್ನು

ಅನಾವರಣಗೊಳಿಸಿದವು. ಅಪಾರ ಸಂಖ್ಯೆಯ ವಿವರಣಾತ್ಮಕ ವ್ಯಾಕರಣಗಳು ಹೊರಬಂದವು.

ಉಪ ಭಾಷಾವಿಜ್ಞಾನ, ಹೆಚ್ಚಾಗಿ ಪ್ರಾದೇಶಿಕ ನೆಲೆಯಲ್ಲಿ ವಿಜೃಂಭಿಸಿತು. ಸಾಮಾಜಿಕ ಉಪಭಾಷೆಗಳು, ಉಪಭಾಷೆಗಳೇ ಅಲ್ಲ ಎಂಬ ತಿಳಿಗೇಡಿ ನಿಲುವೂ ವ್ಯಕ್ತವಾಯಿತು. ಆದರೆ ಬಹುಬೇಗ ಈ ಧೋರಣೆ ಬದಲಾಯಿತು. ಸಾಮಾಜಿಕ ಉಪಭಾಷೆಗಳ ಮಹತ್ವ ಅರಿವಿಗೆ ಬಂದಿತು. ಈ ನಿಟ್ಟಿನಲ್ಲಿ ಪಾಶ್ಚಾತ್ಯ ವಿದ್ವಾಂಸರ ಕೊಡುಗೆ ಕಣ್ಣು ತೆರೆಸಿತು. ಭಾಷೆಯ ಸಾಮಾಜಿಕ ಅಂಶಗಳನ್ನು ಕಲೆಹಾಕುವಲ್ಲಿ ವಕ್ತೃಗಳನ್ನು, ಪ್ರತಿವಕ್ತರು ಅಥವಾ ಭಾಷಾ ಸೂಚಕರನ್ನು ಬ್ರಾಹ್ಮಣ-ಅಬ್ರಾಹ್ಮಣ ಮತ್ತು ಶೂದ್ರ (Brahmin-Non brahmin-Harijan) ಎಂಬ ತ್ರಿವಿಧ ವರ್ಗೀಕರಣಕ್ಕೆ ಒಳಪಡಿಸಲಾಯಿತು. ಜೊತೆಗೆ, ಗ್ರಾಮಮುಖಿ ಅಧ್ಯಯನಗಳಿಗಿಂತ ಭಿನ್ನವಾದ ನಗರಗಳ ಭಾಷೆ (Urban dialect) ಕಡೆಗೂ ಒತ್ತು ಬಿತ್ತು. ಪ್ರಾದೇಶಿಕ ದೂರ ಮತ್ತು ಪ್ರತಿಬಂಧಕಗಳಿಗಿಂತ ಸಾಮಾಜಿಕ ದೂರ ಮತ್ತು ಪ್ರತಿಬಂಧಕಗಳು ಹೆಚ್ಚು ಪ್ರಸ್ತುತವಾದವು. ನಗರಭಾಷೆಯ ವೈವಿಧ್ಯತೆ ವಿವಿಧ ಸಾಮಾಜಿಕ ಪ್ರತಿಬಂಧಕಗಳನ್ನಾಧರಿಸಿ (Social Parameters) ಅನಾವರಣಗೊಳ್ಳತೊಡಗಿತು. ಸಮಾಜದ ಜಾತಿ, ವರ್ಗಗಳಿಗೆ ಸರಿಸಾಟಿಯಾಗಿ ಲಿಂಗಭೇದ, ಆರ್ಥಿಕಸ್ಥಿತಿಗತಿ, ವಯಸ್ಸು, ವಿದ್ಯೆ ಇತ್ಯಾದಿಗಳು ಸಂಶೋಧನೆಯ ದಿಕ್ಸೂಚಿಗಳಾದವು. ಭಾಷೆಯ ಸಾಮಾಜಿಕ ಪರಿಸರವನ್ನು ಗುರುತಿಸುವಲ್ಲಿ ನೆರವಾದವು. ಆಡುಗ, ಕೇಳುಗ ಮತ್ತು ಮಾತಿನ ಪರಿಸರ (Sender- Receiver and Setting) ಸಂಶೋಧನೆಯಲ್ಲಿ ಗಣನೀಯ ಫಲಿತಾಂಶ ನೀಡಿದವು.

ಹೀಗೆ, ಕೇವಲ ಗ್ರಂಥಸ್ಥ ಸಾಮಗ್ರಿಗೆ ಸೀಮಿತವಾಗಿದ್ದ ಭಾಷೆಯ ಅಧ್ಯಯನ ಇಂದು ತನ್ನ ಎಲ್ಲ ರಚನಾತ್ಮಕ ಚೌಕಟ್ಟಿನ ವ್ಯಾಪ್ತಿಯಲ್ಲಿ, ಬಳಕೆಯ ಇತಿಮಿತಿಯಲ್ಲಿ ಸಾಂದರ್ಭಿಕ ಪರಿಸರದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಬೀಳಲುಗಳೊಡನೆ ಬೆಸೆದುಕೊಂಡಿದೆ. 'Language is uniform, homogenous and monolithic in nature' ಎಂಬ ಸಂರಚನಾವಾದಿಗಳ ವಿಚಾರವನ್ನು, ಭಾಷೆಯ heterogenity ಯನ್ನು ತೋರಿಸಿಕೊಡುವ ಮೂಲಕ ಸಾಮಾಜಿಕ ಭಾಷಾವಿಜ್ಞಾನಿಗಳು ಪ್ರತಿರೋಧಿಸಿದ್ದಾರೆ. ಏನೇ ಇರಲಿ, 'There is no language without a grammer;There is no Society without a structure' ಎಂಬ ಈ ಮಾತು ಹೆಚ್ಚು ಅರ್ಥಪೂರ್ಣವಾಗಿದೆ. ಧ್ವನಿ, ಪದ, ವಾಕ್ಯ, ಅರ್ಥ ಎಂಬ ವ್ಯಾಕರಣಾತ್ಮಕ ರಚನೆ ಭಾಷೆಗಿದ್ದರೆ ; ಜಾತಿ, ಮತ, ಧರ್ಮ, ಲಿಂಗ, ವರ್ಗ, ಕಾನೂನು ಕಟ್ಟಳೆ ಮುಂತಾದ ರಚನೆ ಸಮಾಜಕ್ಕಿದೆ. ಅಂದರೆ, ಭಾಷೆಗೂ ರಚನೆ ಇದೆ. ಸಮಾಜಕ್ಕೂ ರಚನೆ ಇದೆ. ಹೀಗೆ ಇವೆರಡಕ್ಕೂ ರಚನೆ ಎನ್ನುವುದು ಇರುವುದರಿಂದಲೇ ಇವೆರಡನ್ನು ಪರಸ್ಪರ ಸಹಸಂಬಂಧಿ ತತ್ವದ (Correlational theory) ಹಿನ್ನೆಲೆಯಲ್ಲಿ ಸಾಮಾಜಿಕ ಭಾಷಾವಿಜ್ಞಾನಿಗಳು ವಿಶ್ಲೇಷಿಸುವುದು ಸಾಧ್ಯವಾಯಿತು.

ಸಾಮಾಜೀಕರಣ (Socialization) ಎಂದರೆ ಒಂದು ಬಗೆಯಲ್ಲಿ, ಒಂದು ವಿಶಿಷ್ಟ ಸಾಂಸ್ಕೃತಿಕ ಅನನ್ಯತೆಯನ್ನು ಸಾಧಿಸುವುದು ಎಂದರ್ಥ. ಈ ಸಾಮಾಜೀಕರಣ ಪ್ರತಿಕ್ರಿಯೆ ಯಲ್ಲಿ 'biological individual is transformed into a Specific Cultural being' ಈ ಪರಿವರ್ತನೆಯನ್ನು ತರುವಲ್ಲಿ ಅನೇಕ ಸಾಮಾಜಿಕ ಕಾರ್ಯಭಾರಿಗಳು (Social

agencies) ಕಾರಣವಾಗುತ್ತವೆ. ಒಂದು ಕುಟುಂಬ ಈ ಕೆಲಸವನ್ನು ಮಾಡಬಹುದು; ಸಹಪಾಟಿಗಳು, ಒಡನಾಡಿಗಳು ಈ ಕೆಲಸ ಮಾಡಬಹುದು; ಕಲಿಯುವ ಶಾಲೆ ಇದನ್ನು ಮಾಡಬಹುದು ಅಥವಾ ದುಡಿಮೆಯ ಪರಿಸರ ಸಾಮಾಜೀಕರಣಕ್ಕೆ ಒಳಗುಮಾಡಬಹುದು. ಒಟ್ಟಿನಲ್ಲಿ ಸಾಮಾಜೀಕರಣ ಪ್ರಕ್ರಿಯೆ ಪರಿಪೂರ್ಣವಾಗುವಲ್ಲಿ ನಾಲ್ಕುಬಗೆಯ ಸಾಂದರ್ಭಿಕ ಒತ್ತಡಗಳು (contextual pressures) ಕೆಲಸ ನಿರ್ವಹಿಸುತ್ತವೆ. ಅವಾವುವೆಂದರೆ ನಿಬಂಧಾತ್ಮಕ ಪರಿಸರ (Regulative Context), ಬೋಧನಾತ್ಮಕ ಪರಿಸರ (instructional context) ಪ್ರಚೋದನಾತ್ಮಕ ಪರಿಸರ(innovating of imaginative context) ಮತ್ತು ಅಂತಾವ್ಯಕ್ತಿಯ ಪರಿಸರ (interpersonal context). ಈ ಸಾಮಾಜೀಕರಣ ಭಾಷಾಸಂಸ್ಕೃತಿಯ ಅನನ್ಯತೆಯ ಹಿನ್ನೆಲೆಯಲ್ಲಿ ಪರಿಗಣಿಸಲೇಬೇಕಾದ ಬಹುಮುಖ್ಯ ಅಂಶ.

ಸಾಮಾಜಿಕ ದೃಷ್ಟಿಕೋನದಿಂದ ಭಾಷೆಯನ್ನು ನೋಡುವಾಗ, ಅದರಲ್ಲಿ ಎರಡು ಪ್ರಮುಖ ನೆಲೆಗಳು ಗೋಚರಿಸುತ್ತವೆ :

೧. ಸಾಮಾಜಿಕ ಸಂಬಂಧಗಳನ್ನು ಬೆಸೆಯುವಲ್ಲಿ ಭಾಷೆ ನಿರ್ವಹಿಸುವ ಕಾರ್ಯ.
(The function of language in establishing social relationships)

೨. ಆಡುಗನ ಮಾಹಿತಿಯನ್ನು ಒದಗಿಸುವಲ್ಲಿ ಭಾಷೆ ವಹಿಸುವ ಪಾತ್ರ.
(The role played by language in conveying information about a speaker)

ಒಬ್ಬ ವ್ಯಕ್ತಿ ಮಾತಾಡಲು ಬಾಯ್ತೆರದ ತಕ್ಷಣ ನಮಗೆ ಅವನ ಅನೇಕ ಮಾಹಿತಿ ಲಭ್ಯವಾಗಿ ಬಿಡುತ್ತದೆ. ಅವನ ಭಾಷೆ, ಅದರ ಪ್ರಾದೇಶಿಕ ಹಿನ್ನೆಲೆ, ಸಾಮಾಜಿಕ ಹಿನ್ನೆಲೆ, ಆ ವ್ಯಕ್ತಿಯ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸ್ಥಾನಮಾನಗಳ ಸುಳಿವು ಕೂಡ ದೊರೆಯಲು ಸಾಧ್ಯ. ಅಂತೆಯೇ ಭಾಷಾಬಾಂಧವ್ಯ ವ್ಯಕ್ತಿ-ವ್ಯಕ್ತಿಗಳನ್ನು ಬೆಸೆಯುವ ಸಾಧನ ಕೂಡ ಆಗಬಹುದು. 'ಕನ್ನಡಿಗ' ಎನ್ನುವ ಒಂದು ಭಾವನಾತ್ಮಕ ಸಂಬಂಧ ಅನೇಕ ವೈಯಕ್ತಿಕ ನೆಲೆಯ ಪರಿಮಿತಿಗಳನ್ನು ಮೀರಿ, ಒಟ್ಟುಗೂಡಿಸಬಹುದು. ಇದು ಭಾಷೆಗಿರುವ ಅಪರಿಮಿತ ಶಕ್ತಿ.

ಭಾಷೆಯಲ್ಲಿ ಉಚ್ಚ-ನೀಚ-ಶಿಷ್ಟ ಎನ್ನುವ ಮಾತಿಲ್ಲ. ಈ ಭೇದಕ್ಕೆ ಕಾರಣ ಸಮಾಜವೇ ಹೊರತು ಭಾಷೆಯಲ್ಲ. ಜನರಿಂದ ಬಳಕೆಯಾಗುವ ಎಲ್ಲ ಭಾಷೆಗಳೂ, ಅವುಗಳ ಪ್ರಭೇದಗಳೂ ಭಾಷಾವಿಜ್ಞಾನಿಗಳ ದೃಷ್ಟಿಯಲ್ಲಿ ಸಮಾನ ಗೌರವ ಸಲ್ಲಿಸುವಂಥವೆ. ಆದರೆ ಅವುಗಳ ನಡುವೆ ಏರ್ಪಡುವ ಕಂದರ ಮಾತ್ರ ಸಾಮಾಜಿಕ ನಿರ್ಣಯಗಳಿಂದ ನಿರ್ಮಾಣವಾದದ್ದು. ಉದಾ : 'r' ಇಂಗ್ಲಿಷ್ ವರ್ಣದ ಉಚ್ಚಾರಣೆ ಇಂಗ್ಲೆಂಡಿನಲ್ಲಿ ಶಿಷ್ಟವಲ್ಲದ್ದು; ಆದರೆ ಅದೇ ಅಮೆರಿಕೆಯಲ್ಲಿ ಬಳಸುವ ಇಂಗ್ಲಿಷ್ ಉಚ್ಚಾರಣೆಯಲ್ಲಿ ಶಿಷ್ಟವಾದದ್ದು. ಈ ಭೇದ ಭಾಷೆಯ ನ್ಯೂನತೆಯಿಂದ ಬಂದದ್ದಲ್ಲ; ಸಮಾಜದ ಧೋರಣೆಯಿಂದ ಉಂಟಾದದ್ದು. ಈ ಸತ್ಯ 'Value Judgements concerning the correctness and purity of linguistic varieties are social rather than

linguistic' ಎನ್ನುವ ಪೀಟರ್ ಟ್ರುಡ್ಗಿಲ್ ಅವರ ಮಾತಿನಲ್ಲಿ ನಿಚ್ಚಳವಾಗಿ ಗೋಚರಿಸುತ್ತದೆ.

ಶಿಷ್ಟರೂಪಗಳೇ ಸದಾ ಸಾಮಾಜಿಕ ಮನ್ನಣೆಗೆ ಪಾತ್ರವಾಗುತ್ತವೆ ಎಂದೇನೂ ಇಲ್ಲ. ಶಿಷ್ಟರೂಪಗಳನ್ನು ತಿರಸ್ಕರಿಸಿ ದೇಶಿ ಪದಗಳನ್ನು ಅನುಮೋದಿಸಿದ ಅನೇಕ ಸಂದರ್ಭಗಳು ಭಾಷಾಬಳಕೆಯ ಹಿನ್ನೆಲೆಯಲ್ಲಿ ಕಾಣಸಿಗುತ್ತವೆ. ದೇಶೀ ಚಳುವಳಿ, ದೇಶೀ ಪ್ರಜ್ಞೆ, ಸ್ವಭಾಷಾ ನಿಷ್ಠೆ ಇಂಥ ಕೆಲಸ ಮಾಡಿಸಿವೆ. ಇಂಗ್ಲೆಂಡ್‌ನ ಮಾರ್ಥಾಸ್ ವಿನೆಯಾರ್ಡ್ ದ್ವೀಪದಲ್ಲಿ ಜಾಗೃತಗೊಂಡ ಭಾಷಾಪ್ರೇಮ ; ತಮಿಳುನಾಡಿನ ಹಿಂದಿ, ಸಂಸ್ಕೃತ ವಿರೋಧಿ ಮನೋಭಾವ ಹಾಗೂ ತಮಿಳುನಿಷ್ಠೆ ; ಜರ್ಮಾನಿಕ್ ಮಾಸ್ಟರ್ ರೇಸ್ ನಿರ್ಮಾಣ ಮಾಡುವಲ್ಲಿ ಹೆಣಗಿದ ನಾಜೀ ಸಿದ್ಧಾಂತ – ಇವೆಲ್ಲ ಈ ಬಗೆಯ ಬೆಳವಣಿಗೆಗೆ ಸಲ್ಲುವ ಪುರಾವೆಗಳು.

ಹೀಗೆ, ಸಮಾಜ ಭಾಷೆಯ ಮೇಲೆ ಬೀರುವ ಪ್ರಭಾವವನ್ನು ಸಾದರಪಡಿಸಬಹುದು. ಸಮಾಜದ ಪ್ರಾಕೃತಿಕ ಪರಿಸರ (physical environment) ಭಾಷೆಯಲ್ಲಿ ಬಿಂಬಿತ ವಾಗಿರುತ್ತದೆ. ಇದಕ್ಕೆ ಎಸ್ಕಿಮೋ ಜನರ Snow vocabulary, ಸ್ಕ್ಯಾಂಡಿನೇವಿಯಾದ ಲ್ಯಾಪ್ ಭಾಷೆಗಳ Rein deer Vocabulary, ಬೆಡೂಯಿನ್ ಅರಾಬಿಕ್‌ನ Camel Vocabularyಯನ್ನು ಹೆಸರಿಸಬಹುದು. ಸಂಬಂಧ ವಾಚಿ ಪದಗಳಲ್ಲಿರುವ (kinship terminology) ಸಾಮಾಜಿಕ ಬಂಧುರತೆಯನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಇನ್ನು ಕೆಲವು Taboo words ಅಂತೂ ಸಾಮಾಜಿಕ ಮೌಲ್ಯ ಪ್ರತಿಪಾದನೆಯ ಕಂಕಣಬದ್ಧ ಶಾಸನಗಳಂತೆಯೇ ಗೋಚರಿಸುತ್ತವೆ. ಇವುಗಳನ್ನು ಕಡೆಗಣಿಸಿದರೆ ಕೆಲವು ಸಮಾಜಗಳಲ್ಲಿ ನಿಂದನೆ, ಬಹಿಷ್ಕಾರ, ದಂಡನೆಯಂಥ ಗುರುತರ ಶಿಕ್ಷೆಗಳನ್ನು ವಿಧಿಸುವುದುಂಟು. ಭಾಷೆ - ಸಮಾಜಗಳ ನಡುವೆ ಇರುವ ಇಂಥ ಅನೇಕ ವಿಸ್ಮಯಕರ ಪ್ರಭಾವ ಪರಿಣಾಮಗಳನ್ನು ಗುರುತಿಸಬಹುದು.

ಸಮಾಜ ಭಾಷೆಯ ಮೇಲೆ ಬೀರುವ ಪ್ರಭಾವ ಎಷ್ಟು ಗಹನವಾದುದೋ ಭಾಷೆ ಸಮಾಜದ ಮೇಲೆ ಬೀರುವ ಪ್ರಭಾವವೂ ಅಷ್ಟೇ ಪರಿಣಾಮಕಾರಿಯಾದುದು. ಇದಕ್ಕೆ ಸಂಬಂದಿಸಿದಂತೆ ಹೆಸರಾಂತ ಭಾಷಾವಿಜ್ಞಾನಿಗಳಾದ ಸಪೀರ್-ವ್ಹೋರ್ಫ್ ದ್ವಯರು ಒಂದು ಸಿದ್ಧಾಂತವನ್ನೇ ಪ್ರಚುರಪಡಿಸಿದ್ದಾರೆ. ಅದು ಭಾಷೆ-ಸಮಾಜ-ಸಂಸ್ಕೃತಿಯ ವಿವೇಚನೆಯ ಸಂದರ್ಭದಲ್ಲಿ ಖಂಡಿತ ನೆನಪಿಸಿಕೊಳ್ಳುವಂಥದು. ಅವರ ಪ್ರಕಾರ, ಭಾಷೆ ಆಡುಗರ ಪ್ರಾಪಂಚಿಕ ದೃಷ್ಟಿ ಕೋನವನ್ನು ರೂಡಿಸುತ್ತದೆ ; (Language Shapes the world view of its Speaker) ಪ್ರಪಂಚವನ್ನು ಗ್ರಹಿಸುವ ಒಂದು ಚೌಕಟ್ಟನ್ನು, ಸಾಧನವನ್ನು ಒದಗಿಸಿಕೊಡುತ್ತದೆ ; (provides a grid through which a speaker under-standing the world) ಅಂದರೆ ಭಾಷೆಯ ವಿಭಿನ್ನ ರೂಪಗಳು ವಿಭಿನ್ನ ಸಾಮಾಜಿಕ ಅನುಭವಗಳನ್ನು ನಿಷ್ಪನ್ನಗೊಳಿಸುತ್ತವೆ. (different linguistic forms produce different social experience) ಹೀಗೆ ಸಮಾಜವನ್ನು ನೋಡುವ, ಅರ್ಥೈಸಿಕೊಳ್ಳುವ ಕೀಲಿಕೈ ಭಾಷೆಯಿಂದ ದೊರೆಯುತ್ತದೆ.

ಸಂಸ್ಕೃತಿ ಜಿಜ್ಞಾಸೆ ಕೂಡ ಸುಲಭ ಸಾಧ್ಯವಾದುದಲ್ಲ. ಅದು ಜನರ ಬದುಕಿನ ಜೀವನಾಡಿ; ಅವರ ಭೌತಿಕ-ಅಭೌತಿಕ ನೆಲೆಯ ಎಲ್ಲ ಚಟುವಟಿಕೆಗಳನ್ನು ಒಳಗೊಳ್ಳುವಂಥದು. ಒಂದು

ಭಾಷೆಯ ನಿಘಂಟು, ಪದಕೋಶಗಳು ಕೊಡುವ ಎಲ್ಲ ವಿವರಗಳು ನೈಜವಾಗಿ ಆ ಭಾಷೆಯನ್ನಾಡುವ ಜನರ ಸಂಸ್ಕೃತಿಯ ಪ್ರತಿಫಲನಗಳೇ ಆಗಿರುತ್ತವೆ. ಕನ್ನಡ ನಾಡಿನಲ್ಲಂತೂ ಸಂಸ್ಕೃತಿ ಬಗ್ಗೆ ಚಿಂತನೆಯ ಮಹಾಪೂರವೇ ಹರಿದಿದೆ. ಪಾಶ್ಚಾತ್ಯರ 'Culture' ಎಂಬ ಪದಕ್ಕೆ ಸಂವಾದಿಯಾಗಿ 'ಸಂಸ್ಕೃತಿ' ಎಂಬ ಪದ ಸ್ವೀಕರಿಸಲ್ಪಟ್ಟಿದೆ. ಒಂದು ಜನಾಂಗದ ಜೀವನ ವಿಧಾನಕ್ಕೆ (way of life) ಹಿಡಿದ ಕನ್ನಡಿ ಸಂಸ್ಕೃತಿ; ಅವರ ಎಲ್ಲ ಚಟುವಟಿಕೆಗಳ ಒಟ್ಟು ಮೊತ್ತ ಇದು – ಎಂದೆಲ್ಲ ಇದನ್ನು ಕುರಿತು ವಿವರಿಸಲಾಗಿದೆ. ಕೆಲವರು ಸಂಸ್ಕೃತಿಯನ್ನು ಒಂದು ಜನಾಂಗದ ಬುದ್ಧಿಶಕ್ತಿ, ವಾಕ್‌ಶಕ್ತಿ, ಸಂಘಶಕ್ತಿಗಳ ಫಲಶ್ರುತಿ ಎಂದು ಪರಿಗಣಿಸಿದರೆ ; ಇನ್ನು ಕೆಲವರು, ಒಂದು ಜನಾಂಗದ ಸಾಹಿತ್ಯ, ಸಂಗೀತ, ಧರ್ಮ, ತತ್ತ್ವ, ಆಧ್ಯಾತ್ಮ, ಆಚಾರ – ವಿಚಾರಗಳನ್ನು 'ಸಂಸ್ಕೃತಿ' ಎಂದೂ ಇದರ ಅಧ್ಯಯನವನ್ನು 'ಸಾಂಸ್ಕೃತಿಕ ಅಧ್ಯಯನ' ಎಂದೂ ಅರ್ಥೈಸಿದ್ದಾರೆ.

ಈ ಅರ್ಥಗ್ರಹಿಕೆ ಎಷ್ಟರಮಟ್ಟಿಗೆ ಸರಿ? ಎಂಬ ಪ್ರಶ್ನೆ ಕೂಡ ಎದ್ದಿದೆ. ಪರಂಪರೆಯ ಪ್ರತಿಪಾದಕ ಮನೋಭೂಮಿಕೆಯುಳ್ಳ ವಿವೇಕಾನಂದ, ರಾಧಾಕೃಷ್ಣನ್, ಠಾಕೂರ, ಬೇಂದ್ರೆ, ಡಿವಿಜಿ, ದೇವುಡು, ಬೆಟಗೇರಿ, ಕರಮನ್, ಆರ್ನಾಲ್ಡ್ ಮುಂತಾದವರ 'ಸಂಸ್ಕೃತಿ' ವಿಚಾರಧಾರೆ ಏಕಮುಖವಾದುದು ಎಂಬುದು ಇತ್ತೀಚಿನ ದೇಶೀವಾದ, ಸ್ತ್ರೀವಾದ, ವಸಾಹತುವಾದ, ವಿಸ್ಮೃತಿವಾದ ಪ್ರತಿಪಾದಕರು ಎತ್ತಿರುವ ಪ್ರಮುಖ ಆರೋಪ. ಅನೇಕ ಜನಾಂಗಗಳ ಬೀಡಾಗಿರುವ ಈ ನಾಡು, 'ಪ್ರತಿಪಾದಿತ ಸಂಸ್ಕೃತಿ' ಯನ್ನು ಯಾರದೆಂದು ತಿಳಿಯುವುದು? ಆರ್ಯರದೆಂದೇ, ದ್ರಾವಿಡರದೆಂದೇ ಅಥವಾ ದಲಿತಲೋಕದ ಹರಿಜನ-ಗಿರಿಜನರದೆಂದೇ? ಒಂದು ಜನಾಂಗದ ಅಧ್ಯಯನ ಅಥವಾ ವಿಶ್ಲೇಷಣ ಸಾಮಗ್ರಿಯನ್ನು ಎಲ್ಲ ಜನಾಂಗಕ್ಕೂ ಅನ್ವಯಿಸಿ ಹೇಳುವುದು ಎಷ್ಟರಮಟ್ಟಿಗೆ ಸರಿ? ಇವರೆಲ್ಲ ಒಂದೇ ರೀತಿಯಲ್ಲಿ ಬದುಕುತ್ತಿದ್ದಾರೆಯೇ? ಸಮಾನ ಸವಲತ್ತುಗಳನ್ನು ಪಡೆದಿದ್ದಾರೆಯೇ? ಇವರೆಲ್ಲರ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಜಗತ್ತು ಒಂದೇ ಬಗೆಯದೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದಾಗಲಿ, ಕೊಡುವುದಾಗಲಿ ಅಷ್ಟು ಸರಳವಾದು ದಾಗಿಲ್ಲ. ಏಕೆಂದರೆ ಈವರೆಗೆ ಒಂದು ಪ್ರಧಾನ ಸಂಸ್ಕೃತಿಯ ಅಧ್ಯಯನ ಮಾತ್ರ ನೆರವೇರಿದೆ. ಸಮಾಜದ ನಿರ್ಲಕ್ಷ್ಯಕ್ಕೆ, ಅವಮಾನಕ್ಕೆ, ಹಿಂಸೆಗೆ, ತುಳಿತಕ್ಕೆ ಒಳಗಾಗುತ್ತ ಬಂದಿರುವ ಜನರ ಸಂಸ್ಕೃತಿಯ ಅಧ್ಯಯನ ನಡೆದಿಲ್ಲ. ಇವರ ಬದುಕು, ಶ್ರಮ, ಆಹಾರ, ಉಡುಗೆತೊಡುಗೆ, ನೋವು ನಲಿವುಗಳು, ಭಾಷೆ ಬಣ್ಣಗಳು, ಇಂದಿಗೂ ನಿಕೃಷ್ಟವಾಗಿಯೇ ಉಳಿಯಲ್ಪಟ್ಟಿವೆ. ಸಸ್ಯಾಹಾರ-ಮಾಂಸಾಹಾರಗಳ ನಡುವೆ ಶ್ರೇಷ್ಠ – ಕನಿಷ್ಠತೆಯ ಕಂದರವನ್ನು ನಿರ್ಮಿಸಲಾಗಿದೆ. ಬಿಳಿ – ಕಪ್ಪುಗಳ ವರ್ಣವ್ಯತ್ಯಯ ತಾರತಮ್ಯ ಮೇಲರಿಮೆ – ಕೀಳರಿಮೆಗಳ ಸಂಕೇತವಾಗಿದೆ. ಉಪಸಂಸ್ಕೃತಿಯ ಜನರ ಬದುಕು ಪ್ರಧಾನ ಸಂಸ್ಕೃತಿಯ ಜನರ ಕಣ್ಣಿಗೆ ಅಮಾನವೀಯವಾಗಿ ಕಾಣಿಸುತ್ತದೆ. ಹೀಗಿರುವಾಗ ಸಂಸ್ಕೃತಿಯ ಇದುವರೆಗಿನ ಅಧ್ಯಯನಕ್ಕೆ ಏನು ಬೆಲೆ ? ಇದನ್ನೇ ಬರಗೂರರ 'ಉಪ ಸಂಸ್ಕೃತಿ', ರೆಹಮತ್ ಅವರ 'ಪ್ರತಿ ಸಂಸ್ಕೃತಿ', ಡಿ.ಆರ್. ಅವರ 'ವಿಸ್ಮೃತಿ ಸಂಸ್ಕೃತಿ', ಹರಿಹರ ಪ್ರಿಯ ಅವರ 'ಪರ್ಯಾಯ ಸಂಸ್ಕೃತಿ' ಮತ್ತು ರಂಗರಾಜ ವನದುರ್ಗ ಅವರ 'ಪಲ್ಲಟ ಸಂಸ್ಕೃತಿ'ಗಳು ಕೆದಕಿ, ಕೆಣಕಿ, ಕೇಳುತ್ತಿರುವುದು.

ಇದೇ ಬಗೆಯ ಪ್ರಶ್ನೆಗಳು 'ಭಾಷೆ' ಮತ್ತು 'ಸಮಾಜ' ಗಳನ್ನು ಕುರಿತಾಗಿಯೂ ಎದುರಾಗುತ್ತವೆ ? ಭಾಷೆ ಎಂದರೆ ಯಾವ ಭಾಷೆ ? ಯಾವ ಕಾಲದ್ದು? ಯಾವ ಬಗೆಯದು? ಯಾವ ರೂಪದ್ದು? ಯಾವ ಪ್ರದೇಶದ್ದು? ಯಾವ ಜಾತಿ, ವರ್ಗದ್ದು? ಯಾವ ಮಾಧ್ಯಮದ್ದು? – ಇಂಥ ನೂರಾರು ಪ್ರಶ್ನೆಗಳು ಎಡತಾಕುತ್ತವೆ. ಹಾಗೆಯೇ ಸಮಾಜದ ಬಗೆಗೆ ಕೂಡ. ಯಾವ ಸಮಾಜ? ಯಾರ ಸಮಾಜ? ಯಾವ ಕಾಲದ ಸಮಾಜ? ಇತ್ಯಾದಿ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಆಧುನಿಕ ಸಮಾಜ ಪ್ರಸ್ತುತದ ಸಮಾಜ ಎಂದುಕೊಂಡರೂ ಅದರ ವ್ಯಾಪ್ತಿಯನ್ನು ಒಂದು ಮಿತಿಯಲ್ಲಿಯೇ ವಿಶ್ಲೇಷಿಸಬೇಕಾಗುತ್ತದೆ.

ಒಟ್ಟಿನಲ್ಲಿ ಸಮಾಜ, ಸಂಸ್ಕೃತಿ ಮತ್ತು ಭಾಷೆ – ಇವನ್ನು ಒಂದು ನಿರ್ವಾತ (vaccum) ದಲ್ಲಿಟ್ಟು ಅಧ್ಯಯನ ಮಾಡುವುದು ಸಾಧ್ಯವಿಲ್ಲ. ಇವು ಮೂರೂ ಒಂದರೊಡನೊಂದು ಅವಿನಾ ಸಂಬಂಧಿಯಾಗಿ ಹೆಣೆದುಕೊಂಡಿವೆ. ಒಂದನ್ನುಳಿದು ಇನ್ನೊಂದಕ್ಕೆ ಅಸ್ತಿತ್ವ ಪ್ರಾಪ್ತವಾಗುವುದಿಲ್ಲ. ಒಂದನ್ನು ಬಿಟ್ಟು ಇನ್ನೊಂದನ್ನು ಪರಿಗಣಿಸಲು ಬರುವುದಿಲ್ಲ. ಆದುದರಿಂದ 'Language Cannot be Studied in Isolation; So also the Society and Culture'.

ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯ ಯೋಜನೆಗಳು

ಡಾ. ಡಿ. ಎಸ್. ಜಯಪ್ಪಗೌಡ

ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗಿದ್ದು (೧೯೧೨-೧೯೧೮). ಅದರ ಇತಿಹಾಸದಲ್ಲಿ ಅತ್ಯಂತ ಮಹತ್ವ ಪೂರ್ಣ ಘಟನೆಯಾಯಿತು. ಆಡಳಿತಾಧಿಕಾರಿಗಳೇ ದಿವಾನರಾಗಿರುತ್ತಿದ್ದ ಕಾಲದಲ್ಲಿ ಅವರೆಷ್ಟೇ ಪ್ರತಿಭಾವಂತರಾಗಿದ್ದರೂ ಅವರಿಗೆ ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಸಾಗಿಸುವಂತಹ ಯೋಜನೆಗಳನ್ನು ಹಾಕಿಕೊಳ್ಳಲು ಅನೇಕ ಪರಿಮಿತಿಗಳಿರುತ್ತಿದ್ದವು. ಆದರೆ ವಿಶ್ವೇಶ್ವರಯ್ಯನವರು ಪ್ರತಿಭಾವಂತ ಎಂಜಿನಿಯರಾಗಿ ತಾವೇ ಯೋಜನೆಗಳನ್ನು ರೂಪಿಸಬಲ್ಲವರಾಗಿದ್ದರು. ಜೊತೆಗೆ ಉತ್ತಮ ಆಡಳಿತ ನಡೆಸುವ ಸಾಮರ್ಥ್ಯ ಅವರಲ್ಲಿದ್ದಿತು. ಅವರ ನಿಸ್ವಾರ್ಥ ಮನೋಭಾವ, ವೈಜ್ಞಾನಿಕ ದೃಷ್ಟಿ, ಶಿಸ್ತು ಮತ್ತು ದೂರದೃಷ್ಟಿಗಳು ಅವರ ಆರ್ಥಿಕ ಕಾರ್ಯಕ್ರಮಗಳಿಗೆ ಮೆರಗು ಕೊಟ್ಟವು. ಅವರದೇ ಆದ ಹೂಡಿಕೆ ಪ್ರಧಾನವಾದ ಆರ್ಥಿಕ ನೀತಿ ಮೈಸೂರು ರಾಜ್ಯದ ಮುನ್ನಡೆಗೆ ಹೊಸ ಹಾದಿ ನಿರ್ಮಿಸಿದರೆ ಮುಂದೆ ಅದು ಇಡೀ ಭಾರತಕ್ಕೂ ಮಾದರಿಯಾಯಿತು.

ವಿಶ್ವೇಶ್ವರಯ್ಯನವರು ದಿವಾನರಾಗುವ ಮೊದಲು ಅವರು ಹೊಂದಿದ್ದ ಪೂರ್ವಸಿದ್ಧತೆಗಳೇನು ಎಂಬ ಬಗ್ಗೆ ಒಂದು ಕಿರುನೋಟ ಹರಿಸುವುದು ಅವರ ವ್ಯಕ್ತಿತ್ವವನ್ನು ಗ್ರಹಿಸಲು ಅಗತ್ಯ. ಅವರು ೧೮೬೧ ರಲ್ಲಿ ಮೈಸೂರು ಸಂಸ್ಥಾನದ ಕೋಲಾರ ಜಿಲ್ಲೆಗೆ ಸೇರಿದ ಚಿಕ್ಕಬಳ್ಳಾಪುರದ ಬಳಿಯ ಮುದ್ದೇನಹಳ್ಳಿಯಲ್ಲಿ ಹುಟ್ಟಿದರು. ಅವರ ತಂದೆ ಶ್ರೀನಿವಾಸಶಾಸ್ತ್ರಿ, ತಾಯಿ ವೆಂಕಟಲಕ್ಷ್ಮಮ್ಮ. ಏಳುಜನ ಮಕ್ಕಳಿದ್ದ ಕುಟುಂಬದಲ್ಲಿ ಬಡತನದ ನೆರಳಲ್ಲಿ ವಿಶ್ವೇಶ್ವರಯ್ಯನವರು ಬೆಳೆದರು. ತಮ್ಮ ಹದಿನೈದನೆಯ ವಯಸ್ಸಿನಲ್ಲೇ ತಂದೆಯನ್ನು ಕಳೆದು ಕೊಂಡ ಅವರು ಸ್ವಪ್ರಯತ್ನ ಮತ್ತು ದೃಢ ನಿಶ್ಚಯಗಳಿಂದ ತಮ್ಮ ವಿದ್ಯಾಭ್ಯಾಸ ಮುಂದು ವರಿಸಿದರು. ಮನೆ ಪಾಠ ಹೇಳುವುದರಿಂದ ಹಿಡಿದು ಅನೇಕ ಕಷ್ಟಗಳನ್ನೆದುರಿಸಿ ಅವರು ಬೆಂಗಳೂರಿನಲ್ಲಿ ಬಿ. ಎ. ಪದವಿ ಪಡೆದರು. ಮೊದಲ ಸ್ಥಾನದಲ್ಲಿ ತೇರ್ಗಡೆ[illegible]ದ ಅವರಿಗೆ ಸರ್ಕಾರ ವಿದ್ಯಾರ್ಥಿವೇತನ ನೀಡಿ ಪೂನಾಕ್ಕೆ ಎಂಜಿನಿಯರಿಂಗ್ ಶಿಕ್ಷಣ [illegible] ಕಳುಹಿಸಿತು. ಅಲ್ಲಿ ಎಲ್. ಸಿ. ಇ. ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದ ಅವ[illegible]೮೪ ರಲ್ಲಿ ಮುಂಬಯಿ ಪ್ರಾಂತದ ಸೇವೆಯಲ್ಲಿ ಎಂಜಿನಿಯರ್ ಆಗಿ ಸೇರಿದರು. ಅಲ್ಲಿನ ಅವರ ಇಪ್ಪತ್ತನಾಲ್ಕು ವರ್ಷಗಳ ಸೇವೆಯು ಅಂದಿನ ಭಾರತದಲ್ಲಿನ ಬ್ರಿಟಿಷ್ ಮತ್ತು ಭಾರತೀಯ ಎಂಜಿನಿಯರ್‌ಗಳ ಸೇವೆಯಲ್ಲಿ ಹೊಸ ದಾಖಲೆಗಳನ್ನು ನಿರ್ಮಿಸಿತು. ಅಲ್ಲಿ ತಮ್ಮ ಕಾರ್ಯಯೋಜನೆಗಳನ್ನು ಜಾರಿಗೆ ತರಲು ಸಾಕಷ್ಟು ಅವಕಾಶವಿಲ್ಲವೆಂದು ಕಂಡುಕೊಂಡ ಅವರು ೧೯೦೮ ರಲ್ಲಿ ತಮ್ಮ ಮುಂಬಯಿ ಪ್ರಾಂತದ

ಸ್ಯಾನಿಟರಿ ಎಂಜಿನಿಯರ್ ಹುದ್ದೆಗೆ ರಾಜೀನಾಮೆ ನೀಡಿದರು. ಅದೇ ವರ್ಷ ಅಮೆರಿಕ ಮತ್ತು ಯುರೋಪ್ ಖಂಡಗಳಲ್ಲಿ ಪ್ರವಾಸ ಕೈಗೊಂಡರು. ಈಜಿಪ್ಟ್ ದೇಶಕ್ಕೆ ಭೇಟಿ ನೀಡಿ ಅಲ್ಲಿನ ಆಸ್ವಾನ್ ಜಲಾಶಯವನ್ನು ನೋಡಿದರು. ಜಪಾನ್ ದೇಶಕ್ಕೆ ಒಂದು ದಶಕಕ್ಕೆ ಮೊದಲೇ ಭೇಟಿ ನೀಡಿ ಬಂದಿದ್ದರು. ಹೀಗೆ ವಿಶ್ವವ್ಯಾಪಿ ಪ್ರವಾಸ ಮಾಡಿದ ಅವರು ಆಗಿನ ಕಾಲದ ಅತ್ಯಾಧುನಿಕ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಿಳಿವಳಿಕೆ ಹೊಂದಿದವರಾಗಿದ್ದರು.

ಆ ಹೊತ್ತಿಗೆ ೧೯೦೮ ವಿಶ್ವೇಶ್ವರಯ್ಯನವರು ಮುಂಬಯಿ ಪ್ರಾಂತದ ಗವರ್ನರ್ ಹಾಗೂ ಭಾರತ ಸರ್ಕಾರದ ವೈಸರಾಯ್‌ಯಿಂದ ಹಿಡಿದು ಅಂದಿನ ಪ್ರಮುಖರಿಗೆ ಪರಿಚಿತರಾಗಿದ್ದರು ಮತ್ತು ತಮ್ಮ ಕಾರ್ಯಗಳ ಮೂಲಕ ಅವರೆಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಅವರು ಅದೇ ವರ್ಷ ಹೈದರಾಬಾದ್ ಸಂಸ್ಥಾನದ ಆಹ್ವಾನದ ಮೇರೆಗೆ ಅಲ್ಲಿಗೆ ತೆರಳಿ ಅಲ್ಲಿನ ಮೂಸಿ ಮತ್ತು ಈಸಿ ನದಿಗಳ ಪ್ರವಾಹದಿಂದ ಹೈದರಾಬಾದ್ ನಗರಕ್ಕಾಗುತ್ತಿದ್ದ ತೊಂದರೆಯನ್ನು ತಪ್ಪಿಸಲು ಯೋಜನೆಗಳನ್ನು ಹಾಕಿಕೊಟ್ಟರು.

ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರ್ (೧೯೦೯–೧೯೧೨)

ಈ ಸಮಯದಲ್ಲೇ ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರಾಗಿದ್ದ ಮ್ಯಾಕ್ ಹುಚಿನ್‌ರವರು ನಿವೃತ್ತರಾಗಲಿದ್ದರು. ಈ ಹುದ್ದೆಗೆ ಎಂ. ವಿಶ್ವೇಶ್ವರಯ್ಯನವರನ್ನು ನೇಮಿಸಿ ಅವರನ್ನು ಮೈಸೂರು ಸಂಸ್ಥಾನದ ಸೇವೆಗೆ ಸೆಳೆದುಕೊಳ್ಳಬೇಕೆಂಬ ಅಪೇಕ್ಷೆ ಆಗಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರದಾಗಿದ್ದಿತು. ವಿಶ್ವೇಶ್ವರಯ್ಯನವರು ಮೊದಲಿನಿಂದಲೂ ದೇಶಾಭಿಮಾನ ಹೊಂದಿದ್ದವರು. ಅವರು ೧೮೮೭ ರಲ್ಲೇ ಆಗಿನ ಮಹಾರಾಜರಾಗಿದ್ದ ಚಾಮರಾಜ ಒಡೆಯರನ್ನು ಮುಂಬಯಿಯಲ್ಲಿ ಭೇಟಿ ಮಾಡಿ ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಕುರಿತು ಚರ್ಚಿಸಿದ್ದರು. ಆಗಿಂದಾಗ್ಗೆ ತಮ್ಮ ಹುಟ್ಟೂರಿನ ಸಂಸ್ಥಾನಕ್ಕೆ ಬಂದು ಇಲ್ಲಿನ ಅಭಿವೃದ್ಧಿಕಾರ್ಯಗಳನ್ನು ಗಮನಿಸಿದವರಾಗಿದ್ದರು. ಈಗ ಮೈಸೂರು ಸಂಸ್ಥಾನವು ವಿಶ್ವೇಶ್ವರಯ್ಯನವರ ಸೇವೆಯನ್ನು ಅಪೇಕ್ಷಿಸಿ ಪತ್ರ ವ್ಯವಹಾರಗಳನ್ನು ನಡೆಸಿತು.

ಹಾಗೆ ಸೇವೆಗೆ ಸೇರಲು ವಿಶ್ವೇಶ್ವರಯ್ಯನವರು ಮುಂದುಮಾಡಿದ ಷರತ್ತೇ ಅವರ ಕಾರ್ಯಸ್ವರೂಪಕ್ಕೆ ದಿಕ್ಸೂಚಿಯಾಗಿದೆ. "ನಿಮ್ಮ ವಿದ್ಯಾರ್ಹತೆ ಮತ್ತು ನೀವು ಸಲ್ಲಿಸಿರುವ ಅಮೋಘ ಸೇವೆಗಳಿಗಾಗಿ ಮಾತ್ರವಲ್ಲದೆ ನೀವು ಜನ್ಮತಃ ಮೈಸೂರಿನವರೆಂಬ ಕಾರಣ ದಿಂದಲೂ ನಿಮ್ಮ ಸೇವೆಯನ್ನು ಪಡೆಯಲು ಮಹಾರಾಜರು ಸಂತೋಷಿಸುತ್ತಾರೆ" ಎಂದು ದಿವಾನ್ ಟಿ. ಆನಂದರಾಯರು ವಿಶ್ವೇಶ್ವರಯ್ಯನವರಿಗೆ ಪತ್ರ ಬರೆದರು. ಇದಕ್ಕೆ ಪ್ರತ್ಯುತ್ತರ ವಾಗಿ ಅವರು "ಸರ್ಕಾರವು ಮಾಮೂಲಿಗಿಂತ ಹೆಚ್ಚಿನ ಪ್ರಮಾಣದಲ್ಲಿ ರಾಜ್ಯದಲ್ಲಿ ಕೈಗಾರಿಕೆ ಗಳನ್ನು ಮತ್ತು ತಾಂತ್ರಿಕ ಶಿಕ್ಷಣವನ್ನು ಪ್ರೋತ್ಸಾಹಿಸುವ ಸಾಧ್ಯತೆ ಇದೆಯೇ ಹಾಗೂ ಅದರಲ್ಲಿ ನನ್ನ ಸೇವೆಯನ್ನು ಬಳಸಿಕೊಳ್ಳಲು ಬಯಸುತ್ತದೆಯೇ" ಎಂದು ಸ್ಪಷ್ಟೀಕರಣ ಕೇಳಿದರು. ಅದಕ್ಕೆ ಮಹಾರಾಜರು ಅಂತಹ ಕಾರ್ಯಕ್ರಮಗಳು ಇದ್ದೇ ಇವೆ; ಅವಕಾಶ ಬಿದ್ದಾಗ ನಿಮ್ಮ ಸೇವೆಯನ್ನು ಪಡೆಯಲಾಗುವುದು ಎಂದು ತಿಳಿಸಿದ್ದರು. ಇದರಿಂದ ಸಂತೃಪ್ತರಾದ ವಿಶ್ವೇಶ್ವರಯ್ಯನವರು ೧೯೦೯ ರಲ್ಲಿ ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರ್ ಹುದ್ದೆ ವಹಿಸಿಕೊಂಡರು.

ವಿಶ್ವೇಶ್ವರಯ್ಯನವರು ರಾಜ್ಯದ ಮುಖ್ಯ ಎಂಜಿನಿಯರಾಗಿ ಕೆಲವು ಮಹತ್ವದ ಕಾರ್ಯಕ್ರಮಗಳನ್ನು ಕೈಗೊಂಡರು. ಆಗ ಮೈಸೂರು ಸರ್ಕಾರವು ಚಿತ್ರದುರ್ಗ ಜಿಲ್ಲೆಯ ಬರಪೀಡಿತ ಪ್ರದೇಶಗಳಿಗೆ ನೀರಾವರಿ ಸೌಕರ್ಯ ಒದಗಿಸುವ ಸಲುವಾಗಿ ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕದಲ್ಲೇ ದಿವಾನ್ ಶೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ ತುಂಗಾಭದ್ರಾ ನದಿಯ ಉಪನದಿಯಾದ ವೇದಾವತಿ ಹೊಳೆಗೆ ಹಿರಿಯೂರಿನ ಬಳಿ ಮಾರಿಕಣಿವೆ ಜಲಾಶಯ ಕಟ್ಟಲು ನಿರ್ಧರಿಸಿತ್ತು. ಈ ಜಲಾಶಯ ವಿಶ್ವೇಶ್ವರಯ್ಯನವರು ಮುಖ್ಯ ಎಂಜಿನಿಯರ್ ಆಗುವ ಹೊತ್ತಿಗೆ ಮುಗಿದಿದ್ದರೂ ಅದರ ನೀರಿನ ಬಳಕೆ ಸಮರ್ಪಕ ವಾಗಿರಲಿಲ್ಲ. ಮೊದಲೇ ನೀರಿನ ಕೊರತೆಯಿದ್ದ ಈ ಜಲಾಶಯದಿಂದ ರೈತರು ಅಗತ್ಯಕ್ಕೆ ಮೀರಿದ ನೀರನ್ನು ಬಳಸುತ್ತಿದ್ದರು. ಇದು ನಾಲೆಯ ತುದಿಯ ಜನರಿಗೆ ನೀರು ತಲುಪ ದಂತಾಗಲು ಕಾರಣವಾಗಿತ್ತು. ವಿಶ್ವೇಶ್ವರಯ್ಯನವರು ತಾವು ಮುಂಬಯಿ ಪ್ರಾಂತದ ಸೇವೆಯಲ್ಲಿದ್ದಾಗ ಪೂನಾ ನೀರಾವರಿ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿ ಇಂತಹ ಸಮಸ್ಯೆಯನ್ನು ಎದುರಿಸಿದ್ದರು. ಆಗ ಅವರು 'ಬ್ಲಾಕ್ ಸಿಸ್ಟಮ್ ಆಫ್ ಇರಿಗೇಷನ್' ಅಥವಾ ತಾಕುನೀರಾವರಿ ಪದ್ಧತಿಯನ್ನು ಜಾರಿಗೆ ತಂದಿದ್ದರು. ಈ ಪರಿಕಲ್ಪನೆ ಅವರದೇ ಆಗಿದ್ದು ಅದರ ಪ್ರಕಾರ ರೈತರು ತಮ್ಮ ಹಿಡುವಳಿಯ ಮೂರನೆಯ ಒಂದು ಭಾಗದಲ್ಲಿ ಮಳೆಯಾಧಾರಿತ ಬೆಳೆ ಬೆಳೆಯಬೇಕಾಗಿತ್ತು. ಇದು ಪರ್ಯಾಯವಾಗಿ ಬದಲಾಗುತ್ತಿತ್ತು. ಇದರಿಂದ ನೀರಿನ ಮಿತವ್ಯಯವಾಗಿ ಹೆಚ್ಚು ವಿಸ್ತಾರ ಪ್ರದೇಶಗಳಿಗೆ ಒದಗುತ್ತಿತ್ತು. ಈ ಯೋಜನೆ ಅಂದಿನ (೧೯೦೧-೦೩) ಭಾರತದ ನೀರಾವರಿ ಆಯೋಗದ ಮೆಚ್ಚುಗೆಗೂ ಪಾತ್ರವಾಗಿತ್ತು. ಅದೇ ವಿಧಾನವನ್ನು ಮಾರಿಕಣಿವೆ ಜಲಾಶಯ ಅಥವಾ ವಾಣಿವಿಲಾಸ ಜಲಾಶಯ ಅಚ್ಚುಕಟ್ಟಿನ ಪ್ರದೇಶದಲ್ಲೂ ಜಾರಿಗೆ ತಂದು ಸಮಸ್ಯೆಯನ್ನು ಪರಿಹರಿಸಿದರು.

ರೈಲು ಮಾರ್ಗಗಳ ವಿಸ್ತರಣೆ

ಮೈಸೂರು ಸಂಸ್ಥಾನವು ಬಹುಹಿಂದೆಯೇ ರೈಲು ಮಾರ್ಗವನ್ನು ಕಂಡರೂ ೧೮೮೫ ರಲ್ಲಿ ಸಂಸ್ಥಾನದಲ್ಲಿ ಇದ್ದ ರೈಲು ಮಾರ್ಗಗಳ ಉದ್ದ ಕೇವಲ ೫೦ ಕಿ. ಮೀ. ಗಳು. ಮುಂದೆ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಒಂದು ಆಶಾದಾಯಕ ರೈಲು ಮಾರ್ಗ ವಿಸ್ತರಣೆ ಯೋಜನೆ ಕೈಗೊಂಡು ೧೯೩೦ರ ಹೊತ್ತಿಗೆ ಅದನ್ನು ೭೪೧ ಕಿ. ಮೀ. ಗಳಿಗೆ ಹೆಚ್ಚಿಸ ಲಾಯಿತು. ಆದರೆ ಅದರಿಂದ ನಿರೀಕ್ಷಿಸಿದ ಲಾಭ ಬರದೆ ಸಾಲದ ಹೊರೆ ಅಧಿಕ ವಾಯಿತು. ಮುಂದಿನ ದಶಕದಲ್ಲಿ ಬಹುತೇಕ ರೈಲು ಮಾರ್ಗಗಳ ವಿಸ್ತರಣಾ ಚಟುವಟಿಕೆ ನಿಂತೇ ಹೋಯಿತು ಎನ್ನಬಹುದು. ೧೯೧೦ರಲ್ಲಿ ಇದ್ದ ರೈಲುಮಾರ್ಗಗಳ ಒಟ್ಟು ಉದ್ದ ೭೪೦ ಕಿ. ಮೀ.ಗಳು. ಆಗ ಈ ರೈಲು ಮಾರ್ಗಗಳ ನಿರ್ವಹಣೆ ಎರಡು ಸ್ವತಂತ್ರ ವ್ಯವಸ್ಥೆಗಳ ಮೂಲಕ ನಡೆಯುತ್ತಿತ್ತು. ಮೈಸೂರು ಸಂಸ್ಥಾನ ಒಂದು ಭಾಗದ ರೈಲುಮಾರ್ಗಗಳನ್ನು ನೋಡಿಕೊಳ್ಳುತ್ತಿದ್ದರೆ, ಇನ್ನೊಂದು ಭಾಗ ಮದ್ರಾಸ್ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪನಿಗೆ ಸೇರಿತ್ತು. ಇದರಿಂದ ಸಮರ್ಪಕ ರೈಲು ಸಾರಿಗೆ ವ್ಯವಸ್ಥೆ ಸಾಧ್ಯವಿರಲಿಲ್ಲ. ವಿಶ್ವೇಶ್ವರಯ್ಯನವರು ಮುತುವರ್ಜಿ ವಹಿಸಿ ಸರ್ಕಾರ ಮೇಲಿನ ಕಂಪನಿಯೊಂದಿಗೆ

ಮಾಡಿಕೊಂಡಿದ್ದ ಒಪ್ಪಂದವನ್ನು ಪರಿಷ್ಕರಿಸಿದರು. ಮೈಸೂರು ಸರ್ಕಾರ ೧೯೧೨ ರಲ್ಲಿ ಪ್ರತ್ಯೇಕ ರೈಲ್ವೇ ಇಲಾಖೆಯನ್ನು ರಚಿಸಲು ಕಾರಣರಾದರು. ಅವರೇ ರೈಲ್ವೇ ಇಲಾಖೆಯ ಕಾರ್ಯದರ್ಶಿ ಹುದ್ದೆಯ ಜವಾಬ್ದಾರಿ ಹೊತ್ತುಕೊಂಡರು. ರಾಜ್ಯಕ್ಕೆ ಅಗತ್ಯವಿದ್ದ ೪೧೬ ಕಿ.ಮೀ.ಗಳು. ವ್ಯಾಪಕ ಯೋಜನೆಯೊಂದನ್ನು ಸಿದ್ಧಪಡಿಸಿದರು.[1] ಅಂದಾಜು ವೆಚ್ಚ ೧೩೦ ಲಕ್ಷ ರೂ. ಗಳಾಗಿದ್ದಿತು. ವಿಶ್ವೇಶ್ವರಯ್ಯನವರು ಈ ಯೋಜನೆಗೆ ಮಹಾರಾಜರಿಂದ ಮಂಜೂರಾತಿ ಪಡೆದಿದ್ದಲ್ಲದೆ ಅದಕ್ಕೆ ಭಾರತ ಸರ್ಕಾರದ ಅನುಮೋದನೆ ಪಡೆಯುವಲ್ಲೂ ಯಶಸ್ವಿಯಾದರು. ಹೀಗೆ ಮುಖ್ಯ ಎಂಜಿನಿಯರ್ ಆಗಿ ವಿಶ್ವೇಶ್ವರಯ್ಯನವರು ಕೈಗೊಂಡ ಮುಖ್ಯ ಯೋಜನೆಗಳಲ್ಲಿ ರೈಲ್ವೇ ಸಾರಿಗೆ ಒಂದಾಯಿತು.

ಕೃಷ್ಣರಾಜಸಾಗರ ಜಲಾಶಯ ಯೋಜನೆ

ಕಾವೇರಿ ನದಿಗೆ ಮೈಸೂರಿನ ಬಳಿ ನಿರ್ಮಿಸಲಾಗಿರುವ ಕೃಷ್ಣರಾಜಸಾಗರ ಅಥವಾ ಕನ್ನಂಬಾಡಿ ಅಣೆಕಟ್ಟೆ ಹಲವು ಕಾರಣಗಳಿಗಾಗಿ ಪ್ರಸಿದ್ಧವೂ ಮಹತ್ವಪೂರ್ಣವೂ ಆದುದಾಗಿದೆ. ಈ ಅಣೆಕಟ್ಟೆಯನ್ನು ಕಟ್ಟುವ ಆಲೋಚನೆ ಮೈಸೂರು ಸರ್ಕಾರಕ್ಕೆ ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದಲೂ ಇದ್ದಿತು. ಇದಕ್ಕೆ ಮುಖ್ಯ ಕಾರಣ ೧೯೦೨ರಲ್ಲಿ ಏಷ್ಯಾಖಂಡದಲ್ಲಿಯೇ ಪ್ರಥಮಬಾರಿಗೆ ಸ್ಥಾಪಿಸಿದ ಶಿವನಸಮುದ್ರ ವಿದ್ಯುತ್ ಉತ್ಪಾದನಾ ಯೋಜನೆಗೆ ಬೇಸಿಗೆಯಲ್ಲಿ ನೀರಿನ ಪೂರೈಕೆ ಕಡಿಮೆಯಾಗದಂತೆ ನೋಡಿಕೊಳ್ಳುವುದು. ಈ ವಿದ್ಯುತ್ತಿನ ಬಹುಭಾಗ ಕೋಲಾರದ ಚಿನ್ನದ ಗಣಿಯ ಕಂಪನಿಗಳಿಗೆ ಸರಬರಾಜಾಗುತ್ತಿತ್ತು. ಅದರಿಂದ ರಾಜ್ಯದ ಬೊಕ್ಕಸಕ್ಕೆ ಗೌರವಧನದ ರೂಪದಲ್ಲಿ ಹಣ ಬರುತ್ತಿತ್ತು. ಈ ಯೋಜನೆಗೆ ಪೂರಕವಾಗಿ ಕನ್ನಂಬಾಡಿ ಗ್ರಾಮದ ಬಳಿ ಜಲಾಶಯ ನಿರ್ಮಾಣಕ್ಕೆ ಪ್ರಯತ್ನಗಳು ನಡೆದವು. ಈ ವಿದ್ಯುತ್ ಉತ್ಪಾದನೆಯೊಂದಿಗೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ ಸಿದ್ಧ ವಾಯಿತು. ಇದರಿಂದ ಜಲಾಶಯದ ಎತ್ತರವನ್ನು ೮೦ ಅಡಿಗಳಿಗೆ ಏರಿಸುವ ಉದ್ದೇಶ ಇಟ್ಟುಕೊಳ್ಳಲಾಯಿತು. ಆದರೆ ಈ ಯಾವುದೇ ಯೋಜನೆಗಳು ಅಂತಿಮ ಸ್ವರೂಪ ಪಡೆಯದೆ ನೆನಗುದಿಗೆ ಬಿದ್ದಿದ್ದವು. ವಿಶ್ವೇಶ್ವರಯ್ಯ ಮುಖ್ಯ ಎಂಜಿನಿಯರ್ ಆದ ಮೇಲೆ ಅವರಿಗೆ ಈ ಯೋಜನೆಯ ಸರ್ವೇಕ್ಷಣ ನಡೆಸಿ ಯೋಜನೆಯನ್ನು ರೂಪಿಸಿ ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ಸರ್ಕಾರ ಒಂದು ಆದೇಶದ[2] ಮೂಲಕ ವಹಿಸಿತು. ಇದರ ಮೇರೆಗೆ ವಿಶ್ವೇಶ್ವರಯ್ಯನವರು ಒಂದು ಸಮಗ್ರ ಯೋಜನೆ ರೂಪಿಸಿದರು. ಅದರಂತೆ ಅಣೆಕಟ್ಟನ್ನು ಗಾರೆ ಮತ್ತು ಕಲ್ಲು ಬಳಸಿ ನಿರ್ಮಿಸಲು ನಿರ್ಧರಿಸಲಾಯಿತು. ಅದು ಅಂದು ಭಾರತದಲ್ಲಿ ಅದುವರೆಗೂ ನಿರ್ಮಾಣವಾಗಿದ್ದ ಎಲ್ಲ ಜಲಾಶಯಗಳಿಗಿಂತ ದೊಡ್ಡದಾಗಿದ್ದಿತು. ಇದರ ಎತ್ತರ ನೆಲದ ಮೇಲೆ ೨೪ ಅಡಿಗಳಿರಬೇಕೆಂದು ವಿನ್ಯಾಸ ತಯಾರಿಸಲಾಯಿತು. ಇದರಲ್ಲಿ ೪೮ ಟಿ. ಎಂ. ಸಿ. ನೀರು ಶೇಖರಣೆಯಾಗುವುದಲ್ಲದೆ ಅದು ಒಂದು ಲಕ್ಷದ ಐವತ್ತು ಸಾವಿರ ಎಕರೆ ಜಮೀನಿಗೆ ನೀರುಣಿಸುವುದಾಗಿತ್ತು. ೮೦,೦೦೦ ಹಾರ್ಸ್‌ಪವರ್ ವಿದ್ಯುತ್ ಉತ್ಪಾದಿಸಲು ಇದು ನೀರೊದಗಿಸುತ್ತಿತ್ತು.

---

೧ ಮೈಸೂರು ಬ್ಲೂಬುಕ್ ಜರ್ನಲ್ (೧೯೧೮-೧೯) ಸಂಪುಟ ೩, ಸಂಖ್ಯೆ ೩, ಪು.೪೦.

೨ ಸರ್ಕಾರದ ಆದೇಶ ಸಂಖ್ಯೆ ೬೫೩-೬೫ -೫೧೮೬-೯೮ ಪಿ.ಡಬ್ಲ್ಯು.ಡಿ, ದಿನಾಂಕ. ೬.೧೨.೧೯೧೦.

ಈ ಯೋಜನೆಯ ಅಂದಾಜು ವೆಚ್ಚ ೨೫೩ ಲಕ್ಷರೂ.ಗಳು ಈ ಮೊತ್ತ ಅಂದಿನ ಮೈಸೂರು ಸಂಸ್ಥಾನದ ವಾರ್ಷಿಕ ಆಯವ್ಯಯದ ಮೊತ್ತಕ್ಕಿಂತಲೂ ಅಧಿಕವಾಗಿತ್ತು. ಈ ಯೋಜನೆಗೆ ಮಹಾರಾಜರ ಒಪ್ಪಿಗೆ ದೊರಕಿಸಲು ಉನ್ನತ ಅಧಿಕಾರಿಗಳಿಂದ ಹಲವಾರು ಅಡಚಣೆಗಳು ಬಂದವು. ಇದೊಂದು ದುಂದುವೆಚ್ಚದ ಯೋಜನೆ ಎಂದು ಪ್ರಚಾರ ನಡೆಯಿತು. ವಿಶ್ವೇಶ್ವರಯ್ಯನವರು ಕೆಲವು ಕಾಲ ರಜೆಯ ಮೇಲೆ ಹೋಗಿ ಮಹಾರಾಜರನ್ನು ಪರೋಕ್ಷವಾಗಿ ಈ ಯೋಜನೆಯನ್ನು ಮಂಜೂರು ಮಾಡಲು ಆಗ್ರಹಿಸಿದರು. ಅವರು ಒಂದು ಹಂತದಲ್ಲಿ ತಮ್ಮ ಹುದ್ದೆಯಿಂದ ಕೈತೊಳೆದುಕೊಳ್ಳಲು ಸಿದ್ಧರಾಗಿದ್ದರು. ಮಹಾರಾಜರು ಕೊನೆಗೆ ಎಲ್ಲ ಸಾಧಕಬಾಧಕಗಳನ್ನು ಪರಿಶೀಲಿಸಿ ಯೋಜನೆಗೆ ಮಂಜೂರಾತಿ ನೀಡಿದರು. ೧೯೧೧ರಲ್ಲಿ ಈ ಯೋಜನೆಯ ಕಾರ್ಯ ಪ್ರಾರಂಭವಾಯಿತು. ೧೯೧೭ರಲ್ಲಿ ಕನ್ನಂಬಾಡಿ ಜಲಾಶಯಕ್ಕೆ 'ಕೃಷ್ಣರಾಜಸಾಗರ' ಎಂದು ಮಹಾರಾಜರ ಹೆಸರಿನಲ್ಲಿ ನಾಮಕರಣ ಮಾಡಲಾಯಿತು. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಅಣೆಕಟ್ಟೆಯ ಎತ್ತರ ನದಿಯ ಮಧ್ಯಭಾಗದಲ್ಲಿ ೬೫ಅಡಿಗಳಿಗೆ ಏರಿದ್ದರೆ ಪಾರ್ಶ್ವಗಳಲ್ಲಿ ೯೮ ಅಡಿಗಳಿಗೆ ಬಂದಿದ್ದಿತು. ವಿಶ್ವೇಶ್ವರಯ್ಯನವರು ನಿವೃತ್ತರಾದ ಕೆಲವು ವರ್ಷಗಳ ಅನಂತರ ಸರ್ಕಾರ ಕಾವೇರಿ ನಾಲಾ ಸಮಿತಿಯನ್ನು ರಚಿಸಿ ಅದಕ್ಕೆ ವಿಶ್ವೇಶ್ವರಯ್ಯನವರನ್ನೇ ಅಧ್ಯಕ್ಷರಾಗಿರಬೇಕೆಂದು ಕೋರಿತು. "ವಿಶೇಷ ರೀತಿಯಲ್ಲಿ ನಿಮ್ಮದೇ ಆದ ಈ ಯೋಜನೆಯಲ್ಲಿ ನೀವು ನಿಮ್ಮ ಆಸಕ್ತಿಯನ್ನು ಮುಂದುವರಿಸುತ್ತೀರೆಂದು ಭಾವಿಸಿದ್ದೇನೆ" ಎಂದು ಮಹಾರಾಜರು ಪತ್ರ ಬರೆದರು. ದೇಶಪ್ರೇಮಿ ವಿಶ್ವೇಶ್ವರಯ್ಯನವರು ಈ ಕಾರ್ಯನಿರ್ವಹಿಸಲು ಒಪ್ಪಿಕೊಂಡು ಕಾವೇರಿ ಜಲಾಶಯದ ಸುರಂಗ ನಿರ್ಮಾಣ ಕೆಲಸದ ಮೇಲ್ವಿಚಾರಣೆ ನೋಡಿಕೊಂಡರು. ಈ ಜಲಾಶಯದ ಎಡದಂಡೆಯ ಮುಖ್ಯ ನಾಲೆಗೆ 'ಸರ್ ಎಂ. ವಿಶ್ವೇಶ್ವರಯ್ಯ ನಾಲೆ' ಎಂಬ ಹೆಸರನ್ನಿಟ್ಟು ಅವರ ಸೇವೆಯನ್ನು ಜನತೆ ಸ್ಮರಿಸಿಕೊಂಡಿದೆ. ಈ ಯೋಜನೆಗೆ ಆದ ಒಟ್ಟು ವೆಚ್ಚ ೧೦ $\frac{೧}{೨}$ ಕೋಟಿ ರೂ.ಗಳು. ಸ್ವಾತಂತ್ರ್ಯಪೂರ್ವದಲ್ಲೇ. ಅದರಿಂದ ಸರ್ಕಾರಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಬರುತ್ತಿದ್ದ ಆದಾಯ ಒಂದೂವರೆ ಕೋಟಿ ರೂ.ಗಳು, ಅಂದರೆ ಶೇಕಡ ೧೫ರಷ್ಟು. ಜೊತೆಗೆ ಆಹಾರದ ಕೊರತೆ ನೀಗಿಸುವಲ್ಲಿ, ಉದ್ಯೋಗ ನಿರ್ಮಾಣ ಮಾಡುವಲ್ಲಿ, ಬರಪ್ರದೇಶವನ್ನು ಹಸಿರಿನ ತವರನ್ನಾಗಿ ಮಾಡುವಲ್ಲಿ ಈ ಜಲಾಶಯ ವಹಿಸಿದ ಪಾತ್ರ ದೊಡ್ಡದು.

ಆರ್ಥಿಕ ಪರಿಷತ್ತು

೧೯೧೧ ರಲ್ಲಿ ಮೈಸೂರು ಸರ್ಕಾರವು 'ಎಕೊನಾಮಿಕ್ ಕಾನ್ಫರೆನ್ಸ್' ಅಥವಾ 'ಆರ್ಥಿಕ ಪರಿಷತ್ತು' ಎಂಬ ಒಂದು ಸಂಸ್ಥೆಯನ್ನು ಹುಟ್ಟುಹಾಕಿತು. ಇಂತಹ ಪರಿಷತ್ತಿನ ಸ್ಥಾಪನೆಗೆ ಮಹಾರಾಜರಿಗೆ ನಾನು ನೀಡಿದ ಸಲಹೆಯೇ ಪ್ರೇರಕವಾಯಿತೆಂದು ವಿಶ್ವೇಶ್ವರಯ್ಯನವರು ಹೇಳಿದ್ದಾರೆ.[೧] ಈ ಪರಿಷತ್ತು ವಿಶ್ವೇಶ್ವರಯ್ಯನವರು ಅಧಿಕಾರದಲ್ಲಿದ್ದಷ್ಟು ಕಾಲ

---

೧. ಎಂ. ವಿಶ್ವೇಶ್ವರಯ್ಯ : ಮೆಮ್ಮಾರ್ಸ್ ಆಫ್ ಮೈ ವರ್ಕಿಂಗ್ ಲೈಫ್, ಪು. ೪೪.

ಚಟುವಟಿಕೆಯಿಂದಿದ್ದು ಆ ನಂತರ ಕ್ಷೀಣಿಸಿದ್ದನ್ನು ನೋಡಿದರೆ ಅದು ಅವರ ಮಾನಸಿಕ ಶಿಶುವೆಂಬುದರಲ್ಲಿ ಅನುಮಾನವಿಲ್ಲ.

ಆರ್ಥಿಕ ಪರಿಷತ್ತಿನ ಕಾರ್ಯಚಟುವಟಿಕೆಗಳು ಮುಖ್ಯವಾಗಿ ವಿಶ್ವೇಶ್ವರಯ್ಯನವರ ಆರ್ಥಿಕ ಚಿಂತನೆಗೆ ಕೊಟ್ಟ ಸಾಕಾರರೂಪ ಎಂದು ಹೇಳಬಹುದು. ಅವತ್ತು ಭಾರತದಲ್ಲಾಗಲೀ ಪ್ರಪಂಚದ ಇತರ ದೇಶಗಳಲ್ಲಾಗಲೀ ಈ ರೀತಿಯ ಸಂಸ್ಥೆ ಇರಲಿಲ್ಲ ಎಂಬುದು ತಜ್ಞರ ಅಭಿಪ್ರಾಯ. ಜಪಾನಿನಲ್ಲಿದ್ದ ಕೌನ್ಸಿಲ್‌ನ ಪ್ರಭಾವ ವಿಶ್ವೇಶ್ವರಯ್ಯನವರ ಮೇಲೆ ಆಗಿದೆ ಎಂದು ಹೇಳಲಾಗಿದೆ. ಈ ಆರ್ಥಿಕ ಪರಿಷತ್ತಿನ ಸ್ಥಾಪನೆಯ ಗುರಿಯ ಬಗ್ಗೆ ವಿಶ್ವೇಶ್ವರಯ್ಯನವರು ವಿಶ್ಲೇಷಿಸುತ್ತಾ ಹೀಗೆ ಹೇಳಿದ್ದಾರೆ: "ಇಲ್ಲಿಯವರೆಗೂ ಆಲೋಚಿಸುವ ಕಾರ್ಯವನ್ನು ಮುಖ್ಯವಾಗಿ ಸರ್ಕಾರಿ ಅಧಿಕಾರಿಗಳಿಗೆ ಬಿಡಲಾಗಿತ್ತು. ಇನ್ನು ಮುಂದೆ ಅಧಿಕಾರಿಗಳು ಮತ್ತು ಅಧಿಕಾರೇತರರಿಬ್ಬರೂ ಈ ಕೆಲಸದಲ್ಲಿ ಪಾಲ್ಗೊಳ್ಳುತ್ತಾರೆ. ಅಂತಿಮವಾಗಿ ಈ ಕಾರ್ಯ ಅಧಿಕಾರೇತರರಿಗೇ ಬಹುತೇಕ ವರ್ಗವಾಗುತ್ತದೆ". ಈ ಸಂಸ್ಥೆಯನ್ನು ಅಂದು ಕನ್ನಡದಲ್ಲಿ 'ಸಂಪದಭ್ಯುದಯ ಸಂಸ್ಥೆ' ಎಂದು ಕರೆಯಲಾಯಿತು. ಈ ಹೆಸರಿನಲ್ಲೇ ಅದು ಸಂಪತ್ತಿನ ಹೆಚ್ಚಳಕ್ಕೆ ಬದ್ಧವಾಗಿದ್ದ ಸಂಸ್ಥೆ ಎಂಬುದು ವ್ಯಕ್ತವಾಗುತ್ತದೆ.

ವಿಶ್ವೇಶ್ವರಯ್ಯನವರು ರಾಜ್ಯಮಟ್ಟದಿಂದ ಹಿಡಿದು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದವರೆಗೂ ಆರ್ಥಿಕ ಪರಿಷತ್ತಿನ ಸಮಿತಿಗಳನ್ನು ರಚಿಸಲು ಮುಂದಾದರು. ರಾಜ್ಯ ಮಟ್ಟದಲ್ಲಿ ದಿವಾನರೇ ಅಧ್ಯಕ್ಷರಾಗಿದ್ದ ಒಂದು ಕೇಂದ್ರ ಸಮಿತಿ ಅಥವಾ ಸ್ಥಾಯಿ ಸಮಿತಿ ಅದಕ್ಕೆ ಪೂರಕವಾಗಿದ್ದು ಶಿಕ್ಷಣ ಕೇಂದ್ರೀಯ ಸಮಿತಿ ; ವ್ಯವಸಾಯ ಕೇಂದ್ರೀಯ ಸಮಿತಿಗಳಿದ್ದವು. ವಿಶ್ವೇಶ್ವರಯ್ಯನವರು ದಿವಾನರಾಗುವವರೆಗೂ ಶಿಕ್ಷಣ ಸಮಿತಿಗೆ ಅವರೇ ಅಧ್ಯಕ್ಷರಾಗಿದ್ದರು. ಈ ಆರ್ಥಿಕ ಪರಿಷತ್ತಿನ ವ್ಯವಸ್ಥೆ ಈ ಕೆಳಕಂಡಂತಿದ್ದಿತು.

ಸಮಿತಿಯ ಹೆಸರು	ರಚನೆ	ಪರಿಶೀಲನೆ
ಸ್ಥಾಯಿ ಸಮಿತಿ	ಅಧ್ಯಕ್ಷರು, ಉಪಾಧ್ಯಕ್ಷರು, ಮೂರು ಕೇಂದ್ರೀಯ ಸಮಿತಿಗಳ ಅಧ್ಯಕ್ಷರು ಕಂಟ್ರೋಲರ್ ಮತ್ತು ಪ್ರತಿಯೊಂದು ಸಮಿತಿಯಿಂದ ಒಬ್ಬರಂತೆ ಮೂವರು ಅಧಿಕಾರೇತರ ಸದಸ್ಯರು.	ಪರಿಷತ್ತಿನ ಯಾವುದೇ ಎರಡು ಅಧಿವೇಶನಗಳ ನಡುವೆ ಉದ್ಭವಿಸಿರುವ ಎಲ್ಲ ಮುಖ್ಯ ಕಲಾಪಗಳನ್ನು ವ್ಯವಹರಿಸಲು ತಿಂಗಳಿಗೆ ಒಮ್ಮೆ ಸಭೆ ಸೇರುವುದು.
ಶಿಕ್ಷಣ ಕೇಂದ್ರೀಯ ಸಮಿತಿ	ಪರಿಷತ್ತಿನ ಐವರು ಸದಸ್ಯರು ಅಧ್ಯಕ್ಷರಿಂದ ನಾಮಕರಣಗೊಂಡ ಇತರ ಆರು ಸದಸ್ಯರು.	ಅಧಿಕಾರಿ ಕಾರ್ಯದರ್ಶಿ

೧	೨	೩
ವ್ಯವಸಾಯ ಕೇಂದ್ರೀಯ ಸಮಿತಿ	— " ಅದೇ "—	— " ಅದೇ "—
ಕೈಗಾರಿಕೆ ಮತ್ತು ವಾಣಿಜ್ಯ ಕೇಂದ್ರೀಯ ಸಮಿತಿ	— " ಅದೇ "—	— " ಅದೇ "—
ಎಂಟು ಜಿಲ್ಲಾ ಸಮಿತಿಗಳು	ಪ್ರತಿಯೊಂದು ಸಮಿತಿಯ ೩೦ ಸದಸ್ಯರನ್ನು ಮೀರದಂತೆ ಅಧ್ಯಕ್ಷರಿಂದ ನಾಮಕರಣಗೊಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು.	ಪದನಿಮಿತ್ತ ಅಥವಾ ಅಧಿಕಾರೇತರ ಕಾರ್ಯದರ್ಶಿಯನ್ನು ಹೊಂದಿರ ತಕ್ಕದ್ದು; ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಅಧ್ಯಕ್ಷ.
ಎರಡು ನಗರಾಭಿವೃದ್ಧಿ ಸಮಿತಿಗಳು	ಪ್ರತಿಯೊಂದು ಸಮಿತಿಯಲ್ಲೂ ಐದು ಜನರಿಗೆ ಕಡಿಮೆ ಇಲ್ಲದಂತೆ ಮತ್ತು ಹನ್ನೆರಡು ಜನರಿಗೆ ಹೆಚ್ಚಿಲ್ಲದಂತೆ ಸದಸ್ಯರಿರ ತಕ್ಕದ್ದು.	ಪುರಸಭೆಯ ಸಭಾಧ್ಯಕ್ಷರು ಅಧ್ಯಕ್ಷರಾಗಿರತಕ್ಕದ್ದು. ಮತ್ತು ಉಪಾಧ್ಯಕ್ಷರು ಕಾರ್ಯದರ್ಶಿಯಾಗಿರತಕ್ಕದ್ದು.
ಎಂಟು ಪಟ್ಟಣ ಅಭಿವೃದ್ಧಿ ಸಮಿತಿಗಳು	— " ಅದೇ "—	ಇವು ಜಿಲ್ಲಾ ಕೇಂದ್ರದಲ್ಲಿದ್ದು ಜಿಲ್ಲಾಧಿಕಾರಿ ಅಧ್ಯಕ್ಷರಾಗಿ ಮತ್ತು ಉಪಾಧ್ಯಕ್ಷರು ಕಾರ್ಯದರ್ಶಿಯಾಗಿರತಕ್ಕದ್ದು.
ಎಪ್ಪತ್ತೇಳು ತಾಲ್ಲೂಕು ಅಭಿವೃದ್ಧಿ ಸಮಿತಿಗಳು	— " ಅದೇ "—	ಅಮಲ್ದಾರರು ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು.

ಗುರಿಗಳು

ಆರ್ಥಿಕ ಪರಿಷತ್ತಿನ ಸ್ಥಾಪನೆಯ ಗುರಿಯ ಬಗ್ಗೆ ವಿಶ್ವೇಶ್ವರಯ್ಯನವರು ವಿಶ್ಲೇಷಿಸುತ್ತಾ "ಇಲ್ಲಿಯವರೆಗೂ ಆಲೋಚಿಸುವ ಕಾರ್ಯವನ್ನು ಮುಖ್ಯವಾಗಿ ಸರ್ಕಾರಿ ಅಧಿಕಾರಿಗಳಿಗೆ ಬಿಡಲಾಗಿತ್ತು. ಇನ್ನು ಮುಂದೆ ಅಧಿಕಾರಿಗಳು ಮತ್ತು ಅಧಿಕಾರೇತರರಿಗೆ ಬಹುತೇಕ ವರ್ಗವಾಗುತ್ತದೆ" ಎಂದು ಹೇಳಿದರು.[೧] ಇಂತಹ ಪರಿಷತ್ತು ಬಹು ಮುಖ್ಯ ಉದ್ದೇಶಗಳನ್ನು ಹೊಂದಿತ್ತು. ಅವುಗಳೆಂದರೆ :

೧ ಮೈಸೂರು ರಾಜ್ಯದಲ್ಲಿ ನಡೆಯಬೇಕಾದ ಆರ್ಥಿಕ ಪ್ರಗತಿಗೆ ಸಂಬಂಧಿಸಿದಂತೆ ಸಾರ್ವಜನಿಕ ಪ್ರಮುಖರು, ವ್ಯವಸಾಯಗಾರ ಪ್ರತಿನಿಧಿಗಳು ಮತ್ತು ವರ್ತಕ ಪ್ರತಿನಿಧಿಗಳು ಹಾಗೂ ಸರ್ಕಾರದ ಅಧಿಕಾರಿಗಳು ಸೇರಿ ಚರ್ಚೆ ನಡೆಸಲು ಅವಕಾಶ ಕಲ್ಪಿಸುವುದು.

೨ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ಮತ್ತು ಅವುಗಳ ಬಗ್ಗೆ ಜನರಲ್ಲಿ ಆಸಕ್ತಿ ಹುಟ್ಟಿಸುವುದು.

೩ ಅಲ್ಲಲ್ಲಿ ಸಮ್ಮೇಳನಗಳನ್ನು ಏರ್ಪಡಿಸಿ ಪ್ರಾಯೋಗಿಕವಾಗಿ ಅಭಿವೃದ್ಧಿ ಕಾರ್ಯಗಳ ಬಗ್ಗೆ ಜನರಿಗೆ ಕೆಲವು ತಿಳಿವಳಿಕೆ ನೀಡುವುದು.

೪ ಸಾಧ್ಯವಾದಲ್ಲಿ ಸರ್ಕಾರವೇ ಮುಂದಾಗಿ ಕೆಲವು ಮಾದರಿ ಘಟಕಗಳನ್ನು ಸ್ಥಾಪಿಸುವುದು.

೫ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ವಾರ್ಷಿಕ ಸಮ್ಮೇಳನಗಳನ್ನು ಏರ್ಪಡಿಸಿ ಮುಖ್ಯ ವಿಷಯಗಳನ್ನು ಚರ್ಚಿಸುವುದು.[೨] ಕೇಂದ್ರೀಯ ಸಮಿತಿಗಳು ರೂಪಿಸಿದ ಕಾರ್ಯಯೋಜನೆಗಳನ್ನು ಆರ್ಥಿಕ ಪರಿಷತ್ತು ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸು ಮಾಡುತ್ತಿತ್ತು. ಈ ಪರಿಷತ್ತಿನ ವಾರ್ಷಿಕ ಸಭೆ ಎಂದರೆ ಸರ್ವ ಸದಸ್ಯರ ಸಭೆ ಮೈಸೂರಿನಲ್ಲಿ ಮಹಾರಾಜರ ಹುಟ್ಟು ಹಬ್ಬದ ದಿನ ಸೇರುತ್ತಿತ್ತು. ಈ ಪರಿಷತ್ತನ್ನು ಸಂಪದಭ್ಯುದಯ ಸಂಘವೆಂದು ಕರೆಯುತ್ತಿದ್ದರು.

ಕಾರ್ಯಚಟುವಟಿಕೆಗಳು

ಆರ್ಥಿಕ ಪರಿಷತ್ತು ಸರ್ಕಾರಕ್ಕೆ ಸಲಹೆ ನೀಡುವ ಸಂಸ್ಥೆಯಾಗಿದ್ದರೂ ಅದು ಪ್ರಭಾವಶಾಲಿಯಾಗಿದ್ದಿತು. ದಿವಾನರು, ಕೌನ್ಸಿಲ್ ಸದಸ್ಯರು, ಸರ್ಕಾರದ ಉನ್ನತ ಅಧಿಕಾರಿಗಳು ಇದ್ದು ಈ ಸಂಸ್ಥೆಯ ಕಾರ್ಯಯೋಜನೆಗಳು ಸರ್ಕಾರದ ಒತ್ತಾಸೆ ಪಡೆದಿರುತ್ತಿದ್ದವು. ಇಲ್ಲಿನ ವೈಶಿಷ್ಟ್ಯವೆಂದರೆ ಬೇರೆ ಬೇರೆ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿದ್ದ ಜನರು ಇದರಲ್ಲಿ ಇರುತ್ತಿದ್ದುದರಿಂದ ವಿವಿಧ ದೃಷ್ಟಿಕೋನಗಳಿಂದ ಯಾವುದೇ ವಿಷಯವನ್ನು ಪರಿಶೀಲಿಸುವ ಅವಕಾಶವಿತ್ತು.

---

೧ ಅದೇ ಪು. ೧೪೭.

೨ ಸಿ. ಹಯವದನರಾವ್ (ಇಡಿ) : ಮೈಸೂರು ಗ್ಯಾಸೆಟಿಯರ್, ಸಂಪುಟ ೩, ಎಕನಾಮಿಕ್, ಪು.

ಇಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಸರ್ಕಾರಕ್ಕೆ ಅಂತಿಮ ಆದೇಶಕ್ಕಾಗಿ ಕಳುಹಿಸಿ ಕೊಡಲಾಗುತ್ತಿತ್ತು. ಆರ್ಥಿಕ ಪರಿಷತ್ತಿನಲ್ಲಿ ಅಂಗೀಕೃತವಾದ ಯೋಜನೆಗಳನ್ನು ಬಹುಮಟ್ಟಿಗೆ ಸರ್ಕಾರ ಜಾರಿಗೊಳಿಸುತ್ತಿತ್ತು. ವಿರಳ ಸಂದರ್ಭಗಳಲ್ಲಿ ಪರಿಷತ್ತಿನ ಯಾವುದೇ ಸಮಿತಿ ಮತ್ತು ಇಲಾಖಾ ಮುಖ್ಯರ ನಡುವೆ ಒಂದು ಯೋಜನೆಯ ಅನುಷ್ಠಾನದ ಬಗ್ಗೆ ಭಿನ್ನಾಭಿಪ್ರಾಯ ಉದ್ಭವಿಸಿದಾಗ ಸರ್ಕಾರದ ಅನುಮತಿ ಪಡೆದು ಸಂಬಂಧಪಟ್ಟ ಸಮಿತಿಯೇ ಆ ಯೋಜನೆಯನ್ನು ಕಾರ್ಯಗತಗೊಳಿಸಲು ಅಧಿಕಾರ ನೀಡಲಾಗಿತ್ತು. ಈ ಆರ್ಥಿಕ ಪರಿಷತ್ತು ಒಂದು ರೀತಿಯಲ್ಲಿ ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲದಲ್ಲಿ ಜಾರಿಗೆ ತಂದ ಕಾರ್ಯಕ್ರಮಗಳಿಗೆ ತಳಹದಿಯಾಗಿದ್ದಿತು.

ದಿವಾನರಾಗಿ ಮಾಡಿದ ಸೇವೆ

ವಿಶ್ವೇಶ್ವರಯ್ಯನವರು ಶಿಸ್ತು, ನಿಸ್ವಾರ್ಥ ಸೇವೆ ಮತ್ತು ಅಹರ್ನಿಸಿ ದುಡಿಯುವ ಮನೋಭಾವ ಇವುಗಳಿಂದ ಪ್ರಭಾವಿತಾರದ ಮಹಾರಾಜರು ಅವರನ್ನು ಹಲವು ಸಮಸ್ಯೆಗಳಿಂದ ನರಳುತ್ತಿದ್ದ ಮತ್ತು ಭಾರತದ ಹಿಂದುಳಿದ ಸಂಸ್ಥಾನಗಳಲ್ಲೊಂದಾಗಿದ್ದ ಮೈಸೂರು ಸಂಸ್ಥಾನದ ದಿವಾನರನ್ನಾಗಿ ಮಾಡಬೇಕೆಂದು ಬಯಸಿದರು. ಈ ಸುದ್ದಿ ಅವರು ದಿವಾನರಾಗುವ ಕೆಲವು ತಿಂಗಳುಗಳ ಮೊದಲೇ ಗಾಳಿಸುದ್ದಿಯಾಗಿ ಸಾರ್ವಜನಿಕ ವಲಯದಲ್ಲಿ ಹರಡಿದ್ದಿತು. ವಿಶ್ವೇಶ್ವರಯ್ಯನವರನ್ನು ಅಧಿಕೃತವಾಗಿ ದಿವಾನರಾಗಲು ಆಹ್ವಾನಿಸಿದಾಗ ಅವರು ಮಹಾರಾಜರಿಗೆ "ನನ್ನನ್ನು ಅಭಿವೃದ್ಧಿ ಇಲಾಖೆಗಳಿಗೆ ಮೇಲ್ವಿಚಾರಣೆ ಇರುವ ಒಬ್ಬ ಕೌನ್ಸಿಲ್ ಸದಸ್ಯನನ್ನಾಗಿ ನೇಮಿಸಿದರೆ ಸಾಕು, ಇದರಿಂದ ನಾನು ರಾಜ್ಯದ ಶಿಕ್ಷಣವನ್ನು ಅಭಿವೃದ್ಧಿ ಪಡಿಸಲು, ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಇತರ ಜನೋಪಯೋಗಿ ಕೆಲಸಗಳನ್ನು ಮಾಡಲು ಅವಕಾಶ ಒದಗಿಸಿದಂತಾಗುತ್ತದೆ" ಎಂದು ನಮ್ರವಾಗಿ ದಿವಾನ ಹುದ್ದೆಯನ್ನು ನಿರಾಕರಿಸಿದರು.[೧] ಆದರೆ ಮಹಾರಾಜರು ಅದನ್ನು ಒಪ್ಪದೇ ದಿವಾನರಾಗಲೇ ಬೇಕೆಂದು ವಿಶ್ವಾಸದಿಂದ ಆಗ್ರಹಿಸಿದ್ದರಿಂದ ಅವರು ಆ ಹುದ್ದೆಯನ್ನು ಒಪ್ಪಿಕೊಂಡರು. ಆಗಲೂ ಅವರು ಮಹಾರಾಜರಿಗೆ ರಾಜ್ಯದ ಆರ್ಥಿಕ ಸ್ಥಿತಿಗತಿಗಳನ್ನು ಅಭಿವೃದ್ಧಿಪಡಿಸುವ ಮತ್ತು ಶಿಕ್ಷಣವನ್ನು ವಿಸ್ತರಿಸುವ ಕಾರ್ಯಕ್ರಮಗಳಲ್ಲಿ ತನ್ನ ಕೈ ತಡೆಯಬಾರದೆಂದು ವಿನಂತಿಸಿಕೊಂಡರು. ಮಹಾರಾಜರು ವಿಶ್ವೇಶ್ವರಯ್ಯನವರಲ್ಲಿ ಪೂರ್ಣ ವಿಶ್ವಾಸವಿಟ್ಟು ಅವರನ್ನು ೧೯೧೨ ರ ಡಿಸೆಂಬರ್‌ನಲ್ಲಿ ದಿವಾನರನ್ನಾಗಿ ನೇಮಿಸಿದರು.

ವಿಶ್ವೇಶ್ವರಯ್ಯನವರು ಹೇಗೆ ಒಬ್ಬ ಆರ್ಥಿಕ ಚಿಂತಕರಾಗಿ ಈ ಸಂಸ್ಥಾನದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು ಎಂಬುದನ್ನು ಸರಿಯಾಗಿ ಗ್ರಹಿಸಲು ಮೈಸೂರು ಸಂಸ್ಥಾನದ ಅದುವರೆಗಿನ ಸಾಧನೆಗಳೇನು ಎಂಬ ಬಗ್ಗೆ ಅರಿಯಬೇಕಾಗುತ್ತದೆ. ಅಂದು ಸರ್ಕಾರ ಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳ ಸ್ಥಾಪನೆ, ರೈಲು ಮಾರ್ಗ ಯೋಜನೆ, ಮಾರಿಕಣಿವೆ ಜಲಾಶಯ ನಿರ್ಮಾಣ ಮತ್ತು ಶಿವನಸಮುದ್ರ ಜಲವಿದ್ಯುತ್ ಯೋಜನೆ ಮೊದಲಾದ ಅಲ್ಲೊಂದು ಇಲ್ಲೊಂದು ಕೆಲಸಗಳನ್ನು ಮಾಡಿದ್ದನ್ನು ಬಿಟ್ಟರೆ ಇಡೀ ಜನಜೀವನ, ಶಿಕ್ಷಣ

---

೧ ಎಂ. ವಿಶ್ವೇಶ್ವರಯ್ಯ ಮೆಮ್ವಾರ್ಸ್ ಆಫ್ ಮೈ ವರ್ಕಿಂಗ್ ಲೈಫ್. ಪು. ೫೬.

ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಸಮಗ್ರ ಯೋಜನೆ ರೂಪುಗೊಂಡಿರಲಿಲ್ಲ. ಸಂಸ್ಥಾನಕ್ಕಿಂತ ನೆರೆಯ ಬ್ರಿಟಿಷ್ ಅಧೀನ ಪ್ರಾಂತಗಳೇ ಆರ್ಥಿಕವಾಗಿ ಮುಂದಿದ್ದವು. ಆಗ ಸಂಸ್ಥಾನ ಆರ್ಥಿಕ ಬಿಕ್ಕಟ್ಟಿನಲ್ಲಿದ್ದಿತು. ಇಂತಹ ಸನ್ನಿವೇಶದಲ್ಲಿ ವಿಶ್ವೇಶ್ವರಯ್ಯನವರು ಮುಖ್ಯ ಎಂಜಿನಿಯರ್ ಆಗಿದ್ದಾಗಲೇ ಹೇಗೆ ದೀರ್ಘಕಾಲಿಕ ಯೋಜನೆಗಳನ್ನು ಹಾಕಿದರೆಂಬುದನ್ನು ನಾವು ನೋಡಿದ್ದೇವೆ. ಅವರೇ ಹೇಳಿರುವಂತೆ ಆಗ "ನನ್ನ ಒಂದೇ ಗುರಿಯಾಗಿದ್ದದ್ದೆಂದರೆ, ಮುಖ್ಯವಾಗಿ ಶಿಕ್ಷಣ, ಕೈಗಾರಿಕೆಗಳು, ವಾಣಿಜ್ಯ ಮತ್ತು ಲೋಕೋಪಯೋಗಿ ಕಾಮಗಾರಿಗಳಲ್ಲಿ ಅಭಿವೃದ್ಧಿಗಳಾಗುವಂತೆ ಯೋಜಿಸುವುದು, ಪ್ರವರ್ಧಿಸುವುದು ಮತ್ತು ಪ್ರೋತ್ಸಾಹಿಸುವುದು. ಇದರಿಂದ ಜನರಿಗೆ ಚೆನ್ನಾಗಿ ಕೆಲಸ ಮಾಡಲು ಚೆನ್ನಾಗಿ ಸಂಪಾದಿಸಲು ಮತ್ತು ಚೆನ್ನಾಗಿ ಬದುಕಲು ಸಾಧ್ಯವಾಗುವಂತೆ ಮಾಡುವುದು.[೧]

ರಾಜ್ಯದ ಅಸ್ತಿತ್ವಕ್ಕೆ ಬಲಸಂವರ್ಧನೆ

ಈ ಮೇಲಿನ ಗುರಿಗಳನ್ನು ಸಾಧಿಸಲು ವಿಶ್ವೇಶ್ವರಯ್ಯನವರು ಒಂದೊಂದೇ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಿ ಮುನ್ನಡೆಯಬೇಕೆಂಬ ನಿಧಾನವಾದಿಗಳಾಗಿರಲಿಲ್ಲ. ಸಾರ್ವಜನಿಕ ವಲಯದ ಎಲ್ಲ ಕ್ಷೇತ್ರಗಳಲ್ಲೂ ಒಟ್ಟೊಟ್ಟಿಗೆ ಹೊಸ ಹುರುಪಿನಿಂದ ಕೆಲಸಕಾರ್ಯಗಳು ನಡೆದಾಗಲೇ ಸರಿಯಾದ ಅಭಿವೃದ್ಧಿ ಸಾಧ್ಯವೆಂದು ನಂಬಿದ್ದವರು ಅವರು. ಅದಕ್ಕಾಗಿ ಅವರು ಮೊದಲು ಇಟ್ಟ ಹೆಜ್ಜೆ ಎಂದರೆ ಸಂಸ್ಥಾನದ ಸ್ಥಾನಮಾನವನ್ನು ಬಲಪಡಿಸುವುದು. ೧೮೮೧ರ ರಾಜ್ಯಾಧಿಕಾರದ ಪುನರ್ ಸ್ಥಾಪನೆಯ ಆಜ್ಞೆಯು ಕೆಲವು ದೋಷಗಳಿಂದ ಕೂಡಿದ್ದಿತು. ಈ ಆಜ್ಞೆಯಿಂದ ಮಹಾರಾಜರ ಮನೆತನಕ್ಕೆ ರಾಜ್ಯಪಾಲನೆಯ ಅಧಿಕಾರ ದೊರೆತರೂ ಅದರಲ್ಲಿ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಯೋಜನೆಗಳನ್ನು ರೂಪಿಸಲು ರಾಜ್ಯಕ್ಕೆ ಅಂದರೆ ಮಹಾರಾಜರಿಗೆ ಸಾಕಷ್ಟು ಸ್ವತಂತ್ರ ಅಧಿಕಾರವಿರಲಿಲ್ಲ. ಈ ಅಧಿಕಾರವರ್ಗಾವಣೆಯ ಆದೇಶದ ೨೩ನೆಯ ಪ್ರಕರಣದ ಮೇರೆಗೆ ಮಹಾರಾಜರು ಅದರ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಾರೆ ಎಂದು ಗವರ್ನರ್ ಜನರಲ್ಲನು ಅಭಿಪ್ರಾಯಪಟ್ಟರೆ ಅವನು ರಾಜ್ಯಾಧಿಕಾರವನ್ನು ರಾಜಮನೆತನದ ಆಳ್ವಿಕೆಯಿಂದ ಹಿಂದಕ್ಕೆ ಪಡೆಯುವ ಅಧಿಕಾರ ಹೊಂದಿದ್ದನು. ಈ ಪರಿಸ್ಥಿತಿಯಿಂದಾಗಿ ಮಹಾರಾಜರು ಸದಾ ಆತಂಕದ ಸ್ಥಿತಿಯಲ್ಲಿರುವಂತಾಗಿತ್ತು. ವಿಶ್ವೇಶ್ವರಯ್ಯನವರು ಆಗಿನ ಬ್ರಿಟಿಷ್ ರೆಸಿಡೆಂಟ್ ಆಗಿದ್ದ ಸರ್ ಹ್ಯೂಡ್ಯಾಲಿಯವರ ಸಹಕಾರ ಮತ್ತು ಬೆಂಬಲ ಪಡೆದು ಈ ಪರಿಸ್ಥಿತಿಯ ಸುಧಾರಣೆಗೆ ಬ್ರಿಟಿಷ್ ಸರ್ಕಾರದೊಡನೆ ಸಂಧಾನ ನಡೆಸಿದರು. ಇದು ೧೯೧೩ರ ನವಂಬರ್‌ನಲ್ಲಿ ವೈಸರಾಯ್ ಲಾರ್ಡ್ ಹಾರ್ಡಿಂಜ್ ದಂಪತಿಗಳು ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದಾಗ ಒಂದು ನಿರ್ಣಾಯಕ ಘಟ್ಟ ತಲುಪಿತು. ೧೯೧೩ರ ನವಂಬರ್‌ನಲ್ಲಿ ಮಹಾರಾಜರು ಮತ್ತು ರೆಸಿಡೆಂಟರು ರುಜು ಮಾಡಿದ ಒಪ್ಪಂದವನ್ನು ವೈಸರಾಯ್‌ರವರು ಸಾರ್ವಜನಿಕ ಸಭೆಯಲ್ಲಿ ಪ್ರಕಟಿಸಿದರು. ಅವರು "ಇದು ಭಾರತದ ಸಾಮಂತರಾಜರ ನಡುವೆ ನಿಮ್ಮ ಮಹಾರಾಜರು ಹೊಂದಿರುವ ಸಮಾನ ಸ್ಥಾನಮಾನಕ್ಕೆ ಅನುಗುಣವಾಗಿ ನಮ್ಮ ಸಂಬಂಧಗಳನ್ನು

---

೧ ಎಂ. ವಿಶ್ವೇಶ್ವರಯ್ಯ ಮೆಮ್ಯಾರ್ಸ್ ಆಫ್ ಮೈ ವರ್ಕಿಂಗ್ ಲೈಫ್, ಪು. ೫೬.

ನಿರ್ದಿಷ್ಟಪಡಿಸುತ್ತದೆ" ಎಂದು ಘೋಷಿಸಿದರು. ಇದರಿಂದ ಬ್ರಿಟಿಷ್ ಸರ್ಕಾರ ಸಾಮಾನ್ಯ ಕಾರಣಗಳಿಗೆ ಮಹಾರಾಜರ ಅಧಿಕಾರ ಕಿತ್ತು ಹಾಕುವ ಸಂಭವವನ್ನು ತಪ್ಪಿಸಿತು ಹಾಗೂ ಆಂತರಿಕ ವ್ಯವಹಾರಗಳಲ್ಲಿ ಅದು ಮಧ್ಯೆ ಪ್ರವೇಶಿಸುವುದಿಲ್ಲವೆಂಬ ಭರವಸೆ ನೀಡಿತು. ಇದರಿಂದಾಗಿ ರಾಜ್ಯಕ್ಕೆ ಶಾಸನಬದ್ಧ ಅಸ್ತಿತ್ವ ಬಂದಂತಾಗಿತ್ತು.

ಮಹಾರಾಜರು ದಿವಾನ್ ವಿಶ್ವೇಶ್ವರಯ್ಯನವರಿಗೆ ಕೃತಜ್ಞತೆ ಸಲ್ಲಿಸುವ ಪತ್ರ ಬರೆದರು. ಅದರಲ್ಲಿ "ವೈಸರಾಯ್‌ರವರು ರಾಜ್ಯಕ್ಕೆ ಭೇಟಿಕೊಟ್ಟು ಹೋದ ನಂತರದ ಈ ಹೊತ್ತಿನಲ್ಲಿ ಅಧಿಕಾರ ವರ್ಗಾವಣೆ ಘೋಷಣೆಗೆ ಸಂಬಂಧಿಸಿದಂತೆ ನೀವು ಮಾಡಿದ ಕಾರ್ಯಕ್ಕಾಗಿ ನಾವು ನಮ್ಮ ಪ್ರಾಮಾಣಿಕ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇವೆ. ನಾವು ವೈಸರಾಯರಲ್ಲಿ ಮಾಡಿಕೊಂಡ ಮನವಿಯು ಯಶಸ್ವಿಯಾಗಲು ನೀವು ಅವರ ಮುಂದೆ ಸಮರ್ಥವಾಗಿ ಮತ್ತು ಮನಮುಟ್ಟುವಂತೆ ಮಾಡಿದ ವಿಷಯ ಮಂಡನೆಯು ಬೀರಿದ ಪರಿಣಾಮವು ಗಮನಾರ್ಹವಾದುದೆಂಬ ಸಂಪೂರ್ಣ ಅರಿವು ನಮಗಿದೆ. ನೀವು ಈ ಮೂಲಕ ನಮಗೆ ಮತ್ತು ನಮ್ಮ ರಾಜ್ಯಕ್ಕೆ ಸಲ್ಲಿಸಿದ ದೊಡ್ಡ ಸೇವೆಯ ಬಗ್ಗೆ ನಾವು ನಿಮ್ಮನ್ನು ಎಷ್ಟು ಅಭಿನಂದಿಸಿದರೂ ಅದು ಕಡಿಮೆ ಎಂದೇ ಭಾವಿಸಿದ್ದೇವೆ. ಇದನ್ನು ನಾವು ಸದಾ ಗಾಢವಾದ ಕೃತಜ್ಞತಾ ಭಾವನೆಯಿಂದ ಸ್ಮರಿಸಿಕೊಳ್ಳುತ್ತೇವೆ."[೧] ಎಂದು ದಾಖಲಿಸಿದರು. ಮಹಾರಾಜರು ತನ್ನ ದಿವಾನರಿಗೆ ಇಷ್ಟೊಂದು ಆಭಾರಿಯಾಗಿ ಪತ್ರ ಬರೆಯಲು ಇದರಲ್ಲಿ ವಿಶ್ವೇಶ್ವರಯ್ಯನವರು ಮುಂಬಯಿ ಸರ್ಕಾರದ ಸೇವೆಯಲ್ಲಿದ್ದಾಗಲೇ ಭಾರತ ಸರ್ಕಾರದ ಗಣ್ಯರ ದೃಷ್ಟಿಗೆ ಬಿದ್ದಿದ್ದವರು. ಅವರ ಪ್ರಾಮಾಣಿಕತೆ ಮತ್ತು ದಕ್ಷತೆಗಳು ಅವರಿಗೆ ವೈಸರಾಯ್‌ರಲ್ಲಿ ಸದಭಿಪ್ರಾಯ ಮೂಡಲು ಕಾರಣವಾಗಿದ್ದವು. ಈ ಕಾರ್ಯ ಅವರಿಂದ ಮಾತ್ರ ಸಾಧ್ಯವಾದುದಕ್ಕಾಗಿ ಮಹಾರಾಜರು ಈ ವಿಶೇಷ ಕೃತಜ್ಞತಾ ಪತ್ರ ಬರೆದರು.

ಈ ಮೇಲಿನ ಘಟನೆಯು ವಿಶ್ವೇಶ್ವರಯ್ಯನವರಿಗೆ ಎರಡು ಬಗೆಯ ಅನುಕೂಲಗಳನ್ನು ಕಲ್ಪಿಸಿತು. ಮೊದಲನೆಯದಾಗಿ ಮೈಸೂರು ಸಂಸ್ಥಾನದ ಅಭಿವೃದ್ಧಿ ಯೋಜನೆಗಳನ್ನು ಅಭಾಧಿತವಾಗಿ ರೂಪಿಸಿ ಕಾರ್ಯಗತಗೊಳಿಸಲು ಬ್ರಿಟಿಷ್ ಸರ್ಕಾರದ ಅಡ್ಡಿ ನಿವಾರಣೆ ಯಾದಂತಾಗಿತ್ತು. ಎರಡನೆಯದಾಗಿ ಮಹಾರಾಜರು ವಿಶ್ವೇಶ್ವರಯ್ಯನವರ ಮೇಲೆ ತೋರಿಸಿದ ಅಖಂಡ ವಿಶ್ವಾಸವು ಅವರಿಗೆ ಆಡಳಿತದಲ್ಲಿ ನಿಯಂತ್ರಣ ಸಾಧಿಸಲು ಮತ್ತು ಸ್ವತಂತ್ರವಾಗಿ ನಿರ್ಧಾರಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಿತು.

ಪೂರ್ವಭಾವಿ ಸುಧಾರಣೆಗಳು

ವಿಶ್ವೇಶ್ವರಯ್ಯನವರು ದೇಶವು ಸಮಗ್ರ ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ ಮೊದಲು ಸರ್ಕಾರ ಚುರುಕಾಗಬೇಕೆಂದು ಭಾವಿಸಿದ್ದರು. ಅದಕ್ಕಾಗಿ ಹಿಂದೆ ಹನ್ನೊಂದು ಘಂಟೆಗೆ ಕಛೇರಿಗೆ ಬರುತ್ತಿದ್ದ ಅಧಿಕಾರಿಗಳನ್ನು ಅವರೂ ಇತರರಂತೆ ಹೊತ್ತಿಗೆ ಸರಿಯಾಗಿ ಬಂದು ಕೆಲಸದಲ್ಲಿ ತೊಡಗುವಂತೆ ಮಾಡಿದರು. ಗಡ್ಡಬಿಟ್ಟುಕೊಂಡು ಬರುತ್ತಿದ್ದವರಿಗೆ ಹಾಗೆ ಮಾಡದೆ ನೀಟಾಗಿ ಮುಖ ಚೌರಮಾಡಿಕೊಂಡು ಬರುವಂತೆ ಪ್ರೋತ್ಸಾಹಿಸಿದರು.

೧ ಅದೇ, ಪು. ೬೨.

ಅಡ್ಡಪಂಚೆಗಳು ಕಡಿಮೆಯಾಗಿ ಪ್ಯಾಂಟ್, ಷರಟು ಮತ್ತು ಟೈಗಳು ಕಾಣಿಸಿಕೊಂಡವು. ವಿಶ್ವೇಶ್ವರಯ್ಯನವರು ಪೇಟಧರಿಸಿ ಸೂಟು ಹಾಕುತ್ತಿದ್ದುದನ್ನು ಅನೇಕ ಅಧಿಕಾರಿಗಳು ಅನುಕರಿಸಿದರು. ಅಧಿಕೃತ ವೇಳೆ ಮೀರಿ ಕೆಲಸ ಮಾಡುವುದು ಅಪೇಕ್ಷಣೀಯ ಎಂದು ಅವರು ತೋರಿಸಿಕೊಟ್ಟರು. ಲಂಚರುಷವತ್ತು ಮಹಾಪಾಪಗಳೆಂಬ ಭಾವನೆ ಬೆಳೆಸಿದರು. ಹೀಗೆ ಒಂದು ಸರ್ಕಾರಿ ವ್ಯವಸ್ಥೆಯನ್ನು ಆಧುನಿಕ ಅಭಿವೃದ್ಧಿಯತ್ತ ಸಜ್ಜುಗೊಳಿಸಲು ಅವರ ವೈಯಕ್ತಿಕ ಪ್ರಭಾವ ಸಾಕಷ್ಟು ಕಾರಣವಾಯಿತು.

ಸಮಗ್ರ ಅಭಿವೃದ್ಧಿಯ ಪರಿಕಲ್ಪನೆ

ವಿಶ್ವೇಶ್ವರಯ್ಯನವರು ಸಮಗ್ರ ಅಭಿವೃದ್ಧಿ ಸಿದ್ಧಾಂತದ ಪ್ರತಿಪಾದಕರಾಗಿದ್ದರು. ಶಿಕ್ಷಣ ಕ್ಷೇತ್ರ ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ ಅತಿ ಮುಖ್ಯವಾದ ಪರಿವರ್ತನೆ ಕಂಡಿತು. ಅವರು ೧೯೧೧ರಲ್ಲಿ ಮಾಡಿದ ಒಂದು ಭಾಷಣದಲ್ಲಿ ಹೇಳಿದ ಮಾತುಗಳು ಗಮನಾರ್ಹ ವಾಗಿವೆ "ಇಪ್ಪತ್ತನೆಯ ಶತಮಾನದ ಶೈಕ್ಷಣಿಕ ಸಿದ್ಧಾಂತವೆಂದರೆ ಜನತೆಯ ಕೆಲಸಕ್ಕಾಗಿ ಎಲ್ಲ ಜನರಿಗೆ ಶಿಕ್ಷಣ ಎಂಬುದಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಸಾಮಾನ್ಯ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣಕ್ಕಾಗಿ ಮಾಡುವ ವೆಚ್ಚ ಒಂದು ರಾಷ್ಟ್ರೀಯ ಹೂಡಿಕೆ ಎಂದು ಪರಿಗಣಿತ ವಾಗಿದೆ. ಆದ್ದರಿಂದಲೇ ಬಹುತೇಕ ಪಾಶ್ಚಾತ್ಯ ದೇಶಗಳು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿವೆ. ಪ್ರತಿಯೊಬ್ಬರಿಗೂ ಸೂಕ್ತ ವಯಸ್ಸಿನಲ್ಲಿ ಶಿಕ್ಷಣ ನೀಡುವ ಮೂಲಕ ನಾಗರಿಕರು ತಮ್ಮ ಜೀವನ ನಿರ್ವಹಣೆಯನ್ನು ಸರಿಯಾದ ಮಾರ್ಗದಲ್ಲಿ ಕಂಡುಕೊಳ್ಳುವ ಸಾಮರ್ಥ್ಯ ಹೊಂದುವಂತೆ ಮಾಡಬಹುದು."[೧] ಹೀಗೆ ಶಿಕ್ಷಣ ದೇಶದ ಸಮಸ್ಯೆಗಳಿಗೆ ಮಹಾಚಿಕಿತ್ಸಕ ಎಂಬ ಅಭಿಪ್ರಾಯಹೊಂದಿದ್ದ ವಿಶ್ವೇಶ್ವರಯ್ಯನವರಿಗೆ ರಾಜ್ಯದ ಶಿಕ್ಷಣ ಅಭಿವೃದ್ಧಿಗೆ ರೂಪುರೇಷೆಗಳನ್ನು ಹಾಕಲು ೧೯೧೧ರಲ್ಲಿಯೇ ಅವಕಾಶ ದೊರಕಿದ್ದಿತು. ಆರ್ಥಿಕ ಪರಿಷತ್ತು ರಾಜ್ಯದಲ್ಲಿ ಶಿಕ್ಷಣದ ಸಮಗ್ರ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಲು ಇಬ್ಬರು ಮೇಧಾವಿಗಳ ಅಧ್ಯಕ್ಷತೆಯಲ್ಲಿ ಎರಡು ಪ್ರತ್ಯೇಕ ಉಪಸಮಿತಿಗಳನ್ನು ರಚಿಸಿದ್ದಿತು. ಪ್ರಾಥಮಿಕ ಮತ್ತು ಕಡ್ಡಾಯ ಶಿಕ್ಷಣದ ಬಗ್ಗೆ ಅಂದಿನ ಜಿಲ್ಲಾಧಿಕಾರಿ ಎಂ. ಶಾಮರಾವ್ ಅವರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿ ರಚಿತವಾದರೆ ಅಂದಿನ ಮುಖ್ಯ ಎಂಜಿನಿಯರ್ ಆಗಿದ್ದ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಶಿಕ್ಷಣದ ಅಭಿವೃದ್ಧಿಯ ಬಗ್ಗೆ ವರದಿ ಸಲ್ಲಿಸಲು ಇನ್ನೊಂದು ಸಮಿತಿ ರಚಿತಗೊಂಡಿತು. ಈ ಎರಡೂ ಸಮಿತಿಗಳ ವರದಿಗಳು ೧೯೧೨ರಲ್ಲಿ ಸರ್ಕಾರಕ್ಕೆ ಸಲ್ಲಿಸಲ್ಪಟ್ಟವು. ಈ ಎರಡು ವರದಿಗಳನ್ನು ಪರಿಶೀಲಿಸಿದ ಆರ್ಥಿಕ ಪರಿಷತ್ತು ಮುಂದಿನ ದಶಕದಲ್ಲಿ ರಾಜ್ಯದಲ್ಲಿ ಕೈಗೊಳ್ಳಬೇಕಾದ ಶಿಕ್ಷಣ ಯೋಜನೆಗಳ ಬಗ್ಗೆ ಒಂದು ನೀಲಿ ನಕಾಶೆಯನ್ನು ಸಿದ್ಧಪಡಿಸಿತು.

ಈ ಯೋಜನೆಯಂತೆ ೧) ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸುವುದು, ೨) ಕಡ್ಡಾಯ ಶಿಕ್ಷಣವನ್ನು ಜಾರಿ ಮಾಡುವುದು, ೩) ಎಸ್.ಎಸ್.ಎಲ್.ಸಿ ಪರೀಕ್ಷೆ ಪ್ರಾರಂಭಿಸುವುದು; ೪) ತಾಂತ್ರಿಕ ಶಿಕ್ಷಣವನ್ನು ಅಭಿವೃದ್ಧಿಪಡಿಸುವುದು, ೫) ಸ್ಥಳೀಯ ವಿಶ್ವವಿದ್ಯಾನಿಲಯ

---

೧ ಎಂ. ವಿಶ್ವೇಶ್ವರಯ್ಯ ಸ್ಪೀಚಸ್, ಪು. ೧೭.

ಸ್ಥಾಪಿಸುವುದು, ೬) ಶೈಕ್ಷಣಿಕ ಪ್ರಗತಿಗಾಗಿ ಖಾಸಗಿ ಏಜೆನ್ಸಿ ಮತ್ತು ನಿಧಿಗಳನ್ನು ಗುರುತಿಸುವುದು. ಇವು ಮುಖ್ಯ ಕಾರ್ಯಕ್ರಮಗಳಾಗಿದ್ದವು.[೧] ೧೯೧೨ರ ಜೂನ್ ೧೯ ರಂದು ಎಂ. ಶಾಮರಾವ್‌ರವರು ಶಿಕ್ಷಣ ಇಲಾಖೆಯ ಮುಖ್ಯರಾಗಿ ನೇಮಕವಾದರೆ ಅದೇ ವರ್ಷದ ನವೆಂಬರ್ ೧೦ರಂದು ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿ ನೇಮಕವಾದರು. ಈ ವರದಿಗಳನ್ನು ಸಿದ್ಧಪಡಿಸಿದವರೇ ಅವುಗಳ ಅನುಷ್ಠಾನ ಅಧಿಕಾರ ಸ್ಥಾನಕ್ಕೆ ಬಂದಿದ್ದು ಒಂದು ಅಪರೂಪದ ಸಂದರ್ಭವೆಂದೇ ಹೇಳಬಹುದು.

ಮುಂದೆ ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಅವಧಿಯಲ್ಲಿ ಶಿಕ್ಷಣ ಕ್ಷೇತ್ರವು ಕ್ರಾಂತಿಕಾರಕ ಬದಲಾವಣೆಗಳನ್ನು ಕಂಡದ್ದು ತಿಳಿದ ವಿಷಯವೇ ಆಗಿದೆ. ೧) ಶಿಕ್ಷಣ ಇಲಾಖೆಯ ಪುನರ್ ಸಂಘಟನೆ, ೨) ಪ್ರಾಥಮಿಕ ಶಿಕ್ಷಣ ನಿಬಂಧನೆ -೧೯೧೩ರ ಜಾರಿ, ೩) ಅನುದಾನ ಶಾಲೆಗಳ ವ್ಯಾಪಕ ಹೆಚ್ಚಳ, ೪)ಎಸ್.ಎಸ್.ಎಲ್.ಸಿ. ಶಿಕ್ಷಣ ಜಾರಿಗೆ ತಂದು ಮದ್ರಾಸಿನ ಮೆಟ್ರಿಕ್ಯೂಲೇಷನ್ ಪರೀಕ್ಷೆಗೆ ಕುಳಿತುಕೊಳ್ಳಬೇಕಾದ ಅನಿವಾರ್ಯತೆ ತಪ್ಪಿಸಿದ್ದು, ೫) ಮೈಸೂರು ರಾಜ್ಯದ ಕಾಲೇಜುಗಳನ್ನು ಮದ್ರಾಸ್ ವಿಶ್ವವಿದ್ಯಾನಿಲಯದ ಹಿಡಿತದಿಂದ ತಪ್ಪಿಸಿ ಪ್ರತ್ಯೇಕ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದು (೧೯೧೬) (೬) ತಾಂತ್ರಿಕ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿ ಅದಕ್ಕೆ ಶಿಖರಪ್ರಾಯವಾಗಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಿದ್ದು, ೭) ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ ಸ್ಥಾಪನೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ ಸ್ಥಾಪನೆ, ಕೈಗಾರಿಕಾ ಶಾಲೆಗಳ ಸ್ಥಾಪನೆ ಇವು ಅಂದಿನ ಶೈಕ್ಷಣಿಕ ಅಭಿವೃದ್ಧಿಯ ಹೆಗ್ಗುರುತುಗಳು. ಇವಲ್ಲದೆ ಮಹಿಳಾ ಶಿಕ್ಷಣ, ಅಸ್ಪೃಶ್ಯರಿಗೆ ಸರ್ಕಾರಿ ಶಾಲೆಗಳಲ್ಲಿ ಪ್ರವೇಶ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ, ಸಾರ್ವಜನಿಕ ಗ್ರಂಥಾಲಯಗಳು ಮತ್ತು ವಾಚನಾಲಯಗಳ ಸ್ಥಾಪನೆಯ ಮೂಲಕ ರಾಜ್ಯದಲ್ಲಿ ಒಂದು ಶೈಕ್ಷಣಿಕ ವಾತಾವರಣ ನಿರ್ಮಿಸಿದ ಕೀರ್ತಿ ವಿಶ್ವೇಶ್ವರಯ್ಯನವರದು. ಶಿಕ್ಷಣವೇ ಸಕಲ ಸಮಸ್ಯೆಗಳಿಗೆ ಸಂಜೀವಿನಿ ಎಂದು ಭಾವಿಸಿದ್ದ ಅವರು ಶಿಕ್ಷಣದ ಭದ್ರಬುನಾದಿಯ ಮೇಲೆ ತಮ್ಮ ಕನಸಿನ ಬಲಿಷ್ಠ ಮೈಸೂರು ರಾಜ್ಯವನ್ನು ಕಟ್ಟಲು ಯೋಚಿಸಿದ್ದರು.

ಕೈಗಾರಿಕೆಗಳ ಸ್ಥಾಪನೆ

ವಿಶ್ವೇಶ್ವರಯ್ಯನವರು ಕೈಗಾರಿಕೀಕರಣದ ಪ್ರತಿಪಾದಕಾಗಿದ್ದರು. ಅವರ "ಕೈಗಾರಿಕೀಕರಣ ಇಲ್ಲವೇ ಅವನತಿ" ಎಂಬ ಅವರ ಸೂಕ್ತಿ ಲೋಕಪ್ರಸಿದ್ಧವಾಗಿದೆ. ಅವರು ಮೈಸೂರು ಸಂಸ್ಥಾನವನ್ನು ಮಾತ್ರವಲ್ಲದೇ ಸಮಗ್ರ ಭಾರತವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕೈಗಾರಿಕೀಕರಣವನ್ನು ಪ್ರತಿಪಾದಿಸುತ್ತಿದ್ದರು. ಅವರು ತಮ್ಮ ಆರ್ಥಿಕ ನೀತಿಯನ್ನು ಪ್ರತಿಪಾದಿಸುವ ಎರಡು ಗ್ರಂಥಗಳನ್ನು ಬರೆದಿದ್ದಾರೆ. ಅವೆಂದರೆ 'ರಿಕನ್‌ಸ್ಟ್ರಕ್ಟಿಂಗ್ ಇಂಡಿಯಾ (೧೯೨೦) ಮತ್ತು 'ಪ್ಲಾನಡ್ ಎಕೊನಮಿ ಫಾರ್ ಇಂಡಿಯಾ' (೧೯೩೪). ಇವುಗಳಲ್ಲಿ ಅವರು ಪ್ರತಿಪಾದಿಸಿದ ಅನೇಕ ವಿಚಾರಗಳು ಅವರು ಮೈಸೂರು ರಾಜ್ಯದಲ್ಲಿ ಕೈಗೊಂಡ

೧ ರಿವೀವ್ ಆಫ್ ದಿ ಪ್ರೋಗ್ರೆಸ್ ಆಫ್ ಎಜುಕೇಷನ್ ಇನ್ ದ ಮೈಸೂರು ಸ್ಟೇಟ್-ಕ್ವಿನ್‌ಕ್ವೆನಿಯಂ, ೧೯೧೧-೧೬. ಪು. ೪೮.

ಕಾರ್ಯಯೋಜನೆಗಳ ಪರಿಣಾಮವೇ ಆಗಿವೆ. ಕೈಗಾರಿಕೆ ಮತ್ತು ವ್ಯಾಪಾರದ ವಿಸ್ತರಣೆ ಕೇವಲ ಬ್ರಿಟಿಷರ ಪಾರುಪತ್ಯಕ್ಕೆ ಒಳಗಾಗಿದೆ. ಅದರ ಕಾರ್ಯನೀತಿಯನ್ನು ರೂಪಿಸುವಲ್ಲಾಗಲಿ ಅದರ ಕಾರ್ಯನಿರ್ವಹಣೆ ಯಲ್ಲಾಗಲಿ ದೇಶೀಯ ಪಾಲು ಗೌಣ ಎಂಬುದು ಅವರ ವಿಷಾದವಾಗಿದ್ದಿತು. ಕೈಗಾರಿಕಾ ಚಟುವಟಿಕೆಗಳು ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುತ್ತವೆ ಮತ್ತು ವ್ಯವಸಾಯಕ್ಕಿಂತ ಅವು ಹೆಚ್ಚು ಲಾಭ ತರುತ್ತವೆ ಎಂದು ಅವರು ಪ್ರತಿಪಾದಿಸಿದ್ದಾರೆ.[೧] ಕೈಗಾರಿಕೆಗಳು ಭಾರತ ಅಥವಾ ಮೈಸೂರು ಸಂಸ್ಥಾನದಂತಹ ನಾಡಿನಲ್ಲಿ ತನ್ನಷ್ಟಕ್ಕೆ ಅಂದರೆ ಖಾಸಗಿ ಪ್ರಯತ್ನದಿಂದಷ್ಟೇ ಬೆಳೆಯಲಾರದೆಂದು ಅವರು ಭಾವಿಸಿದ್ದರು. ಈ ಕಾರಣಕ್ಕಾಗಿಯೇ ಅವರು ಮೊದಲಿಗೆ ಕೈಗಾರಿಕೆಗೆ ಅಗತ್ಯವಾದ ಕುಶಲತಂತ್ರಜ್ಞರನ್ನು ಸಿದ್ಧಪಡಿಸಲು ಹಲವಾರು ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದರು. ಅನಂತರ ತೀರ ಅಗತ್ಯವಾದ ಮತ್ತು ಸಣ್ಣ ಪ್ರಮಾಣದ ಬಂಡವಾಳದ ಕೈಗಾರಿಕೆಗಳ ಸ್ಥಾಪನೆಗೆ ಗಮನಕೊಟ್ಟರು. ಕೊನೆಯಲ್ಲಿ ಬೃಹತ್ ಪ್ರಮಾಣದ ಕಾರ್ಖಾನೆ ಸ್ಥಾಪಿಸಲುದ್ಯುಕ್ತರಾದರು. ಅವರ ಮಾತಿನಲ್ಲೇ ಹೇಳುವುದಾದರೆ "ಪ್ರಯೋಗ ಕಾರ್ಯಗಳನ್ನು ಕೈಗೊಳ್ಳುವುದು, ಕೆಲವು ಕೈಗಾರಿಕೆಗಳನ್ನು ಸ್ಥಾಪಿಸುವುದು, ಅವುಗಳನ್ನು ಯಶಸ್ವಿಯಾಗಿ ನಡೆಸಿ ಖಾಸಗಿ ಕಂಪನಿಗಳಿಗೆ ವಹಿಸುವುದು, ಖಾಸಗಿಯವರು ಸ್ಥಾಪಿಸುವ ಹೊಸ ಕೈಗಾರಿಕೆಗಳಿಗೆ ಪ್ರಾರಂಭದ ನಿಗದಿತ ವರ್ಷಗಳಿಗೆ ಹೂಡಿದ ಬಂಡವಾಳಕ್ಕೆ ಬಡ್ಡಿ ಖಾತರಿ ನೀಡುವುದು, ಈಗಾಗಲೇ ಹೊರಡಿಸಲಾಗಿರುವ ಆದೇಶಗಳಿಗನುಗುಣವಾಗಿ ತಕಾವಿಸಾಲ ನೀಡುವುದು, ಕೆಲವು ವರ್ಷಗಳ ಕಾಲ ಕಂಪನಿಗಳಿಗೆ ಸಹಾಯಧನ ನೀಡುವುದು, ಕಾರ್ಯಾಗಾರಗಳು, ಪ್ರಾಯೋಗಿಕ ಕಾರ್ಯ ಮತ್ತು ಸಿಬ್ಬಂದಿ ತರಬೇತಿ ನೀಡುವ ಮೂಲಕ ಉತ್ಪಾದನೆಯ ಹೆಚ್ಚಳಕ್ಕೆ ಪ್ರೋತ್ಸಾಹಿಸುವುದು.[೨] ಇವು ಸರ್ಕಾರ ಮಾಡಬಹುದಾದ ಕೆಲಸಗಳು." ಅವರು ಕೈಗಾರಿಕೆಗಳ ಸ್ಥಾಪನೆಗೆ ತಮ್ಮ ದೇಶದ ಆರ್ಥಿಕ ದುಃಸ್ಥಿತಿಯ ಅರಿವಿದ್ದು ಕೊಂಡೇ ಪ್ರಯತ್ನಿಸಿದರು. "ನಾವು ಉತ್ಪಾದನೆಯಲ್ಲಿ ಐರೋಪ್ಯ ದೇಶಗಳ ಗುಣಮಟ್ಟವನ್ನು ಸಾಧಿಸುವ ಆಕಾಂಕ್ಷೆ ಹೊಂದುವಂತಿಲ್ಲ. ನಾವು ಈ ಸ್ಪರ್ಧೆಯಲ್ಲಿ ಗುರುತಿಸಿಕೊಳ್ಳುವುದು ಸಾಧ್ಯವಿಲ್ಲ"[೩] ಎಂದು ಭಾವಿಸಿದ್ದರು.

ಕೈಗಾರಿಕೆಗಳ ಅಭಿವೃದ್ಧಿಗೆ ಪೂರ್ವಭಾವಿಯಾಗಿ ೧೯೧೩ರಲ್ಲಿ ಸಂಸ್ಥಾನದಲ್ಲಿ ಕೈಗಾರಿಕಾ ಇಲಾಖೆಯನ್ನು ಸ್ಥಾಪಿಸಿದರು. ಎ. ಚಾಟರ್‌ಟನ್‌ರವರನ್ನು ಅದರ ನಿರ್ದೇಶಕರನ್ನಾಗಿ ನೇಮಿಸಲಾಯಿತು. ಸರ್ಕಾರ ತನ್ನ ಇಲಾಖೆಗಳಿಗೆ ಕೈಗಾರಿಕಾ ಸಾಮಗ್ರಿಗಳನ್ನು ಖರೀದಿಸುವಾಗ ಮೈಸೂರಿನಲ್ಲೇ ದೊರೆಯುವ ಕಚ್ಚಾವಸ್ತುಗಳಿಂದ ಮೈಸೂರು ರಾಜ್ಯದಲ್ಲೇ ತಯಾರಿಸಿದ ಸಾಮಗ್ರಿಗಳನ್ನು ಖರೀದಿಸಲು ಆದ್ಯತೆ ನೀಡಲು ನಿರ್ಧರಿಸಿತು. ೧೯೧೪ರ ಏಪ್ರಿಲ್‌ನಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹ ಕೊಡಲು ಸಾಲನಿಧಿ ಸ್ಥಾಪಿಸಲಾಯಿತು.

ಕೈಗಾರಿಕೆಗಳಿಗೆ ದೊಡ್ಡ ಪ್ರಮಾಣದಲ್ಲಿ ಬಂಡವಾಳ, ತಾಂತ್ರಿಕತೆ ಮತ್ತು ವ್ಯವಸ್ಥಾಪನೆಗಳು ಅಗತ್ಯವಾಗಿರುವುದರಿಂದ ಅವುಗಳ ಅಭಿವೃದ್ಧಿಯಲ್ಲಿ ಸರ್ಕಾರ ನೇರವಾಗಿ

---

೧ ಎಂ. ವಿಶ್ವೇಶ್ವರಯ್ಯ : ರಿಕನ್‌ಸ್ಟ್ರಕ್ಟಿಂಗ್ ಇಂಡಿಯಾ, ಪು. ೧೩೩-೫೪.

೨ ಎಂ. ವಿಶ್ವೇಶ್ವರಯ್ಯ ಸ್ಪೀಚಸ್, ಪು. ೨೪೯.

೩ ಅದೇ, ಪು. ೨೪೦.

ಭಾಗಿಯಾಗದೆ ಕೇವಲ ಖಾಸಗಿ ಕ್ಷೇತ್ರಕ್ಕೆ ಬಿಟ್ಟು ಕೈಕಟ್ಟಿ ಕೂರಬಾರದೆಂಬುದು ಅವರ ನಿಲುವಾಗಿತ್ತು. ಸರ್ಕಾರವು ತಾನೇ ಗಂಧದ ಎಣ್ಣೆ ಕಾರ್ಖಾನೆ ಸ್ಥಾಪಿಸಲು ಮುಂದಾಯಿತು. ಇದರ ಫಲವಾಗಿ ೧೯೧೬ರಿಂದ ಬೆಂಗಳೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ ಉತ್ಪಾದನೆ ಆರಂಭಿಸಿತು. ೧೯೧೭ರಲ್ಲಿ ಮೈಸೂರಿನಲ್ಲಿ ಇಂತಹದೇ ಕಾರ್ಖಾನೆ ಅಸ್ತಿತ್ವಕ್ಕೆ ಬಂದಿತು. ಇದಲ್ಲದೆ ಕಾಗದ ಕಾರ್ಖಾನೆ, ಮರದ ಡಿಸ್ಟಿಲೇಷನ್ ಸ್ಥಾವರ, ಔಷಧ ವಸ್ತುಗಳ ತಯಾರಿಕೆ, ಬಟ್ಟೆ, ಪೆನ್ಸಿಲ್, ಗಾಜು, ಗುಂಡಿ, ಸಿಮೆಂಟ್, ಬೆಂಕಿಕಡ್ಡಿ, ಹತ್ತಿಬೀಜದಿಂದ ಎಣ್ಣೆ ತೆಗೆಯುವುದು, ತೆಂಗಿನ ನಾರು ತಯಾರಿಕೆ, ಸಕ್ಕರೆ, ಬೆಲ್ಲ, ನೇಯ್ಗೆ - ಇವುಗಳಿಗೆ ಸಂಬಂಧಿಸಿದ ಯೋಜನೆಗಳು ಮುಖ್ಯವಾದವು. ಬೆಂಗಳೂರಿನಲ್ಲಿ ಸ್ಥಳೀಯ ತಯಾರಿಕೆಯ ಕೈಗಾರಿಕಾ ವಸ್ತುಗಳ ಪ್ರದರ್ಶನಕ್ಕೆ ಕೈಗಾರಿಕಾ ವಸ್ತು ಸಂಗ್ರಹಾಲಯವನ್ನು ತೆಗೆಯಲಾಯಿತು. ಸರ್ಕಾರ ಕೈಗೊಂಡ ಈ ಕಾರ್ಯಕ್ರಮಗಳು ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಸಹಕಾರಿಯಾದವು.

೧೯೧೫ರಲ್ಲಿ ರಾಜ್ಯದಲ್ಲಿ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಕೈಗೊಳ್ಳಬೇಕಾದ ಕೈಗಾರಿಕಾ ಚಟುವಟಿಕೆಗಳ ಬಗ್ಗೆ ಸಮಗ್ರ ಯೋಜನೆಯೊಂದನ್ನು ಸಿದ್ಧಪಡಿಸಲಾಯಿತು. ಈ ೨೫ ಲಕ್ಷ ರೂ.ಗಳ ಯೋಜನೆಯ ವಿವರಗಳು ಈ ಮುಂದಿನಂತಿವೆ ;

೧	ಕಾರ್ಯಾಗಾರ ಸ್ಥಾಪನೆ ಮತ್ತು ಕೈಗಾರಿಕಾ ಪ್ರಯೋಗಗಳು	೫ ಲಕ್ಷರೂ.ಗಳು
೨	ಕಬ್ಬಿಣ ಮತ್ತು ಉಕ್ಕು ತಯಾರಿಕೆ	೪ ಲಕ್ಷ ರೂ.ಗಳು
೩	ಜಾಯಿಂಟ್ ಸ್ಟಾಕ್ ಕಂಪನಿಗಳ ಷೇರುಗಳನ್ನು ಖರೀದಿಸುವುದು	೫ ಲಕ್ಷ ರೂ.ಗಳು
೪	ಗೃಹ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಪ್ರೋತ್ಸಾಹ	೧ ಲಕ್ಷ ರೂ.ಗಳು.
೫.	ಕೈಗಾರಿಕೆಗಳ ಸ್ಥಾಪನೆ	೧೦. ಲಕ್ಷ ರೂ.ಗಳು
	ಒಟ್ಟು	೨೫ ಲಕ್ಷ ರೂ.ಗಳು

ವಿಶ್ವೇಶ್ವರಯ್ಯನವರು ಈ ಯೋಜನೆ ಸಿದ್ಧಪಡಿಸುವ ಹೊತ್ತಿಗೆ ರಾಜ್ಯದ ಆರ್ಥಿಕ ಸ್ಥಿತಿಗೆ ದೊಡ್ಡ ಮುಸುಕು ಕವಿದಿತ್ತು. ಮೊದಲ ಮಹಾಯುದ್ಧ ೧೯೧೪ರಲ್ಲಿ ಪ್ರಾರಂಭವಾಯಿತು. ಇದರಿಂದಾಗಿ ಯಂತ್ರೋಪಕರಣಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವುದು ಕಷ್ಟವಾಯಿತು. ಯುದ್ಧದ ವೆಚ್ಚಕ್ಕಾಗಿ ರಾಜ್ಯದ ಬೊಕ್ಕಸದಿಂದ ಈ ಅವಧಿಯಲ್ಲಿ ೫೦-೬೦ ಲಕ್ಷ ರೂ.ಗಳನ್ನು ಬ್ರಿಟಿಷ್ ಸರ್ಕಾರಕ್ಕೆ ಕೊಡಬೇಕಾಗಿ ಬಂದಿತು. ಇಂತಹ ಪರಿಸ್ಥಿತಿಯಲ್ಲಿ ವಿಶ್ವೇಶ್ವರಯ್ಯನವರ ಕೈಗಾರಿಕಾ ನೀತಿಯ ವಿರುದ್ಧ ಸಾರ್ವಜನಿಕ ಟೀಕೆಗಳು ಕೇಳಿಬಂದವು. "ದಿವಾನರು ಅಸಂಖ್ಯ ಯೋಜನೆಗಳನ್ನು ವಿವಿಧ ಸಮಿತಿಗಳು ಮತ್ತು ತಜ್ಞರ ಮೂಲಕ ರೂಪಿಸುತ್ತಿದ್ದಾರೆ ; ಆದರೆ ಈ ಪ್ರಮಾಣದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸದ್ಯದಲ್ಲಿ ಸಾಧ್ಯವಿಲ್ಲ ; ಅದರಲ್ಲೂ ಈ ಯುದ್ಧ ಕಾಲದಲ್ಲಿ ಅದು ಅಸಂಭವ". "ಹೊಟ್ಟೆಗೆ ಹಿಟ್ಟಿಲ್ಲದಿರುವಾಗ ಜುಟ್ಟಿಗೆ ಮಲ್ಲಿಗೆ ಹೂ" ಎಂಬಂತೆ ಯುದ್ಧದಿಂದಾಗಿ ಜನರು ದಿನನಿತ್ಯದ ಅಗತ್ಯ ವಸ್ತುಗಳಿಗೆ ಪರದಾಡುತ್ತಿರುವಾಗ ದಿವಾನರು ಕೈಗಾರಿಕಾ ರಾಜ್ಯದ ಕನಸು ಕಾಣುತ್ತಿದ್ದಾರೆ.[೧] 'ದ ಹಿಂದೂ' ಪತ್ರಿಕೆಯೂ (೧೨-೯-೧೯೧೪) "ದಿವಾನರು ತಮ್ಮ ಯೋಜನೆಗಳ ವಿಸ್ತೃತ ವ್ಯಾಪ್ತಿಯಿಂದಾಗಿ ಮೈಸೂರಿಗರನ್ನು ಬೆಚ್ಚಿಬೀಳಿಸಿದ್ದಾರೆ. ಏಕಕಾಲದಲ್ಲಿ

೧ ಕರ್ನಾಟಕ (ದೈನಿಕ), ೧೭. ೧೦. ೧೯೧೪.

ಅವರು ಕೈಗೊಂಡಿರುವ ಹಲವಾರು ಯೋಜನೆಗಳ ಸಫಲತೆಯ ಬಗ್ಗೆ ಅಲ್ಲಲ್ಲಿ ಅನುಮಾನ ಹುಟ್ಟ ತೊಡಗಿದೆ" ಎಂದು ವ್ಯಂಗ್ಯವಾಗಿ ಬರೆಯಿತು.

ವಿಶ್ವೇಶ್ವರಯ್ಯನವರು ೧೯೧೫ರ ದಸರಾ ಪ್ರಜಾಪ್ರತಿನಿಧಿ ಸಭಾ ಅಧಿವೇಶನದಲ್ಲಿ ಮಾತನಾಡುತ್ತಾ ಅವರ ಕೈಗಾರಿಕಾ ನೀತಿಯ ಬಗ್ಗೆ ಬಂದ ಟೀಕೆ ಟಿಪ್ಪಣಿಗಳಿಗೆ ಹೀಗೆ ಉತ್ತರಿಸಿದರು. "ಈ ದೇಶದಲ್ಲಿ ಅನೇಕ ಜನರು ನಮ್ಮಲ್ಲಿ ಎಲ್ಲವೂ ಸರಿಯಿದೆ ನಾವು ಸ್ವಲ್ಪಮಾತ್ರ ಪ್ರಯತ್ನಿಸಿದರೂ ಸಾಕು ಅದು ಬಿಟ್ಟು ಈಗ ತುಂಬಾ ಹೆಚ್ಚು ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಭಾವಿಸಿದ್ದಾರೆ. ಆದರೆ ಇದು ಸರಿಯಲ್ಲ. ನಮ್ಮ ದೇಶ ಕೈಗಾರಿಕೆ, ಶಿಕ್ಷಣ ಮತ್ತು ಜೀವನ ಸ್ಥಿತಿಯಲ್ಲಿ ಕೆಳಮಟ್ಟದಲ್ಲಿದೆ, ಈ ಸ್ಥಿತಿಯಿಂದ ಮೇಲೆ ಬರಲು ಇರುವ ಮಾರ್ಗವೆಂದರೆ ಹೆಚ್ಚುಗಂಟೆಗಳ ಕಾಲ ಕೆಲಸ ಮಾಡುವುದನ್ನು ಅಭ್ಯಾಸ ಮಾಡಿಕೊಳ್ಳುವುದು; ಹೆಚ್ಚು ಹೆಚ್ಚಾಗಿ ಕೈಗಾರಿಕೆಗಳ ಸ್ಥಾಪನೆ ಮತ್ತು ವ್ಯಾಪಾರವನ್ನು ಕೈಗೊಳ್ಳುವುದು". ಅವರು ಈ ಟೀಕೆಗಳಿಗೆ ಅಂಜದ ದೃಢವಾದ ಹೆಜ್ಜೆಯಲ್ಲಿ ಮುನ್ನಡೆದರು. ಬೆಂಗಳೂರಿನಲ್ಲಿ ಸರ್ಕಾರ ಸ್ಥಾಪಿಸಿದ ಸೋಪು ಕಾರ್ಖಾನೆಯು ೧೯೧೮ರಲ್ಲಿ ಉತ್ಪಾದನೆ ಪ್ರಾರಂಭಿಸಿತು. ಗುಂಡಿಗಳ ತಯಾರಿಕಾ ಕಾರ್ಖಾನೆ ಲೋಹ ತಯಾರಿಕೆಯ ಕಾರ್ಖಾನೆ ಇವುಗಳು ಸರ್ಕಾರದ ವತಿಯಿಂದ ಸ್ಥಾಪಿತವಾದವು. ಇವೆಲ್ಲಕ್ಕೂ ಕಿರೀಟಪ್ರಾಯವಾಗಿ ವಿಶ್ವೇಶ್ವರಯ್ಯನವರ ಕೊಡುಗೆಯಾಗಿ ನಿಂತಿರುವುದೆಂದರೆ ಭದ್ರಾವತಿ ಕಬ್ಬಿಣ ಮತ್ತು ಉಕ್ಕು ತಯಾರಿಕಾ ಕಾರ್ಖಾನೆ.

ಭದ್ರಾವತಿ ಕಬ್ಬಿಣ ಮತ್ತು ಉಕ್ಕು ತಯಾರಿಕಾ ಕಾರ್ಖಾನೆ

೧೯೧೭ರ ಜನವರಿ ೨೧ರಂದು ವಿಶ್ವೇಶ್ವರಯ್ಯನವರು ಮಹಾರಾಜರಿಗೆ ಕಬ್ಬಿಣ ಕಾರ್ಖಾನೆ ಯೋಜನೆಯ ಪ್ರಸ್ತಾಪ ಕಳುಹಿಸಿದರು. ಅದರ ಅಗತ್ಯ ಬಂಡವಾಳ ೯೦ ಲಕ್ಷರೂ.ಗಳು. ಈ ಬಂಡವಾಳವನ್ನು ವರ್ಷಕ್ಕೆ ನಲವತ್ತು ರೂ. ಗಳಂತೆ ಮೂರು ವರ್ಷಗಳಲ್ಲಿ ಕ್ರೋಢಿ ಕರಿಸಬೇಕಾಗಿದ್ದಿತು. ಇದರಿಂದ ವರ್ಷಂಪ್ರತಿ ೧೦ ಲಕ್ಷರೂಗಳ ವರಮಾನ ಬರುತ್ತದೆಂದು ಅಂದಾಜು. ಈ ಯೋಜನೆ ಸ್ಥಾಪಿಸಲು ವಿಶ್ವೇಶ್ವರಯ್ಯನವರು ಅಮೆರಿಕದ ತಾಂತ್ರಿಕ ಸಲಹೆಗಾರರಾದ ಪೆರಿನ್ ಮತ್ತು ಮಾರ್ಷಲ್‌ರ ಸಲಹೆ ಪಡೆದಿದ್ದರು. ಈ ಯೋಜನೆಗೆ ಕೌನ್ಸಿಲ್ ಅಥವಾ ಮಂತ್ರಿಮಂಡಲ ಸದಸ್ಯರಿಂದ ಆಕ್ಷೇಪಣೆಗಳು ಬಂದವು. ಮಹಾರಾಜರ ಆಪ್ತ ಕಾರ್ಯದರ್ಶಿಯಾಗಿದ್ದ ಆರ್. ಎಚ್. ಕ್ಯಾಂಬೆಲ್ಲರಿಗೆ ಈ ಯೋಜನೆಯ ಬಗ್ಗೆ ಸಹಾನುಭೂತಿ ಇರಲಿಲ್ಲ. ಆಗ ವಿಶ್ವೇಶ್ವರಯ್ಯನವರು ಮಹಾರಾಜರನ್ನು ಭೇಟಿ ಮಾಡಿ ವಸ್ತುಸ್ಥಿತಿ ವಿವರಿಸಿದರು. ಈ ಕಾರ್ಖಾನೆ ಸ್ಥಾಪನೆಯಿಂದ ಆಗುವ ಪ್ರಯೋಜನಗಳನ್ನು ತಿಳಿಸಿದರು. ಅಂತಿಮವಾಗಿ ಈ ಯೋಜನೆಗೆ ಮಹಾರಾಜರ ಅನುಮೋದನೆ ಪಡೆಯುವಲ್ಲಿ ಅವರು ಯಶಸ್ವಿಯಾದರು. ಆದರೆ ವಿಶ್ವೇಶ್ವರಯ್ಯನವರು ೧೯೧೮ರಲ್ಲಿ ದಿವಾನ್ ಹುದ್ದೆ ತೊರೆದಾಗ ಈ ಕಾರ್ಖಾನೆಯನ್ನು ಅವರ ಉತ್ತರಾಧಿಕಾರಿಗಳು ಯಶಸ್ವಿಯಾಗಿ ನಿರ್ವಹಿಸುವಲ್ಲಿ ವಿಫಲರಾದರು.

ಆಗ ಮಹಾರಾಜರು ೧೯೨೩ರಲ್ಲಿ ಮತ್ತೆ ವಿಶ್ವೇಶ್ವರಯ್ಯನವರ ಸಹಕಾರ ಕೋರಿದರು. ವಿಶ್ವೇಶ್ವರಯ್ಯನವರು ೧೯೨೩ರಿಂದ ೧೯೨೯ವರೆಗೆ ಈ ಕಾರ್ಖಾನೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟು, ಅದು ಲಾಭಗಳಿಸುವಂತೆ ಮಾಡಿದರು.

೧೯೨೭ರಲ್ಲಿ ಈ ಕಾರ್ಖಾನೆಗೆ ಭೇಟಿ ನೀಡಿದ ಮಹಾತ್ಮ ಗಾಂಧೀಜಿಯವರು ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ (೧. ೯. ೧೯೨೭) ಹೀಗೆ ಬರೆದರು. "ಕೃಷ್ಣರಾಜಸಾಗರ ದಂತೆಯೇ ಭದ್ರಾವತಿಯೂ ವಿಶ್ವೇಶ್ವರಯ್ಯನವರ ದೇಶಭಕ್ತಿ ಮತ್ತು ರಚನಾತ್ಮಕ ಪ್ರತಿಭೆಯ ಕೊಡುಗೆಯಾಗಿದೆ. ಅವರು ತಮ್ಮ ಪ್ರತಿಭೆ, ಜ್ಞಾನ ಮತ್ತು ಶ್ರಮವನ್ನು ಹಾಗೂ ಅವರ ಎಲ್ಲ ಸಮಯ ಮತ್ತು ಶಕ್ತಿಗಳನ್ನು ಮೈಸೂರಿನ ಸೇವೆಗೆ ಅರ್ಪಿಸಿಕೊಂಡಿದ್ದಾರೆ. ಇದು ರಾಜ್ಯಕ್ಕೆ ಪ್ರತಿ ವರ್ಷ ಹತ್ತು ಲಕ್ಷ ರೂ.ಗಳ ಆದಾಯ ತರುತ್ತಿದೆ ಮತ್ತು ಐದು ಸಾವಿರ ಜನರಿಗೆ ಉದ್ಯೋಗ ಒದಗಿಸಿದೆ. ಅದರ ಮೂಲಕರ್ತೃ ಮೈಸೂರಿಗರು; ಅದರ ಸಿಬ್ಬಂದಿ ಮತ್ತು ಕಾರ್ಮಿಕರು ಬಹುಮಟ್ಟಿಗೆ ಮೈಸೂರಿಗರು, ಹೆಚ್ಚೆಂದರೆ ದಕ್ಷಿಣ ಭಾರತೀಯರು. ಈ ಸಂಗತಿ ನಿಮಗೂ ಮತ್ತು ಭಾರತಕ್ಕೂ ಹೆಮ್ಮೆ ತರುವಂತಾಗಿದೆ". ಈ ಕಾರ್ಖಾನೆ ಮುಂದಿನ ಅರ್ಧಶತಕದ ಕಾಲ ಮೈಸೂರು ರಾಜ್ಯದ ಕೈಗಾರಿಕಾಭಿವೃದ್ಧಿಯ ಕೇಂದ್ರ ಬಿಂದುವಾಯಿತು.

ಈ ಅವಧಿಯು ಆರ್ಥಿಕ ರಂಗದಲ್ಲಿ ಇನ್ನು ಅನೇಕ ಬೆಳವಣಿಗೆಗಳನ್ನು ಕಂಡಿತು. ವಾಣಿಜ್ಯ ಮಹಾಮಂಡಲಿ (ಚೇಂಬರ್ ಆಫ್ ಕಾಮರ್ಸ್) ಸ್ಥಾಪನೆ ; ಸರ್ಕಾರಿ ಇಲಾಖೆಯಲ್ಲಿ ವಾಣಿಜ್ಯ ವಿಭಾಗ ರಚನೆ, ವ್ಯವಸಾಯ ಇಲಾಖೆಯ ವಿಸ್ತರಣೆ, ಪ್ರಾಯೋಗಿಕ ಫಾರಂಗಳ ಸ್ಥಾಪನೆ, ರೇಷ್ಮೆ ಕೃಷಿಗೆ ಪ್ರೋತ್ಸಾಹ, ಸಣ್ಣ ಕೆರೆಗಳ ಸಂರಕ್ಷಣ ಯೋಜನೆ, ದೊಡ್ಡ ಕೆರೆಗಳ ನಿರ್ಮಾಣ, ಗ್ರಾಮೀಣಾಭಿವೃದ್ಧಿ ಯೋಜನೆ, ಮಲೆನಾಡು ಅಭಿವೃದ್ಧಿ ಯೋಜನೆ, ಆರ್ಥಿಕ ಸಮ್ಮೇಳನ ಗಳು, ಸಾರಿಗೆ ಸಂಪರ್ಕ, ರೈಲು ಮಾರ್ಗಗಳ ವಿಸ್ತರಣೆ, ವಿದ್ಯುಚ್ಛಕ್ತಿ ಉತ್ಪಾದನೆ ಇತ್ಯಾದಿ ಕಾರ್ಯಯೋಜನೆಗಳನ್ನು ಅನುಷ್ಠಾನಕ್ಕೆ ತಂದ ವಿಶ್ವೇಶ್ವರಯ್ಯನವರ ಆರ್ಥಿಕ ಸಿದ್ಧಾಂತವೇನು ಎಂಬುದು ಕುತೂಹಲಕಾರಿಯಾಗಿದೆ.

ಹಣಕಾಸು ನಿರ್ವಹಣೆ

ತಮ್ಮ ಹಣಕಾಸು ನೀತಿ ಅಥವಾ ಆರ್ಥಿಕ ನೀತಿಗೆ ವಿಶ್ವೇಶ್ವರಯ್ಯನವರು ಇಟ್ಟುಕೊಂಡಿದ್ದ ಸೂತ್ರಗಳೇನು ಎಂದು ಪರಿಶೀಲಿಸುವುದು ಅಗತ್ಯವಿದೆ. ಅವರು ಹಣಕಾಸನ್ನು ಯೋಜಿತ ರೀತಿಯಲ್ಲಿ ಹೂಡಬೇಕು. ಹೀಗೆ ಹೂಡುವುದಕ್ಕೆ ಬಂಡವಾಳವನ್ನು ಸಂಪನ್ಮೂಲಗಳ ಕ್ರೋಢೀಕರಣದಿಂದ ಮತ್ತು ಸಾಲರೂಪದಿಂದ ಒದಗಿಸಿಕೊಳ್ಳಬೇಕು. ಬಂಡವಾಳ ಹೂಡಿಕೆ ಸಾಮಾನ್ಯ ಆಡಳಿತವನ್ನು ಉತ್ತಮಪಡಿಸುವುದು, ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವುದು. ಈ ಉದ್ದೇಶಗಳನ್ನು ಹೊಂದಿರಬೇಕು ಎಂದು ಆಶಿಸಿದರು.[೧] ಕ್ರಮಬದ್ಧವಾದ ಹೂಡಿಕೆ ಸೂಕ್ತ ಪ್ರತಿಫಲ ತರುವುದಲ್ಲದೆ ಜನರಿಗೆ ಉದ್ಯೋಗ ಒದಗಿಸುವುದು ಮತ್ತು ಸ್ವಾವಲಂಬನೆಗೆ ದಾರಿಯಾಗುವುದು ; ಇದೆಲ್ಲದರ ಪರಿಣಾಮವಾಗಿ ಜನರ ಜೀವನಮಟ್ಟ ಸುಧಾರಿಸುವುದು ಎಂಬುದು ಅವರ ನಂಬುಗೆಯಾಗಿದ್ದಿತು.

ಈ ಗುರಿ ಸಾಧಿಸಲು ಆಡಳಿತದಲ್ಲಿ ಬಿಗಿಯಾದ ಶಿಸ್ತು ಮತ್ತು ಕೆಲಸದ ಸಂಸ್ಕೃತಿ ಬೆಳಸಲು ಶ್ರಮಿಸಿದರು. ತಮ್ಮ ಭಾಷಣಗಳ ಮೂಲಕ ಜನಜಾಗೃತಿ ಉಂಟುಮಾಡಿದರು. ವೈಜ್ಞಾನಿಕ ದೃಷ್ಟಿಯ ಅಗತ್ಯವನ್ನು ಪ್ರತಿಪಾದಿಸಿದರು. ಜನರು ಮತ್ತು ಅಧಿಕಾರಿ ವರ್ಗದಲ್ಲಿ ಹೊಸ

೧ ಎಂ. ವಿಶ್ವೇಶ್ವರಯ್ಯ : ಸ್ಪೀಚಸ್, ಪು. ೩೧.

ಜೀವನದೃಷ್ಟಿ ಬೆಳೆಯದೇ ಅಭಿವೃದ್ಧಿ ಸಾಧ್ಯವಿಲ್ಲವೆಂಬುದು ಅವರ ನಂಬುಗೆಯಾಗಿದ್ದಿತು. ಇದರ ಜೊತೆಜೊತೆಗೆ ರಾಜ್ಯದ ಹಣಕಾಸು ಸಂಸ್ಥೆಗಳನ್ನು ಬಲಪಡಿಸಲು ಸರ್ಕಾರವೇ ಮುಂದಾಗಬೇಕೆಂದು ಪ್ರತಿಪಾದಿಸಿದರು. ಇದರ ಫಲವಾಗಿ ೧೯೧೩ರಲ್ಲಿ ಮೈಸೂರು ಬ್ಯಾಂಕ್‌ನ ಸ್ಥಾಪನೆಯಾಯಿತು. ಸರ್ಕಾರಿ ಖಜಾನೆಯಾಗಿ ಕೆಲಸ ಮಾಡುವುದು ಮತ್ತು ಆರ್ಥಿಕ ಚಟುವಟಿಕೆಗಳ ಬಂಡವಾಳ ಒದಗಿಸುವುದು ಈ ಬ್ಯಾಂಕ್‌ನ ಮುಖ್ಯ ಕಾರ್ಯಗಳಾಗಿದ್ದವು. ಗ್ರಾಮೀಣದಲ್ಲಿ ಉಳಿತಾಯ ಪ್ರವೃತ್ತಿಯನ್ನು ಬೆಳೆಸಲು ೧೯೧೫ ರಿಂದ ಉಳಿತಾಯ ಬ್ಯಾಂಕ್‌ಗಳನ್ನು ಸರ್ಕಾರ ತೆರೆಯಿತು. ಕೈಗಾರಿಕೆಗಳ ಅಭಿವೃದ್ಧಿಗಾಗಿ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಜೀವವಿಮಾ ಸೌಲಭ್ಯವನ್ನು ಸಾರ್ವಜನಿಕರಿಗೂ ತೆರೆಯಲಾಯಿತು. ಹೀಗೆ ಹಣಕಾಸು ಸಂಸ್ಥೆಗಳನ್ನು ಸರ್ಕಾರದ ಉದ್ದೀಪನೆಯಿಂದ ಹುಟ್ಟುಹಾಕಲಾಯಿತು.

ಆದಾಯದ ಹೆಚ್ಚಳ

ವಿಶ್ವೇಶ್ವರಯ್ಯನವರು ಅಧಿಕಾರಕ್ಕೆ ಬಂದಾಗ ಅಂದರೆ ೧೯೧೧ -೧೨ನೇ ಸಾಲಿನಲ್ಲಿ ರಾಜ್ಯದ ಆದಾಯ ೨೩೦ಲಕ್ಷರೂ.ಗಳಾಗಿದ್ದಿತು. ಈ ಆದಾಯದ ಬಹುಪಾಲು ವ್ಯವಸಾಯ ಮತ್ತು ಪ್ರಾಕೃತಿಕ ಸಂಪನ್ಮೂಲಗಳಿಂದ ಬರುತ್ತಿದ್ದಿತು.[1] ವಿಶ್ವೇಶ್ವರಯ್ಯನವರು ತಮ್ಮ ಮೊದಲ ಆಯ ವ್ಯಯವಾದ ೧೯೧೩-೧೪ರ ಬಜೆಟ್ ಮಂಡಿಸಿದಾಗ ಒಟ್ಟು ರಾಜ್ಯದ ಆದಾಯ ೨೫೭ ಲಕ್ಷರೂ.ಗಳಾಗಿದ್ದು ಒಟ್ಟು ವೆಚ್ಚ ೩೧೩ ಲಕ್ಷರೂ.ಗಳಾಗಿದ್ದಿತು. ಆಗ ಅನೇಕ ಟೀಕೆಗಳು ಕೇಳಿಬಂದವು. ಅದಕ್ಕೆ ವಿಶ್ವೇಶ್ವರಯ್ಯನವರು ಹೀಗೆ ಉತ್ತರಿಸಿದರು. "ಕೆಲವು ಬಾಬುಗಳಲ್ಲಿ ಒಂದು ದಶಕದಲ್ಲಿ ಶೇಕಡ ೨೯ರಷ್ಟು ಹೆಚ್ಚು ವೆಚ್ಚವಾಗಿದೆ ಎಂದು ಕೆಲವು ಸದಸ್ಯರು ಬೆಟ್ಟು ಮಾಡಿ ತೋರಿಸಿದ್ದಾರೆ. ನೀವು ಹೆಚ್ಚಿದ ಆದಾಯ ಮತ್ತು ವೆಚ್ಚವನ್ನು ಏಕೆ ಒಂದು ಅನಾಹುತವೆಂದು ಭಾವಿಸಿದ್ದೀರೆಂದು ನನಗೆ ತಿಳಿಯುವುದಿಲ್ಲ. ನೀವು ವಸ್ತು ಸ್ಥಿತಿಗಳ ಬಗ್ಗೆ ಸಮಗ್ರವಾಗಿ ನೋಡಿದ ಪಕ್ಷದಲ್ಲಿ ಪ್ರತಿಯೊಂದು ನಾಗರಿಕ ದೇಶದಲ್ಲೂ ಇದು ಸಾಮಾನ್ಯವಾಗಿ ಅಭ್ಯುದಯದ ಚಿಹ್ನೆ ಎಂದು ಭಾವಿಸಲಾಗುತ್ತದೆ. ವೆಚ್ಚದ ಹೆಚ್ಚಳವೆಂದರೆ ಸಾಮಾನ್ಯವಾಗಿ ಆರ್ಥಿಕ ಚಟುವಟಿಕೆಗಳ ಹೆಚ್ಚಳ ಮತ್ತು ಸಂಪಾದನಾ ಶಕ್ತಿಯ ಹೆಚ್ಚಳವೆಂದು ಅರ್ಥ". ಅಂದರೆ ವಿಶ್ವೇಶ್ವರಯ್ಯನವರು ಹಣವನ್ನು ಬಂಡವಾಳವಾಗಿ ಪರಿವರ್ತಿಸಿ ಅದರಿಂದ ಉದ್ಯೋಗ ಉತ್ಪನ್ನಗಳೆರಡನ್ನು ಗಳಿಸುವುದು ಅಭಿವೃದ್ಧಿಗೆ ಸೂಕ್ತ ಮಾರ್ಗವೆಂದು ನಂಬಿದ್ದರು.

ವಿಶ್ವೇಶ್ವರಯ್ಯನವರ ಹಣಕಾಸು ನಿರ್ವಹಣೆಯ ಬಗ್ಗೆ ಕೆಲವು ದೂರುಗಳು ಹೋದಾಗ ಮಹಾರಾಜರು ಕೆ. ಎಲ್. ದತ್ತಾ ಎಂಬ ನಿವೃತ್ತ ಅಕೌಂಟೆಂಟ್ ಜನರಲ್‌ರನ್ನು ಪರಿಶೀಲಿಸಿ ಸಲಹೆ ಮಾಡಲು ನೇಮಿಸಿದರು. ದತ್ತ ಅವರು ಸಲ್ಲಿಸಿದ ವರದಿಯಲ್ಲಿ ಮೀಸಲು ನಿಧಿ ಹೆಚ್ಚಿಸುವುದನ್ನು ಮತ್ತು ಕೆಲವು ಶೀರ್ಷಿಕೆಗಳನ್ನು ಬದಲಾಯಿಸುವುದನ್ನು ಬಿಟ್ಟರೆ ಹೆಚ್ಚಿನ ಲೋಪದೋಷಗಳು ಕಾಣಲಿಲ್ಲ.

---

೧ ಹ್ಯಾಂಡ್‌ಬುಕ್ ಆಫ್ ಮೈಸೂರು ಅಡ್ಮಿನಿಸ್ಟ್ರೇಷನ್, ೧೯೧೭. ಪು. ೨೪-೨೫.

ವಿಶ್ವೇಶ್ವರಯ್ಯನವರು ಹೆಚ್ಚು ಹೂಡಿಕೆ- ಹೆಚ್ಚು ಉದ್ಯೋಗ – ಹೆಚ್ಚು ಉತ್ಪಾದನೆ ಈ ಸೂತ್ರಕ್ಕೆ ಬದ್ಧವಾಗಿದ್ದರು. ಅವರು ಸೋವಿಯತ್ ರಷ್ಯಾವು ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರುವ ಮೊದಲೇ ಐದು ವರ್ಷಗಳಿಗೆ ಅಭಿವೃದ್ಧಿ ಕಾರ್ಯಗಳ ಯೋಜನೆ ಹಾಕುವುದನ್ನು ಜಾರಿಗೆ ತಂದರು ಹಾಗೂ ೧೯೧೬ರಷ್ಟು ಹಿಂದೆಯೇ ಇಡೀ[1] ರಾಜ್ಯವನ್ನು ೧೦೦ ಕ್ಷೇತ್ರಗಳಾಗಿ ವಿಂಗಡಿಸಿ ಅಭಿವೃದ್ಧಿ ಕಾರ್ಯಕ್ಕೆ ಅಣಿಮಾಡಲು ಹೊರಟರು. ಸ್ವಾತಂತ್ರ್ಯಾನಂತರ ಕ್ಷೇತ್ರಾಭಿವೃದ್ಧಿ ಯೋಜನೆಗಳ ಬಗ್ಗೆ ಒತ್ತು ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. ಅಂತಹ ಯೋಜನೆಯನ್ನು ಅವರು ಆಗಲೇ ಜಾರಿಗೆ ತರುವ ಪ್ರಯತ್ನ ಮಾಡಿದ್ದರು. ವಿಶ್ವೇಶ್ವರಯ್ಯನವರು ಈ ದೂರದೃಷ್ಟಿ ಆರ್ಥಿಕ ಸುಧಾರಣೆಗಳನ್ನು ಅವರ ಉತ್ತರಾಧಿಕಾರಿಗಳು ಮನಗಾಣುವಲ್ಲಿ ವಿಫಲರಾದರು. ಆದರೂ ದಿವಾನ್ ಸರ್ ಮಿರ್ಜಾ ಇಸ್ಮಾಯಿಲರು ಅವರ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚು ಗಮನಹರಿಸಿದ್ದು ಕಂಡು ಬರುತ್ತದೆ.

ವಿಶ್ವೇಶ್ವರಯ್ಯನವರು ಮಹಾಯುದ್ಧಕ್ಕೆ ಹಣ ಭರಿಸಬೇಕಾದ ಬಿಕ್ಕಟ್ಟಿನ ನಡುವೆಯೂ ಉಳಿತಾಯ ಆಯವ್ಯಯವನ್ನೇ ತಮ್ಮ ಅಧಿಕಾರದುದ್ದಕ್ಕೂ ಮಂಡಿಸಿದರು. ೧೯೧೨-೧೩ರಲ್ಲಿ ೨೫೫ ಲಕ್ಷರೂ.ಗಳಿದ್ದ ರಾಜ್ಯದ ಆದಾಯವು ೧೯೧೮ಕ್ಕೆ ೩೧೫ ಲಕ್ಷರೂ.ಗಳಾಗಿದ್ದಿತು. ಹೀಗೆ ತಮ್ಮ ಆರುವರ್ಷಗಳ ಅಧಿಕಾರಾವಧಿಯಲ್ಲಿ ೬೦ ಲಕ್ಷರೂ.ಗಳ ಅಂದರೆ ಒಟ್ಟು ಆದಾಯದ ಶೇಕಡ ೨೫ರಷ್ಟು ಹೆಚ್ಚಳ ಸಾಧಿಸಿದ್ದರು. ಆದರೆ ಅವರ ಉತ್ತರಾಧಿಕಾರಿಗಳ ಕಾಲದ ಮುಂದಿನ ಆರುವರ್ಷಗಳಲ್ಲಿ ಅದು ಕಂಡ ಹೆಚ್ಚಳ ಕೇವಲ ೧೭ ಲಕ್ಷರೂ.ಗಳು[2] ಇದೇ ಅವರ ಕಾರ್ಯದಕ್ಷತೆಗೆ ಕನ್ನಡಿಯಾಗಿದೆ.

ಬಿಜೂರನ್ ಹೆಟ್ನೆ ಎಂಬ ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರು ವಿಶ್ವೇಶ್ವರಯ್ಯನವರ ಅಭಿವೃದ್ಧಿ ಕಾರ್ಯನೀತಿಯನ್ನು "ರಾಜ್ಯದ ಬಂಡವಾಳಶಾಹಿ ಅಭಿವೃದ್ಧಿ ಮಾದರಿ" ಎಂದು ಕರೆದಿದ್ದಾರೆ. ಅವರೇ ಮುಂದುವರಿದು "ಮೈಸೂರಿಗೆ ಅಗತ್ಯವಾಗಿದ್ದ ವ್ಯಕ್ತಿ ವಿಶ್ವೇಶ್ವರಯ್ಯನವರ ಎಂಬುದು ನಿಸ್ಸಂದೇಹ. ಆಗಿನ ರಾಜಕೀಯ ಸನ್ನಿವೇಶವು ನಿಶ್ಚಿತವಾಗಿಯೂ ವಿಶ್ವೇಶ್ವರಯ್ಯನವರ ಆರ್ಥಿಕ ನೀತಿಯಂಥ ನೀತಿ ಅಗತ್ಯವಾಗುವಂತೆ ಮಾಡಿದ್ದಿತು. ಆದರೆ ವಿಶ್ವೇಶ್ವರಯ್ಯನವರು ಹೊಂದಿದ್ದ ದೂರದೃಷ್ಟಿಯ ವಿಚಾರಗಳು ಮತ್ತು ಕಲ್ಪನೆಗಳು ಆ ಕಾಲದ ಮೈಸೂರಿನಲ್ಲಿ ಮತ್ತು ಇಡೀ ಭಾರತದಲ್ಲಿ ತುಂಬಾ ವಿರಳವಾಗಿದ್ದವು."[3] ಎಂಬ ಪ್ರಶಂಸೆಯ ಮಾತನಾಡಿದ್ದಾರೆ ಹೆಟ್ನೆಯವರು ಈ ಆರ್ಥಿಕ ನೀತಿಯನ್ನು "ರಾಜ್ಯದ ಬಂಡವಾಳ ಶಾಹಿ ಅಭಿವೃದ್ಧಿ ಮಾದರಿ" ಎಂದು ಕರೆದರೂ ವಾಸ್ತವವಾಗಿ ಅವರು ರಾಷ್ಟ್ರೀಕರಣ ಆರ್ಥಿಕ ನೀತಿಯನ್ನು ಪ್ರತಿಪಾದಿಸಿದವರು.

ವಿಶ್ವೇಶ್ವರಯ್ಯ ಈ ಕುರಿತು ಹೀಗೆ ಹೇಳಿದ್ದಾರೆ. "ನನ್ನ ಒಂದೇ ಗುರಿಯೆಂದರೆ ಮುಖ್ಯವಾಗಿ ಶಿಕ್ಷಣ, ಕೈಗಾರಿಕೆಗಳು, ವಾಣಿಜ್ಯ ಮತ್ತು ಲೋಕೋಪಯೋಗಿ ಕಾಮಗಾರಿಗಳಲ್ಲಿ ಅಭಿವೃದ್ಧಿಗಳನ್ನು ಉತ್ತೇಜಿಸಲು ಮತ್ತು ಪ್ರೋತ್ಸಾಹಿಸಲು

---

೧ ಡಿ. ಎಸ್. ಜಯಪ್ಪಗೌಡ : ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು, ಪು. ೨೬೮-೨೬೯.

೨ ವಿವರಗಳಿಗೆ ನೋಡಿ, ಅದೇ, ಪು. ೨೬೬-೨೬೭.

೩ ಹೆಟ್ನೆ : ದ. ಪೊಲಿಟಿಕಲ್ ಎಕಾನಮಿ ಆಫ್ ಇಂಡೈರೆಕ್ಟ್ ರೂಲ್ -ಮೈಸೂರು, ೧೮೮೧-೧೯೪೭, ಪು. ೨೫೫.

ಕಾರ್ಯಯೋಜನೆ ಸಿದ್ಧಪಡಿಸುವು ದಾಗಿದ್ದಿತು."[೧] ವಿಶ್ವೇಶ್ವರಯ್ಯನವರು ಸಿದ್ಧಪಡಿಸಿದ ಆರ್ಥಿಕ ಕಾರ್ಯಯೋಜನೆ ಮುಖ್ಯವಾಗಿ ಬಂಡವಾಳಶಾಹಿ ಅಭಿವೃದ್ಧಿ ಪರವಾದುದು ಹಾಗೂ ಅದು ಈಗಿನ ಮುಕ್ತ ಮಾರುಕಟ್ಟೆಯಂತೆ ಸ್ಪರ್ಧಾತ್ಮಕ ಲಕ್ಷಣಗಳನ್ನು ಹೊಂದಿದ್ದಿತು. ಅವರು ಒಂದೆಡೆ ನಾವು ಸರಿಯಾದ ಯೋಜನೆ ರೂಪಿಸಿದಲ್ಲಿ ಹೊರರಾಜ್ಯಗಳಿಂದಲೂ ವಿದೇಶಗಳಿಂದಲೂ ಬಂಡವಾಳ ಬರುತ್ತದೆ ಎಂದು ಹೇಳಿದ್ದಾರೆ. ಅವರು ದಿವಾನ್ ಹುದ್ದೆಯಿಂದ ನಿವೃತ್ತರಾದ ಅನಂತರವೂ ಮೋಟಾರು ವಾಹನ ತಯಾರಿಕಾ ಕಾರ್ಖಾನೆ ಸ್ಥಾಪನೆಗೆ ವಿಮಾನಗಳ ತಯಾರಿಕಾ ಕಾರ್ಖಾನೆ ಸ್ಥಾಪನೆಗೆ, ಹೋರಾಡಿದ್ದನ್ನು ನೋಡಿದರೆ ಅವರಲ್ಲಿ ಸ್ವಾವಲಂಬನೆ ಆರ್ಥಿಕತೆಯ ದೃಷ್ಟಿ ಇದ್ದುದನ್ನು ಕಾಣಬಹುದು. ಅವರು ೧೯೩೪ರಲ್ಲಿ ಭಾರತೀಯ ಆರ್ಥಿಕ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ತಮ್ಮ ಅತ್ಯಂತ ಇಳಿವಯಸ್ಸಿನಲ್ಲಿ 'ನೇಷನ್ ಬಿಲ್ಡಿಂಗ್ ಪ್ಲಾನ್ ಫಾರ್ ಇಂಡಿಯಾ' ಎಂಬ ವರದಿಯನ್ನು ರಚಿಸಿಕೊಟ್ಟರು. ಇವೆಲ್ಲ ಸಂಗತಿಗಳನ್ನು ಗಮನಿಸಿದರೆ ಸರ್ ಎಂ. ವಿಶ್ವೇಶ್ವರಯ್ಯನವರು ಹೇಗೆ ಒಬ್ಬ ಪ್ರತಿಭಾವಂತ ಎಂಜಿನಿಯರ್ ಆಗಿ ದಕ್ಷ ಆಡಳಿತಗಾರನಾಗಿ, ದೂರದೃಷ್ಟಿಯ ಆರ್ಥಿಕ ಚಿಂತಕರಾಗಿ ರೂಪುಗೊಂಡಿದ್ದರು ಎಂಬುದು ವ್ಯಕ್ತವಾಗುತ್ತದೆ.

---

೧. ಎಂ. ವಿಶ್ವೇಶ್ವರಯ್ಯ : ಮೆಮ್ವಾರ್ಸ್ ಆಫ್ ಮೈ ವರ್ಕಿಂಗ್ ಲೈಫ್. ಪು ೬ .

ಜಾನಪದ ಅಧ್ಯಯನ : ಎರಡು ಹೊಸ ಸಾಧ್ಯತೆಗಳು

ಡಾ. ಟಿ. ಗೋವಿಂದರಾಜು

ಜಗತ್ತಿನಾದ್ಯಂತ ಜಾನಪದ ಬದುಕು ಮತ್ತು ಅದರ ಅನೇಕ ಅಭಿವ್ಯಕ್ತಿ ಪ್ರಕಾರಗಳನ್ನು ವಿವಿಧ ನೆಲೆಗಳಲ್ಲಿ ಅಧ್ಯಯನ ಮಾಡುವ ಗಂಭೀರ ಪ್ರಯತ್ನಗಳು ನಡೆದುಬಂದಿವೆ. ಆ ಮೂಲಕ ಜಾನಪದದ ಸ್ವರೂಪ–ಸತ್ವಗಳನ್ನು ಗ್ರಹಿಸುವ, ನಿರ್ವಹಿಸುವ ಕಾರ್ಯಗಳು ಹಲವು ಸಂದರ್ಭಗಳಲ್ಲಿ ತೃಪ್ತಿಕರವಾಗಿಯೇ ಆಗಿವೆ ಎಂದು ಹೇಳಿದರೂ ಇನ್ನೂ ಹೆಚ್ಚಿನ, ಮುಂದುವರೆದ ಶೋಧ–ಅಧ್ಯಯನಗಳಿಗೆ ಅವಕಾಶಗಳು ಇದ್ದೇ ಇವೆ ಎಂಬುದೂ ಜಾನಪದದ ಗಂಭೀರ ಅಧ್ಯಯನಕಾರರಿಗೆ ಸ್ವಯಂ ವೇದ್ಯವಾಗಿದೆ. ಉದಾ: ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದು ಬರುವುದರಿಂದ ಜಾನಪದಕ್ಕೆ ಪ್ರಾಚೀನದಾಖಲೆಗಳಿಲ್ಲ. ಆದ್ದರಿಂದ, ಶತಮಾನಗಳ ಹಿಂದಿನ ಜನಪದ ಬದುಕಿನ ರೀತಿ–ನೀತಿಗಳನ್ನು ಗುರುತಿಸಿ ಕೊಳ್ಳುವುದು ಸಾಧ್ಯವಾಗುವುದಿಲ್ಲ ಎಂಬುದು ಜಾನಪದ ವಿದ್ವಾಂಸರ ಸಾಮಾನ್ಯ ನಂಬಿಕೆಯಾಗಿದೆ. ಹಾಗೆಯೇ ವಕ್ತೃಗಳನ್ನು ಸಂದರ್ಶಿಸುವ ಮೂಲಕ ನೇರ ಮಾಹಿತಿ ಸಂಗ್ರಹವು, ಜಾನಪದ ಅಧ್ಯಯನಕಾರರಲ್ಲಿ ಸಾಮಾನ್ಯವಾಗಿರುವ ಕ್ರಮವಾಗಿದೆ.

ಅಂದರೆ ಜಾನಪದ ಅಧ್ಯಯನದಲ್ಲಿ ಈ ಎರಡೂ 'ಕೊರತೆ'ಯನ್ನೇ ಸೂಚಿಸುತ್ತವೆ. ಇಂತಹ ಕೊರತೆಗಳನ್ನು ತುಂಬಿಕೊಳ್ಳದೆ ಜಾನಪದ ಅಧ್ಯಯನ ಸಮಗ್ರ, ಸಮೃದ್ಧತೆಯ ಕಡೆಗೆ ಸಾಗಿದಂತಾಗುವುದಿಲ್ಲ. ಈ ಕೊರತೆಗಳು ಅಪರಿಹಾರ್ಯವೆಂದೇನಲ್ಲ. ಕಳೆದ ಹಲವು ವರ್ಷಗಳ ನನ್ನ ವೈವಿಧ್ಯಮಯ ಮಾಹಿತಿ ಸಂಗ್ರಹ ಹಾಗೂ ಅಧ್ಯಯನದ ಸಂದರ್ಭದಲ್ಲಿ ಈ ಎರಡೂ ಅಂಶಗಳನ್ನು ವಿಭಿನ್ನವಾಗಿ, ತೃಪ್ತಿಕರವಾಗಿ ಅಭ್ಯಾಸ ಮಾಡಬಹುದು ಎಂಬುದು ನನಗೆ ಮನವರಿಕೆಯಾಗಿದೆ ಮತ್ತು ಅಂತಹ ಅನುಭವದ ಹಿನ್ನೆಲೆಯಲ್ಲಿ ನಾನು ರೂಪಿಸಿ ಕೊಂಡ ಆ ಎರಡು ಹೊಸ ಸಾಧ್ಯತೆಗಳೇ 'ಪ್ರಾಚ್ಯ ಜಾನಪದೀಯ ಅಧ್ಯಯನ' ಹಾಗೂ 'ಕ್ಯಾಂಡಿಡ್ ಜಾನಪದ' ಅವುಗಳ ತತ್ವ, ಸ್ವರೂಪಗಳನ್ನು ಕೆಲವೊಂದು ನಿದರ್ಶನಗಳೊಂದಿಗೆ ಸಂಕ್ಷಿಪ್ತವಾಗಿ ಪರಿಚಯಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೧ ಪ್ರಾಚ್ಯ ಜಾನಪದೀಯ ಅಧ್ಯಯನ

ಜಾನಪದವು ತೋಂಡಿಯಾಗಿ ಒಬ್ಬರಿಂದೊಬ್ಬರಿಗೆ ಸಂವಹನಗೊಳ್ಳುತ್ತದೆ ಹಾಗೂ ಅದರ ಎಲ್ಲಾ ಅಭಿವ್ಯಕ್ತಿ ರೂಪಗಳನ್ನು ಸವಿವರವಾಗಿ ದಾಖಲಿಸುವ ಪ್ರಯತ್ನವನ್ನು (ಉದ್ದೇಶಪೂರ್ವಕ) ಜನಪದರು ಮಾಡಲಿಲ್ಲ ಎಂಬುದು ನಿಜವೇ ಆದರೂ ಈ ಅಭಿಪ್ರಾಯ ಜಾನಪದದ ಎಲ್ಲಾ ಅಂಗಗಳಿಗೂ ಪೂರ್ಣ ಅನ್ವಯವಾಗುವುದಿಲ್ಲ ಎಂಬ ಸೂಕ್ಷ್ಮವನ್ನು

ಅಧ್ಯಯನಕಾರರು ಗಮನಿಸಬೇಕಿದೆ. ಅನ್ಯ ಶಿಸ್ತುಗಳ ಮೂಲಕ ಜಾನಪದ ಬಹುಮುಖತೆಯನ್ನು ಕುರಿತು ಅಧ್ಯಯನಕ್ಕೆ ತೊಡಗಿದಾಗ ಜಾನಪದಕ್ಕೂ ಅಸಂಖ್ಯ ಪ್ರಾಚೀನ ದಾಖಲೆಗಳಿವೆ. ಪ್ರಪಂಚದಾದ್ಯಂತ ಅಳಿದುಳಿದಿರುವ ಅಂತಹ ಲಭ್ಯ ದಾಖಲೆಗಳ ಮೂಲಕ ಅಂದಂದಿನ ಜನಪದ ಬದುಕನ್ನು ಪುನರ್‌ದರ್ಶಿಸಬಹುದಾಗಿದೆ ಎಂಬುದು ಅರಿವಾಗುತ್ತದೆ. ಇಂತಹ ನಮ್ಮ ಅಧ್ಯಯನಕ್ಕೆ ಬಳಸಿಕೊಳ್ಳಬಹುದಾದ ಪ್ರಾಚ್ಯ ಆಕರಗಳೆಂದರೆ- ಪುರಾತತ್ವ ಶೋಧಗಳಲ್ಲಿ ಕಂಡು ಬರುವ ವಸತಿ ಮಾದರಿಗಳು, ಸಮಾಧಿಗಳು, ಪಾತ್ರೆ-ಪಡಗ, ಆಯುಧ, ಆಟಿಕೆ, ಮುದ್ರಿಕೆ, ನಗ-ನಾಣ್ಯಗಳು, ಗುಹಾಚಿತ್ರ, ಭಿತ್ತಿ ಚಿತ್ರಗಳು ಚಿಕಣಿ ಚಿತ್ರ ಮೊದಲಾದ ಪ್ರಾಚೀನ ವರ್ಣಚಿತ್ರಗಳು ; ಶಿಲ್ಪಗಳು, ಕರಕುಶಲ ವಸ್ತುಗಳು ; ಪ್ರವಾಸೀ ಬರಹಗಳು, ಪತ್ರಾಗಾರ ಇಲಾಖೆಯ ವಿವಿಧ ದಾಖಲೆಗಳು ; ಶಾಸನ, ನಿಘಂಟು, ಕೋಶಗಳು, ಕೈಫಿಯತ್ತುಗಳು, ಶಾಸ್ತ್ರ–ಸಾಹಿತ್ಯ ಕೃತಿಗಳು ; ದಶಕಗಳ ಹಿಂದಿನ ವಿವಾಹ, ನಾಮಕರಣಾದಿ ಶಾಸ್ತ್ರಾಚರಣೆಗಳ ಸಂದರ್ಭದಲ್ಲಿ ತೆಗೆದ ಛಾಯಾಚಿತ್ರ, ವೀಡಿಯೋ ಚಿತ್ರಗಳು... ಮೊದಲಾದವು.

ಈ ದಾಖಲೆಗಳ ಬಳಕೆಯಲ್ಲಿ ಜಾನಪದ ಅಧ್ಯಯನಕಾರ ಅಗತ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶಗಳೆಂದರೆ – ಆಯಾ ಕ್ಷೇತ್ರದ ತಜ್ಞರು ಶೋಧಿಸಿ ಪ್ರಕಟಿಸಿದ ಮಾಹಿತಿ-ದಾಖಲೆಗಳನ್ನು ಮಾತ್ರವೇ ಬಳಸಿಕೊಳ್ಳುವುದರಿಂದ ಜಾನಪದ ಪ್ರಾಚ್ಯ ಅಧ್ಯಯನಕ್ಕೆ ಒಂದು ಅಧಿಕೃತತೆ ಬರಲು ಸಾಧ್ಯವಾಗುತ್ತದೆ. ಏಕೆಂದರೆ ಜಾನಪದ ಅಧ್ಯಯನಕಾರ ಸ್ವತ : ಎಲ್ಲಾ ಶಿಸ್ತುಗಳಲ್ಲಿಯೂ ತಜ್ಞನಾಗುವುದು ಸುಲಭ ಸಾಧ್ಯವಲ್ಲ. ಆದರೂ ಪ್ರಾಚ್ಯ ಜಾನಪದವನ್ನು ಕುರಿತು ಅಧ್ಯಯನ ಮಾಡುವವರು ಇತಿಹಾಸ, ಚಿತ್ರ, ಶಿಲ್ಪ, ಛಾಯಾಗ್ರಹಣ, ಪುರಾತತ್ವ, ಮಾನವಶಾಸ್ತ್ರ.... ಮೊದಲಾದ ಹಲವಾರು ಶಿಸ್ತುಗಳ ಬಗೆಗೆ ಸ್ಥೂಲ ಪರಿಚಯವನ್ನಾದರೂ ಹೊಂದಿದವನಾಗಿರುವುದು ಅತ್ಯಗತ್ಯ. ಇಲ್ಲವಾದರೆ ತನ್ನ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಗಳನ್ನು ಕ್ರೋಢೀಕರಿಸಿ ಕೊಳ್ಳುವುದೇ ಆತನಿಗೆ ಅಸಾಧ್ಯವಾಗುತ್ತದೆ. ಈ ಎಲ್ಲಾ ಪ್ರಾಚ್ಯ ದಾಖಲೆಗಳಿಂದ ಜಾನಪದದ ಭೌತಿಕ ಬಗೆಗಳನ್ನು ಹೆಚ್ಚು ಖಚಿತವಾಗಿ ಗಮನಿಸಿ ಅಧ್ಯಯನ ಮಾಡಬಹುದಾಗಿದೆ.

ಜನಪದ ಸಂಸ್ಕೃತಿಯ ಬೆಳವಣಿಗೆಯ ಚಾರಿತ್ರಿಕ ಅಧ್ಯಯನದತ್ತ ಯಾವ ವಿದ್ವಾಂಸರೂ ಗಮನಹರಿಸಿದಂತಿಲ್ಲ. ಇದೊಂದು ಶ್ರಮ ಪೂರ್ಣವಾದ ಅಧ್ಯಯನ ಕಾರ್ಯ. ಇನ್ನಾದರೂ ಅಗತ್ಯವಾಗಿ ಆಗಬೇಕಾದುದನ್ನು ಗಮನವಿಟ್ಟು ಅಭ್ಯಾಸಮಾಡಿದಲ್ಲಿ ಇಂದಿನ ಜಾನಪದದ ಹಿಂದಿನ ಎಂತೆಂತಹ ಅಪರೂಪದ ಮುಖಗಳ ದರ್ಶನವಾಗುತ್ತವೆ ಎಂಬುದಕ್ಕೆ ಕೆಲ ನಿದರ್ಶನಗಳನ್ನು ನೋಡಬಹುದು.

ಜನಪದ ವಾದ್ಯಗಳು

ತಮಟೆ, ಕೊಂಬು, ಕಹಳೆಗಳು ನಮ್ಮಲ್ಲಿ ಸಾಮಾನ್ಯವಾಗಿ ಬಳಕೆಯಾಗುತ್ತಿರುವ ಜನಪದ ವಾದ್ಯಗಳು. ಇವುಗಳ ಮೂಲ ರೂಪ ಹೇಗಿದ್ದಿರಬಹುದು? ಐನೂರು–ಸಾವಿರ ವರ್ಷಗಳ ಹಿಂದೆಯೂ ಈ ವಾದ್ಯಗಳು ಬಳಕೆಯಲ್ಲಿದ್ದವೇ? ಅವುಗಳ ಆಕಾರ ಈಗಿನಂತೆಯೇ ಇದ್ದಿತೇ? ಹಾಗೂ ಅವುಗಳನ್ನು ಈಗಿನಂತೆಯೇ ನುಡಿಸುತ್ತಿದ್ದರೇ? ಇವು ಕೇವಲ ನಮ್ಮ ದೇಶದವರಿಗೇ

ಮೀಸಲೋ? ಅಥವಾ ಪಾಶ್ಚಾತ್ಯರಲ್ಲಿಯೂ ಇದ್ದವೋ?..... ಇಂತಹ ಸಾಮಾನ್ಯ, ಆದರೆ ಕ್ಲಿಷ್ಟ ಪ್ರಶ್ನೆಗಳಿಗೆ ಉತ್ತರಗಳು ಅಗತ್ಯವಿದ್ದರೂ ನಮ್ಮ ಜಾನಪದ ವಿದ್ವಾಂಸರು ಆ ಬಗ್ಗೆ ತಲೆ ಕೆಡಿಸಿಕೊಳ್ಳುವ ಗೋಜಿಗೆ ಹೋದಂತಿಲ್ಲ. ಹಾಗೆಂದು ಕುತೂಹಲಿಗಳು ನಿರಾಶರಾಗ ಬೇಕಿಲ್ಲ. ಏಕೆಂದರೆ, ಈಗ ಪ್ರಾಚ್ಯ ಜಾನಪದೀಯ ಅಧ್ಯಯನದಲ್ಲಿ ಅದಕ್ಕೆ ಉತ್ತರ ನೀಡುತ್ತದೆ. ಅದರ ಪ್ರಕಾರ - 'ತಮಟೆ'ಯಂತಹ ಚರ್ಮವಾದ್ಯ ಕ್ರಿ. ಪೂ. ೩-೪ ಸಹಸ್ರಮಾನಗಳಷ್ಟು ಪ್ರಾಚೀನವಾದದ್ದು. ಅದು ಪಾಶ್ಚಾತ್ಯ ಸಂಸ್ಕೃತಿಗಳಲ್ಲಿಯೂ ಇದ್ದಿತು ಎಂಬುದು ಬ್ಯಾಬಿಲೋನಿಯಾದ ದೇವಸ್ಥಾನವೊಂದರಲ್ಲಿ ದೊರೆತ ಪಾತ್ರೆಯ ಮೇಲಿನ ಚಿತ್ರದಿಂದ ವ್ಯಕ್ತವಾಗುತ್ತದೆ. ಮೆರವಣಿಗೆಯ ಮುಂಭಾಗದಲ್ಲಿ, ಇತರ ವಾದ್ಯಗಾರರೊಂದಿಗೆ, ಒಬ್ಬಾತ ಇಂತಹ ವಾದ್ಯವನ್ನು ಎಡಗೈಲಿ ಹಿಡಿದು ನುಡಿಸುತ್ತಾ ನಡೆದಿರುವಂತೆ ಅಲ್ಲಿ ಚಿತ್ರಿತವಾಗಿದೆ.

ಪುರಾತನ ಭಾರತದಲ್ಲಿಯೂ ಇಂತಹ ವಾದ್ಯವಿದ್ದ ಬಗೆಗೂ ಸ್ಪಷ್ಟ ದಾಖಲೆಗಳಿವೆ. ಸಾಂಚಿಯ ಉಬ್ಬುಶಿಲ್ಪದಲ್ಲಿನ ಒಂದು ಸನ್ನಿವೇಶ ನಿರೂಪಣೆಯಲ್ಲಿ ಒಬ್ಬಾತ ವಾದ್ಯ ವೊಂದನ್ನು ತನ್ನ ಹೆಗಲಿಗೆ ಪಟ್ಟಿಯ ಸಹಾಯದಿಂದ ನೇತುಹಾಕಿಕೊಂಡು, ಎದೆಯ ಮೇಲೆ ಎತ್ತಿ ಹಿಡಿದು ನುಡಿಸುತ್ತಿರುವುದು ನಮ್ಮ ಈಗಿನ ತಮ್ಮಟೆಯನ್ನೇ ಹೋಲುತ್ತದೆ. ಸಣ್ಣ ವ್ಯತ್ಯಾಸವೆಂದರೆ ಆತ ತನ್ನ ಬಲಗೈಲಿ ಆ ವಾದ್ಯ ನುಡಿಸಲು ಹಿಡಿದಿರುವ ಕೋಲಿನ ತುದಿ ಕೊಕ್ಕೆಯಂತೆ ಬಾಗಿದೆ. ಎಡ ತೋಳು ವಾದ್ಯದ ಮೇಲು ಭಾಗವನ್ನು ಬಳಸಿ ಹಿಡಿದಿದ್ದು, ಎಡಗೈಯ ಬರೀ ಬೆರಳುಗಳಿಂದಲೇ ನುಡಿಸುತ್ತಿರುವಂತಿದೆ.

ಅಮರಾವತಿಯ ಒಂದು ಶಿಲ್ಪದಲ್ಲಂತೂ ಈ ವಾದ್ಯ ಇನ್ನೂ ಸ್ಪಷ್ಟವಾಗಿ ಚಿತ್ರಿತವಾಗಿದೆ. ಸಾಂಚಿಗೂ ಅಮರಾವತಿಗೂ ಆಗಿರಬಹುದಾದ ಒಂದು ಹೋಲಿಕೆ – ವ್ಯತ್ಯಾಸವೆಂದರೆ – ಇಲ್ಲಿಯೂ ವಾದ್ಯಗಾರ ಬಲಗೈಲಿ ಹಿಡಿದಿರುವ ಕೋಲಿನ ತುದಿ ಕೊಕ್ಕೆಯಂತೆ ಬಾಗಿದ್ದರೆ, ಮೇಲೆ – ಎಡಗೈಲಿ ಹಿಡಿದಿರುವ ಕೋಲಿನ ತುದಿ ಬುಗುಟಿನಂತೆ ದುಂಡಗಿದೆ.

ಈ ವಾದ್ಯಕ್ಕೆ ಬ್ಯಾಬಿಲೋನಿಯಾದಲ್ಲಾಗಲೀ, ಸಾಂಚಿ ಅಮರಾವತಿಯಲ್ಲಾಗಲೀ ಆಯಾ ಕಾಲಗಳಲ್ಲಿ ಯಾವ ಹೆಸರು ಇತ್ತು – ಎಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಕರ್ನಾಟಕದಲ್ಲಿಯೇ ಈಗ ಈ ವಾದ್ಯಕ್ಕೆ ಪ್ರಾದೇಶಿಕವಾಗಿ ಹಲಗೆ, ತಪ್ಪಡೆ ಇತ್ಯಾದಿ ಹೆಸರುಗಳಿರುವುದರಿಂದ, ಪ್ರಸ್ತುತ ಅಧ್ಯಯನದಲ್ಲಿ – ಈ ವಾದ್ಯಕ್ಕೆ ಹಿಂದೆಯೂ ಇದೇ ಹೆಸರೇ ಇತ್ತೇ? ಇಲ್ಲವೇ?- ಎಂಬುದಕ್ಕಿಂತ ವಾದ್ಯ ಸ್ವರೂಪ, ಅದನ್ನು ನುಡಿಸುವ ರೀತಿ ಇತ್ಯಾದಿಗಳಿಗಿರುವ ಹೋಲಿಕೆ-ವ್ಯತ್ಯಾಸಗಳನ್ನು ಗುರುತಿಸುವುದು ಹೆಚ್ಚು ಉಪಯುಕ್ತ. ಈ ದೃಷ್ಟಿಯಿಂದ ಹೇಳುವುದಾದರೆ - ಈ 'ತಮಟೆ'ವಾದ್ಯದ ಆಕಾರದಲ್ಲಿ ಸ್ವರೂಪದಲ್ಲಿ ಹೆಚ್ಚು ವ್ಯತ್ಯಾಸಗಳಾದಂತಿಲ್ಲ. ಅದನ್ನು ಎಡಭುಜಕ್ಕೆ ನೇತು ಹಾಕಿಕೊಂಡು ಹಿಡಿವ ರೀತಿಯಲ್ಲೂ ವ್ಯತ್ಯಾಸಗಳಿಲ್ಲ. ಆದರೆ, ಕಾಲ ಕ್ರಮೇಣ ಆಗಿರುವ ಬೆಳವಣಿಗೆಗಳೆಂದರೆ ತೀರಾ ಪ್ರಾರಂಭದ ಕಾಲದಲ್ಲಿ ಒಂದು ಕೈಲಿ ಮಾತ್ರ ಕಡ್ಡಿ ಹಿಡಿದು ಆ ವಾದ್ಯ ಬಡಿಯುತ್ತಿದ್ದುದು ಮುಂದಿನ ಕಾಲ ಘಟ್ಟದಲ್ಲಿ ಎರಡೂ ಕೈಲಿ ಕಡ್ಡಿ ಹಿಡಿದು ಬಡಿಯುವುದು ಬಂದಿದೆ ಹಾಗೂ ಈ ಕಡ್ಡಿಗಳ ರೂಪದಲ್ಲಿಯೂ ಸ್ವಲ್ಪ ಮಟ್ಟಿಗೆ ಬದಲಾವಣೆಗಳಾಗಿವೆ. ಇಂದು ಬಳಸುತ್ತಿರುವ ಈ ಕಡ್ಡಿಗಳ ತುದಿ ಕೊಕ್ಕೆಯಂತಿರದೆ ನೇರ-ಸಪೂರವಾಗಿಯೇ ಇವೆ ಮತ್ತು ಈಗ ಕೆಲವೆಡೆ

ಮೇಲೆ ಎಡಗೈಲಿ ಹಿಡಿವ ತೆಳುವಾದ, ನೀಳವಾದ ಕಡ್ಡಿಯನ್ನು 'ಚಕ್ಕೆಕಡ್ಡಿ' ಎಂದೂ, ಕೆಳಗೆ-ಬಲಗೈಲಿ ಹಿಡಿವ ದಪ್ಪ-ತುಂಡು ಕಡ್ಡಿಯನ್ನು ಆಕಾರಕ್ಕೆ ಅನ್ವರ್ಥವಾಗಿ 'ದುಂಡುಕಡ್ಡಿ' ಎಂದೂ ಕರೆಯಲಾಗುತ್ತಿದೆ.

ಹೀಗೆಯೇ ನಮ್ಮ ಇತರ ಕೆಲ ಜನಪದ ವಾದ್ಯಗಳನ್ನೂ (ವಿವರಕ್ಕೆ ಇದೇ ಲೇಖಕರ 'ಕಣ' ಗ್ರಂಥದಲ್ಲಿನ 'ಪ್ರಾಚ್ಯವಾದ್ಯವಿಜ್ಞಾನ' ಲೇಖನವನ್ನು ನೋಡಬಹುದು) ಅಧ್ಯಯನ ಮಾಡಬಹುದು. 'ಜನಪದ ವಾದ್ಯಗಳು' ಸಾಕಷ್ಟು ಪ್ರಾಚೀನದವಾಗಿರಬಹುದು ಎಂದು ಯಾರು ಬೇಕಾದರೂ ಸ್ಥೂಲವಾಗಿ ಹೇಳಬಹುದಾದರೂ ಅದನ್ನು ಖಚಿತವಾಗಿ ಆಧಾರ ಸಮೇತ ನಿರೂಪಿಸಿದಾಗ ಮಾತ್ರ ನಮ್ಮ ಅಧ್ಯಯನ ವೈಜ್ಞಾನಿಕವೂ ಸುದೃಢವೂ ಆಗುತ್ತದೆ. ಪ್ರಾಚ್ಯ ಜಾನಪದೀಯ ಅಧ್ಯಯನ ಈ ರೀತಿಯ ಅಭ್ಯಾಸಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ.

ಗ್ರಾಮ ವಿನ್ಯಾಸ, ದನಗಳ ಕೊಟ್ಟಿಗೆ...

ಗ್ರಾಮೀಣ ಜನಪದ ಬದುಕಿನ ಇತರ ಸಾಮಾನ್ಯ ಸಂಗತಿಗಳನ್ನು ಲಭ್ಯ ಪ್ರಾಚೀನ ದಾಖಲೆಗಳ ಮೂಲಕ ಹೇಗೆ ಖಚಿತಗೊಳಿಸಿಕೊಳ್ಳಬಹುದೆಂಬುದಕ್ಕೆ ಇನ್ನೊಂದು ನಿದರ್ಶನವನ್ನು ಇಲ್ಲಿ ಗಮನಿಸಬಹುದು.

ಇಂದಿನ ನಮ್ಮ ,ಮಗಳು ತಮ್ಮ ಸಾಂಪ್ರದಾಯಿಕ ಸ್ವರೂಪವನ್ನು ಕಳೆದುಕೊಂಡಿವೆ. ಕೆಲ ಅಧ್ಯಯನಕಾರರು ಶಾಸನ ಮೊದಲಾದವುಗಳ ಆಧಾರದಿಂದ ನಮ್ಮ ಪ್ರಾಚೀನ ಗ್ರಾಮಗಳು, ಅವುಗಳ ಸುತ್ತ ಬೇಲಿ, ಹೊಲ ಇತ್ಯಾದಿ ಲಕ್ಷಣಗಳನ್ನು ಹೊಂದಿದ್ದುದರ ಬಗೆಗೆ ಹೇಳುತ್ತಾರೆ (ನೋಡಿ: 'ಕಣ' ಪು. ೯೩) ಆಗಿನ ಮನೆಗಳ ಮಾದರಿ, ಬೀದಿ, ಬೇಲಿ, ಜನರ ಉಡುಗೆ, ಚಟುವಟಿಕೆಗಳ ನೇರ ದರ್ಶನ ಇಂತಹ ಭಾಷಿಕ ವಿವರಗಳಿಂದ ಆಗುವುದಿಲ್ಲ. ಆದರೆ, ಈ ಕೊರತೆಯನ್ನು ನಾವು ಪ್ರಾಚೀನ ಅಜಂತಾ ವರ್ಣಚಿತ್ರಗಳು, ಚಿಕಣಿ ಚಿತ್ರಗಳಿಂದ ನೀಗಿಕೊಳ್ಳಬಹುದು. ಚಿಕಣಿ ಚಿತ್ರಗಳು ಕೃಷ್ಣನ ಬದುಕನ್ನು ನಿರೂಪಿಸುವ ನೆವದಲ್ಲಿ ಆ ಕಾಲದ ಗ್ರಾಮೀಣ ಬದುಕಿನ ಯಥಾ ದರ್ಶನವನ್ನು ಮಾಡಿಸುತ್ತವೆ! ಸುಮಾರು ೧೮ನೇ ಶತಮಾನದ ಅಂತಹ ಒಂದು ಚಿಕಣಿ ಚಿತ್ರದಲ್ಲಿ ಇಳಿಜಾರು ಚಾವಣಿಯ ಮನೆಗಳು, ಮನೆ ಮುಂದಿನ ಅಂಗಳದಲ್ಲಿ ನೂಲುತ್ತಾ ಕೂತ ಒಬ್ಬ ಗೃಹಿಣಿ, ಅವಳ ಎದಿರು ಮರದ ನೆರಳಲ್ಲಿ ಒಂದು ಕೈಗೂಸನ್ನು ಕುಳ್ಳಿರಿಸಿಕೊಂಡು ಲೋಕಾಭಿರಾಮವಾಗಿ ಮಾತಾಡುತ್ತಿರುವ ಇನ್ನೊಬ್ಬ ತಾಯಿ ; ವಿವಿಧ ಕೆಲಸಗಳಲ್ಲಿ ತೊಡಗಿದ ಊರ ಗಂಡಸರು, ಹೆಂಗಸರು ; ಊರು ಸುತ್ತಾ ಇರುವ ಬೇಲಿ - ಆ ಬೇಲಿ ನಿರ್ಮಿಸಿರುವ ರೀತಿಯೂ ವಿಶೇಷ ಗಮನಾರ್ಹ - ಅದರಾಚೆ ತೋಪು, ಪಕ್ಕ ಹರಿಯುವ ಕಿರು ಹೊಳೆ ಇತ್ಯಾದಿಗಳು ಅಭ್ಯಾಸದ ದೃಷ್ಟಿಯಿಂದ ಮಹತ್ವಪೂರ್ಣವಾಗಿವೆ. ಈ ೨೦೦-೩೦೦ ವರ್ಷಗಳಲ್ಲಿ ನಮ್ಮ ಗ್ರಾಮೀಣ ಬದುಕು-ರೂಪು ತೀರಾ ಬದಲಾಗಿಲ್ಲವೇನೋ ಅನಿಸುತ್ತದೆ. ಹಾಗೆಯೇ, ಇನ್ನೊಂದು ಚಿಕಣಿ ಚಿತ್ರದಲ್ಲಿ ಮನೆಯ ಹೊರಪಕ್ಕದಲ್ಲಿ ದನಗಳ ಕೊಟ್ಟಿಗೆ (ಕೋಣೆ) ಅದರಲ್ಲಿ ದನಗಳನ್ನು ಕಟ್ಟುವ ಗುಜ್ಜು, ಕಣ್ಣಿ (ಹಗ್ಗ) ಇತ್ಯಾದಿಗಳ ಯಥಾಚಿತ್ರಣವಿದೆ. ಚಿತ್ರದಲ್ಲಿನ ಗುಜ್ಜುಗಳು 'ಕವೆ'ಯ ಆಕಾರದಲ್ಲಿವೆ ಮತ್ತು ಕಪ್ಪಾಗಿದ್ದು ಅವು ಜಾಲಿಮರದವು ಇರಬಹುದೆನಿಸುತ್ತವೆ. ದನಗಳನ್ನು ಕಳಚಿ ಆಚೆಬಿಟ್ಟಾಗ ಆ ಹಗ್ಗಗಳು ಕಸಕ್ಕೆ ತಾಗದಿರಲೆಂದು ಕವೆಗಳಿಗೆ ನೇತು ಹಾಕಿದ್ದೂ

ಕಾಣಬರುತ್ತದೆ. ಸ್ವಾರಸ್ಯವೆಂದರೆ, ನಮ್ಮ ರೈತರು ಕೆಲವೆಡೆ ಈಗಲೂ ಇಂತಹ ಗುಜ್ಜಗಳನ್ನು ಬಳಸುತ್ತಾರೆ ಮತ್ತು ಕಣ್ಣಿಗಳನ್ನು ಗೊಂತು ಗುಜ್ಜಿಗೆ ಸುತ್ತುವ ನಡವಳಿ ಹೊಂದಿದ್ದಾರೆ. ಹೀಗೆ ಪ್ರಾಚ್ಯ ಜಾನಪದ ಅಧ್ಯಯನವನ್ನು ಮುಂದುವರೆಸಬಹುದಾಗಿದೆ.

೨ ಕ್ಯಾಂಡೀಡ್ ಜಾನಪದ

ಜನಪದ ಹಾಡು, ಕತೆ, ಗಾದೆ, ಒಗಟು.... ಇತ್ಯಾದಿಗಳನ್ನೆಲ್ಲಾ ವಕೃಗಳಿಂದ ನೇರವಾಗಿ ಕೇಳಿ ಸಂಗ್ರಹಿಸುವುದು ನಮ್ಮ ಅಧ್ಯಯನಕಾರರ ಸಾಮಾನ್ಯ ಕ್ರಮವಾಗಿದೆ. ಕೆಲವೊಂದು ಶಾಸ್ತ್ರ, ಆಚರಣೆಯಂತಹ ನಡವಳಿಗಳನ್ನು ಸ್ವಯಂ ವೀಕ್ಷಣೆಯ ಮೂಲಕ-ಮಾಹಿತಿ-ವಿವರಗಳನ್ನು ಎಲ್ಲರ ಎದುರೇ ದಾಖಲಿಸಿಕೊಳ್ಳಲಾಗುತ್ತದೆ. ಈ ಎರಡೂ ವಿಧಾನಗಳಲ್ಲಿ ನಾವು ಜಾನಪದಕ್ಕೆ ಸಂಬಂಧಿಸಿದ ಸರ್ವವನ್ನೂ ಸಂಗ್ರಹಿಸಲು ಸಾಧ್ಯವೇ? ಈ ಅನುಮಾನ ಏಕೆಂದರೆ -

೧ ಸಂಗ್ರಹಕಾರ ಎದುರಿಗೆ ಕುಳಿತು ಕೇಳಿದ ತಕ್ಷಣವೇ ವಕೃವಿಗೆ ಹೇಳಬೇಕಾದ ಎಲ್ಲಾ ಜಾನಪದ ಸಂಗತಿಗಳೂ ನೆನಪಿಗೆ ಬಂದು ಬಿಡುವುದಿಲ್ಲ. ಹಲವೊಂದು ಅಂಶಗಳು ಆಯಾ ಸಂದರ್ಭ-ಸನ್ನಿವೇಶಗಳ ಸ್ಫೂರ್ತಿಯಿಂದಾಗಿ ವಕೃವಿನ ನೆನಪಿನಾಳದಿಂದ ತಾವಾಗಿ ಎದ್ದು ಹೊರಬರುವಂಥದ್ದಾಗಿರುತ್ತವೆ. ಇಲ್ಲವಾದರೆ ಅವು ಅವರ ಸುಪ್ತ ಜ್ಞಾನ ಭಂಡಾರದಲ್ಲಿಯೇ ಉಳಿದುಬಿಡುತ್ತವೆ.

೨ ತೋಂಡಿಯಾಗಿ ಒಬ್ಬರಿಂದೊಬ್ಬರಿಗೆ ಪ್ರಸಾರವಾಗುವುದರಿಂದ ಜಾನಪದವು 'ಸಾರ್ವಜನಿಕ'ವಾದುದು ಎಂಬಂತಹ ಅಭಿಪ್ರಾಯ ನಮ್ಮ ವಿದ್ವಾಂಸರಲ್ಲಿ ಸಾಮಾನ್ಯವಾಗಿದೆ. ಆದರೆ, ನನ್ನ ತಿಳುವಳಿಕೆಯ ಪ್ರಕಾರ ಜಾನಪದ ಎರಡು ಹಂತಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ ಒಂದು, ಯಾರು ಬೇಕಾದರೂ ಕೇಳುವಂತೆ, ನೋಡುವಂತೆ ಹೇಳುವ, ಪ್ರದರ್ಶಿತವಾಗುವ 'ಸಾರ್ವಜನಿಕ ಜಾನಪದ' ; ಇನ್ನೊಂದು, ನಿರ್ದಿಷ್ಟ ಗುಂಪಿನಲ್ಲಿ ತೀರಾ ಆಂತರಿಕವಾಗಿ ಹೇಳಿಕೊಳ್ಳುವಂಥ 'ಖಾಸಗಿ ಜಾನಪದ'. ಇಂಥಲ್ಲಿ 'ಹೊರಗಿನವ'ರು ಗಮನಿಸುತ್ತಿದ್ದಾರೆ, ಅದನ್ನು ದಾಖಲಿಸುತ್ತಿದ್ದಾರೆ ಎಂಬುದು ಗೊತ್ತಾದರೆ ಅಲ್ಲಿ ಜಾನಪದ ವಾಚಿಕವಾಗಿಯಾಗಲೀ, ಆಂಗಿಕವಾಗಿಯಾಗಲೀ ಅಭಿವ್ಯಕ್ತಗೊಳ್ಳುವುದೇ ಇಲ್ಲ. ಆಗ ಸಂಗ್ರಾಹಕನಿಗೆ ದಾಖಲಿಸಿಕೊಳ್ಳಲು ಏನೂ ಸಿಗುವುದಿಲ್ಲ.

ಮೇಲಿನ ಈ ಎರಡು ಸಂದರ್ಭಗಳಲ್ಲೂ ಅಪರೂಪದ, ಸೂಕ್ಷ್ಮ ಜಾನಪದ ಮಾಹಿತಿಗಳು ಅಭಿವ್ಯಕ್ತಗೊಳ್ಳುವ ಸಂವಹನಗೊಳ್ಳುವ ಸಂಭವವಿರುವುದರಿಂದ ಸಂಗ್ರಾಹಕ ಇಲ್ಲಿ ತಾನು ಇದ್ದು ಇಲ್ಲದಂತಿದ್ದು ಮಾಹಿತಿ ಹೆಕ್ಕಿಕೊಳ್ಳಬೇಕಾಗುತ್ತದೆ. ಇದೊಂದು ಅತಿಕ್ಲಿಷ್ಟವಾದ, ಜಾಣತನದ ಸಂಗ್ರಹಕಾರ್ಯ. ಮಕ್ಕಳ ಗಮನಕ್ಕೆ ಬಾರದಂತೆ ಅವರ ಚಟುವಟಿಕೆಗಳ ಸಹಜ, ಸುಂದರ ಛಾಯಾಚಿತ್ರವನ್ನು ತೆಗೆದಂತೆ ಈ ಕೆಲಸ. ಛಾಯಾ ಗ್ರಹಣ ಪರಿಭಾಷೆಯಲ್ಲಿ ಈ ವಿಧಾನವನ್ನು 'ಕ್ಯಾಂಡಿಡ್ ಫೋಟೋಗ್ರಫಿ' ಎಂದು ಕರೆಯಲಾಗುತ್ತದೆ. ಆ ತಾಂತ್ರಿಕ ಶಬ್ದವನ್ನೇ ಬಳಸಿಕೊಂಡು ಜಾನಪದ ಈ ವಿಭಿನ್ನ ಸಂಗ್ರಹ-ಅಧ್ಯಯನವನ್ನು 'ಕ್ಯಾಂಡಿಡ್ ಜಾನಪದ' (Candid Folklore) ಎಂದು ಕರೆದಿದ್ದೇನೆ.

ಇನ್ನೊಬ್ಬರ ಮಾತುಗಳನ್ನು ಕದ್ದು ಕೇಳುವುದು ಸಜ್ಜನಿಕೆಯಲ್ಲ. ಹಾಗೆಯೇ, ಅವರ

ಮಾತುಗಳನ್ನು ದುರುಪಯೋಗಪಡಿಸಿಕೊಳ್ಳುವುದೂ ನಾಗರಿಕ ಲಕ್ಷಣವಲ್ಲ. ಕ್ಯಾಂಡಿಡ್ ಜಾನಪದ ಅಧ್ಯಯನ ಈ ವಿವೇಕದ ಎಚ್ಚರವನ್ನು ಇರಿಸಿಕೊಂಡೇ ನಡೆಯುವಂತಹದ್ದು. ಈ ಅಧ್ಯಯನಕಾರ ಅನ್ಯರ ಯಾವುದೋ ಮಾತಿಗೆ ರಹಸ್ಯವಾಗಿ ಕಾದು ಕೂತಿರುವುದಿಲ್ಲ; ಅಕಸ್ಮಾತ್ ತನ್ನ ಅಧ್ಯಯನಕ್ಕೆ ಬೇಕಾದ ಯಾವುದೋ ಸಂಗತಿ ಕಿವಿಗೆ ಬಿದ್ದರೆ ಅದನ್ನು ತನ್ನದನ್ನಾಗಿ ಸ್ವೀಕರಿಸುತ್ತಾನೆ ಮತ್ತು ಪಾಶ್ಚಾತ್ಯ 'ಪಾಪ್ಪರಜಿ'ಗಳಂತೆ ಇನ್ನೊಬ್ಬರ ಖಾಸಗಿ ಬದುಕನ್ನು ಆತ ಪ್ರವೇಶಿಸಲಾರ. – ಈ ದೃಷ್ಟಿಯಿಂದ ಕ್ಯಾಂಡಿಡ್ ಫೋಕ್‌ಲೋರ್ ಯಾರಿಗೂ ಹಾನಿ ಮಾಡುವಂತಹದ್ದಲ್ಲ. ಬದಲಿಗೆ, ಸುಪ್ತ ಸಂಸ್ಕೃತಿಯನ್ನು ಶೋಧಿಸಿ ಅರಿವಿನ ಪರಿಧಿಯನ್ನು ವಿಸ್ತರಿಸುವಂತಹದ್ದು. ಕಳೆದ ಕೆಲವು ವರ್ಷಗಳಿಂದ ನಡೆದು ಬಂದ ನನ್ನ ಅಪ್ರಯತ್ನ ಪೂರ್ವಕ ಪ್ರಯತ್ನಗಳಲ್ಲಿ ನೇರವಾಗಿ ಅಥವಾ ಉದ್ದೇಶಪೂರ್ವಕವಾಗಿ ಸಂಗ್ರಹಿಸಲು ಸಾಧ್ಯವಿರದಿದ್ದ – ಜಾನಪದದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ಅನೇಕ ಮಾಹಿತಿಗಳು ನನಗೆ ಲಭ್ಯವಾಗಿವೆ ಎಂದರೆ ಯಾರಿಗಾದರೂ ಅಚ್ಚರೆನಿಸಬಹುದು. ಕ್ಯಾಂಡಿಡ್ ಜಾನಪದದ ಮಹತ್ವವನ್ನು ಮನವರಿಕೆ ಮಾಡಿಕೊಡುವ ಸಲುವಾಗಿ ಅಂತಹ ಕೆಲವೊಂದು ನಿದರ್ಶನಗಳನ್ನು ಇಲ್ಲಿ ನೀಡಬಯಸುತ್ತೇನೆ :

ಕ್ಯಾಂಡಿಡ್ 'ಕಳವು ಜಾನಪದ'

ಬೇಟೆ ಜಾನಪದ, ಕಾರ್ಮಿಕ ಜಾನಪದ ಇತ್ಯಾದಿಗಳು ಇದ್ದಂತೆ ಕಳ್ಳರ ಜಾನಪದವೂ ಇರಲೇಬೇಕಲ್ಲವೇ? ಕಳ್ಳರ ಭಾಷೆ, ತಂತ್ರ- ಕೈಚಳಕ ಇತ್ಯಾದಿಗಳಿಗೆ ಸಂಬಂಧಿಸಿದ ಕಳವು ಜಾನಪದದ ಬಗೆಗೆ ನಮ್ಮಲ್ಲಿ ಯಾರೊಬ್ಬರೂ ಈವರೆಗೂ ಒಂದು ಟಿಪ್ಪಣಿ-ಲೇಖನವನ್ನಾದರೂ ಪ್ರಕಟಿಸಿಲ್ಲವಲ್ಲ, ಏಕೆ? ಕಾರಣ ಸ್ಪಷ್ಟ : ಕಳ್ಳರು ಅಷ್ಟು ಸುಲಭವಾಗಿ ತಮ್ಮ ರಹಸ್ಯ ಜ್ಞಾನವನ್ನು ಇತರರಿಗೆ ಬಿಟ್ಟು ಕೊಡುವುದಿಲ್ಲ. ಮಿಗಿಲಾಗಿ ನಮ್ಮ ಅಧ್ಯಯನಕಾರರೂ ಆ ಕಷ್ಟದ ಕಾರ್ಯಕ್ಕೆ ಕೈ ಹಾಕಹೋಗಿಲ್ಲ. ಆದರೆ, ಜಾನಪದದ ಅಧ್ಯಯನ ವೈವಿಧ್ಯಮಯ, ಸಮಗ್ರ ಆಗಬೇಕಾದರೆ ಆ ಮಾಹಿತಿಯೂ ಇಲ್ಲಿ ಸೇರಲೇಬೇಕು. ಇಂಥಾ ಕ್ಲಿಷ್ಟ ಕಾರ್ಯವನ್ನು 'ಕ್ಯಾಂಡಿಡ್ ಜಾನಪದ' ಜಾಣತನದಿಂದ ಮಾಡಬಲ್ಲುದೆಂಬುದಕ್ಕೆ ಈ ಸ್ವಯಂ ಅನುಭವ ಸಾಕ್ಷಿಯಾಗುತ್ತದೆ. ಹಿಂದಿನ ಸಂಜೆ (೧೭-೭-೨೦೦೦) ಡಾ. ಕಲ್ಗುಡಿ ಅವರ ಮನೆಗೆ ಬರುತ್ತೇನೆಂದು ಹೇಳಿದ್ದ ನಾನು ಇಂದಾದರೂ ಸಕಾಲಕ್ಕೆ ಅವರನ್ನು ಕಾಣೋಣವೆಂದು ಹೊರಟರೂ ಮತ್ತೆ ತಡವಾದುದರಿಂದ, ತುರ್ತು ತುರ್ತಾಗಿ ಸಿಕ್ಕಿದ ಬಿಟಿಎಸ್‌ಗಳನ್ನು ಓಡಿ-ಹಿಡಿದು, ಹತ್ತಿ ಇಳಿದು ನಾಗಪ್ಪ ಪಾರ್ಕ್ ಹತ್ತಿರ ಬಂದೆ. ಅದಾಗಲೇ ಏಳು ಆಗುತ್ತಿತ್ತು. ಓಡುತ್ತಿದ್ದ ಬಸ್ಸು ಏಕೋ ನಿಧಾನವಾಗ ತೊಡಗಿತು. ನೋಡಿದರೆ ಟ್ರಾಫಿಕ್ಕು ಜಾಮೋ ಜಾಮು ! ಇಳಿದು ನೋಡಿದರೆ ಯಾವುದೋ ಶ್ರೀಮಂತ ಹೆಣದ ಮೆರವಣಿಗೆ. ಅವರ ಸಂಪ್ರದಾಯದಂತೆ ರಸ್ತೆಯುದ್ದಕ್ಕೂ ಪಟಾಕಿ ಸಿಡಿಸುತ್ತಾ, ರಸ್ತೆ ತುಂಬಾ ಗಲೀಜು ಮಾಡುತ್ತಾ, ಕಾರು, ಬಸ್ಸು, ಸ್ಕೂಟರು.... ಎಲ್ಲ ಅಡ್ಡ ಹಾಕಿ ಅವುಗಳಿಂದ ಒತ್ತಾಯ ಪೂರ್ವಕ ಇಂಧನ ಸುಡಿಸುತ್ತಾ ನಿಧಾನ ತೆವಳುತ್ತಿತ್ತು.

ಕಾದು ನಿಂತರೆ ಇನ್ನೂ ತಡವಾಗುತ್ತೆ - ಎಂದು ನಾನು ಮುಂದೆ ನಿಂತ ಇನ್ನೊಂದು ಬಸ್‌ಗೆ ಓಡಿದೆ. ಅದು ಎರಡು ಹೆಜ್ಜೆ ಉರುಳುವುದರೊಳಗೆ ಮತ್ತೆ ಜಾಮ್ ಆಯಿತು.

ಸರಿ, ಅಲ್ಲಿಂದ ಹಾರಿ, ಓಡಿ ಇನ್ನೂ ಮುಂದಿನ ಇನ್ನೊಂದು ಬಸ್ ಏರಿದೆ (ತಿಂಗಳ ಟಿಕೆಟ್ ಇದ್ದಿದ್ದರಿಂದ ಚಿಂತೆ ಇಲ್ಲವಲ್ಲ)

ಆ ಹೊತ್ತಿಗೆ ಬಸ್ ಹರಿಶ್ಚಂದ್ರ ಘಾಟ್ ಬಾಗಿಲಿಗೆ ಬಂದಿತ್ತು. ಟ್ರಾಫಿಕ್ ಕಡಿಮೆ ಆಯಿತು. ಆದರೆ ಬಹಳ ಹೊತ್ತಿನಿಂದ ಕಾದಿದ್ದ ಜನ ಈ ಬಸ್ಸಿಗೇ ಮುಗಿಬಿದ್ದರು. ಬಾಗಿಲಲ್ಲಿ ನಿಲ್ಲಲೂ ಸ್ಥಳವಿಲ್ಲ. ಜೊತೆಗೆ ಮೈ-ಮನ ಎರಡರಲ್ಲೂ 'ಘಂ' ಎನ್ನುವ ಜನ. ತಿರುಗಲೂ ಆಗದ ಒತ್ತಡದಲ್ಲೂ ಸುರಕ್ಷತೆಗಾಗಿ ನಾನು ಒಂದೆರಡು ಹೆಜ್ಜೆ ಒಳ ನುಗ್ಗಿದೆ. ಒಬ್ಬರ ಮೈ ಒಬ್ಬರು 'ಬಲವಂತ' ಒತ್ತುತ್ತಿದ್ದರು ಎಂಬುದನ್ನು ಪ್ರತ್ಯೇಕ ಹೇಳುವಂತಿಲ್ಲ. ಆದರೆ, ಹೇಳಬೇಕಾದುದು ನಮ್ಮ ಪ್ಯಾಂಟಿನ ಬಲ ಜೇಬಿನ ಮೇಲೆ ಯಾವುದೋ ಬೆರಳ ತುದಿಗಳು ಸರಿದಾಡುತ್ತಿದ್ದವು! ತಕ್ಷಣ ನನ್ನ ಎಡಗೈ ಬೆರಳ ತುದಿಗಳಿಂದ ನಾನು ಸ್ವತಃ ಜಾಗೃತನಾಗಿರುವುದರ ಸೂಚನೆ ಮುಟ್ಟಿಸಿದೆ. ಅಷ್ಟೇ ಅಲ್ಲ, ಬಲಗೈಯಿಂದ ನನ್ನ ಹೆಗಲಿಗೆ ಯಾವತ್ತೂ ನೇತು ಬಿದ್ದ ಹೆಗಲ ಬ್ಯಾಗನ್ನು ಅವುಚಿ ಹಿಡಿದು, ಎಡಗೈಯಿಂದ ಹಣವಿದ್ದ ಪ್ಯಾಂಟಿನ ಜೇಬನ್ನು ಬಿಗಿಯಾಗಿ ಎಳೆದು ಹಿಡಿದೆ.

ಎದುರಿಗೆ ನಿಂತಿದ್ದ ಕಪ್ಪನೆ, ದಪ್ಪನೆ, ಘುಮ್ಮನೆ ವ್ಯಕ್ತಿ ಇಳಿಯಲು ಬಾಗಿಲು ಕಡೆ ಬರುವಂತೆ ನನ್ನ ಕಡೆ ಸರಿದ. ನಾನು ಎಡ ಕಿಟಕಿ ಕಡೆ ತಿರುಗಿ ನೋಡುತ್ತಾ ನಿಂತೆ. ಬಸ್ ಮುಂದುವರೆಯುತ್ತಿದ್ದಂತೆ 'ದಸ್ತು.... ದಸ್ತು...' ಎನ್ನುವ ಸಣ್ಣ ಸದ್ದು ಕೇಳಿಬಂತು. ಆ ದಪ್ಪನೆ ವ್ಯಕ್ತಿಯೇ ಹೇಳಿದಂತಿತ್ತು. ಅದಕ್ಕೆ ಪ್ರತಿಯಾಗಿ ನನ್ನ ಬಲ ಹಿಂಬದಿಯಿಂದ "ಭದ್ರವಾಗಿ ಹಿಡಕಂಡ ಬಿಟ್ಟವನೆ..." ಎಂಬ ಸ್ವಗತದಂತಹ ಮೆಲು ದನಿ ಕೇಳಿಬಂತು.

'ದಸ್ತು.... ದಸ್ತು' ಎಂದಾಗ, ನಾನು ಅದಕ್ಕೆ ಗಮನ ಕೊಟ್ಟಿರದಿದ್ದರೂ ಇನ್ನೊಂದು 'ಸ್ವಗತ' ಕೇಳಿದಾಗ ಅದು ನನ್ನ ಜೇಬಿಗೆ ಸಂಬಂಧಿಸಿದ್ದೇ ಎಂಬುದು ಸ್ಪಷ್ಟವಾಯಿತು. ಆದರೆ, ಕತ್ತು ತಿರುಗಿಸಿ ಅವರನ್ನು ನೇರ ನೋಡುವಂತಿರಲಿಲ್ಲ. ಏಕೆಂದರೆ, ಈಗ ನಾನು ಜಾಗೃತವಾಗಿರುವುದು ಅವರಿಗೆ ಪೂರ್ಣ ಗೊತ್ತಾಗದಂತೆ ನಟಿಸಿ, ಅವರ ಮುಂದಿನತಂತ್ರ-ಕೈಚಳಕಗಳ ಬಗ್ಗೆ Study ಮಾಡುವುದಕ್ಕೆ ಇದೊಂದು ಅಪರೂಪದ ಅವಕಾಶವಾಗಿತ್ತು.

ಅಂತೆಯೇ ನಾನು ಜೇಬಿನ ಬಾಯಿ ಸಡಿಲವಾಗದಂತೆ ಕೆಳಭಾಗದಿಂದ ಎಳೆದು ಹಿಡಿದೇ ಇದ್ದೆ. ದಪ್ಪನೆ ವ್ಯಕ್ತಿ ಮತ್ತೆ ನನ್ನತ್ತ ಒತ್ತರಿಸಿದ್ದು ಕಂಡು ಸ್ವಲ್ಪ ಜಾಗ ಬಿಡಿ, ಎಂದೆ. ಆತ ತೀರಾ ಸಲೀಸಾಗಿ ಆ ಕಡೆಯಿಂದ ತಳ್ಳುತ್ತಿದ್ದಾರೆ ಎಂದೂ ವಾದ ಅನವಶ್ಯಕವೆಂದು ನಾನು ಮುಖ ಪಕ್ಕಕ್ಕೆ ತಿರುಗಿಸುತ್ತಿದ್ದಂತೆ ಕೋಡ್ ವರ್ಡ್‌ಗಳ FM ಪ್ರಸಾರ ಶುರುವಾಯಿತು.

"ದಸ್ತ.... ದಸ್ತ...."

"ಭದ್ರವಾಗಿ ಹಿಡಿದುಬಿಟ್ಟವನೆ... ಭದ್ರವಾಗಿ ಹಿಡಿದು ಬಿಟ್ಟವನೆ..."

ನನಗೆ ಒಳಗೇ ನಗು. ಆದರೂ ಗಮನಿಸದವನಂತೆ ಮುಂದಿನ ಬೆಳವಣಿಗೆಗಳನ್ನು ನಿರೀಕ್ಷಿಸುತ್ತಿದ್ದೆ. ಸುತ್ತಲಿದ್ದ ಇತರರಿಂದ ಈ ಬಗ್ಗೆ ಏನೂ ಪ್ರತಿಕ್ರಿಯೆ ಇದ್ದಂತಿರಲಿಲ್ಲ. ಆದರೆ, ಆ ಗುಂಪಿನಿಂದ ಮಾತ್ರ ಈ 'ಸ್ಥಳೀಯ ಪ್ರಸಾರ' ಆಗುತ್ತಲೇ ಇತ್ತು.

ಬಸ್ ಮರಿಯಪ್ಪನ ಪಾಳ್ಯದ ಹತ್ತಿರ ಬಂದಾಗ ನಾನು ಎಡಗೈ ಮೇಲೆತ್ತಿ ಕಂಬಿ ಹಿಡಿದೆ. ಮತ್ತದೇ ಪಿಸುದನಿ "ದಸ್ತ.... ದಸ್ತ..." ಆದರೆ, ಅದಕ್ಕೆ ಅದೇ ನಿರಾಶೆಯ ಮಾರ್ನುಡಿ. "ಬಿಗಿಯಾಗಿ ಹಿಡಿದವ್ನೆ..."

ಬಸ್ ನಿಲ್ಲುತ್ತಿದ್ದಂತೆಯೇ ನಾನು ಸಂದಣಿಯಿಂದ ಕೊಸರಿಕೊಂಡು ಬಾಗಿಲತ್ತ ಜರುಗಿದೆ. ತಕ್ಷಣ ಕಿವಿಗೆ ರಾಚಿತು. "ಇಳಿದು ಬಿಟ್ಟ...".

ಹುಸಿನಗುತ್ತಾ ತೂರಿ-ಜಾರಿ ಕೆಳಕ್ಕಿಳಿದೆ. 'ಜೇಬುಗಳು' ಹುಷಾರು ಎಂದು ಇತರರಿಗೆ ಕೂಗಿ ಹೇಳುವುದಕ್ಕೂ ಸಾಧ್ಯವಾಗಲಿಲ್ಲ. ಕಲ್ಲುಗಡಿ ಮನೆಗೆ ಇನ್ನೂ ಬಂದಿರಲಿಲ್ಲ. ವಾಪಸ್ಸು ಅದೇ ಪಾರ್ಕ್ ತುದಿಗೆ ಬಂದಾಗ ನಿಂತಿದ್ದ ಒಬ್ಬ ಆರಕ್ಷಕನನ್ನು ಕುತೂಹಲದಿಂದ ಕೇಳಿದೆ.

"ಜೇಬುಗಳ್ಳರ ಭಾಷೆಯಲ್ಲಿ 'ದಸ್ತ.... ದಸ್ತ ಎಂದರೆ ಏನರ್ಥ?"

"ಅದಾ ಸಾರ್, ಪೊಲೀಸ್ನೋರು ಇದ್ದಾರೆ ಅಂತ ಅರ್ಥ. ಹಾಗೇ, 'ಹತ್ತಿರ ಸರಿ' ಅನ್ನೋದ್ಕೆ 'ವತ್ತರ'ಅನ್ನುತ್ತಾರೆ. ಸಬ್‌ಇನ್ಸ್‌ಪೆಕ್ಟರಿಗೆ 'ಸ್ಟಾರ್' ಅಂತ..."

"ಬಸ್‌ನಲ್ಲಿ ಪೊಲೀಸ್ನೋರು ಇರಲಿಲ್ಲವಲ್ಲ...?" ನಾನೆಂದೆ.

"ಇಲ್ಲಿ ಬಸ್ ನಿಲ್ಲುತ್ತೆ, ಪೊಲೀಸ್ ಸ್ಟೇಷನ್ ಹತ್ತಿರ ಇದೆ. ಬಸ್ ಸ್ವಲ್ಪ ಮುಂದೆ ಹೋಗಲಿ... ಅಂತ ಹೇಳಿರಬಹುದು, ಸಾರ್. ಪೊಲಿಸ್ನೋರ ನೋಡಿದರೂ ಹಾಗೇ ಹೇಳುತ್ತಾರೆ. ಅವೆಲ್ಲಾ ಅವರ ಕೋಡಿಂಗ್..." ಅಂದ.

ಆ ಶಬ್ದಕ್ಕೆ ಇದೇ ಅರ್ಥವೇ? ನನಗೇನೋ ಅನುಮಾನ. ಆದರೂ ಕಳ್ಳರಿಗೂ ಒಂದು ಕೋಡಿಂಗ್ ಭಾಷೆ ಇರುವುದರ ಅರಿವಾಯಿತು. ಇನ್ನು ಅವರ ಸರಿಯಾದ ಅಧ್ಯಯನವೂ ನಡೆಯಬೇಕಿದೆ ಎಂಬುದನ್ನೂ ಇದು ಸೂಚಿಸಿದಂತಾಯಿತು.

ಕ್ಯಾಂಡಿಡ್ 'ನುಡಿಗಟ್ಟು'

ಗ್ರಾಮೀಣ ಜನಪದರಲ್ಲಿ ಕಾಲ ಗಣನೆಗೆ ವಿವಿಧ ನುಡಿಗಟ್ಟುಗಳು ಬಳಕೆಯಲ್ಲಿವೆ. 'ಬೆಳ್ಳಿ ಮೂಡೋ ಹೊತ್ತು', 'ಸೂರ್ಯ ತಾಯೊಟ್ಟೆ ಸೇರೋ ಹೊತ್ತು..." ಇತ್ಯಾದಿಗಳು ಹಿಂದೂಗಳ ಪರಿಕಲ್ಪನೆಯವು. ಅನ್ಯ ಸಂಸ್ಕೃತಿಗಳವರಲ್ಲಿ ಇದೇ 'ಹೊತ್ತು' ಯಾವ ರೂಪ ಪಡೆದಿರಬಹುದು ? ನಮ್ಮ ನಡುವೆಯೇ ಇರುವ ಮುಸ್ಲಿಮರು ಈ ಕಾಲವನ್ನು ಹೇಗೆ ಕಲ್ಪಿಸಿ ಕೊಂಡಿರಬಹುದು ? – ಪ್ರಶ್ನೆಗಳೇನೋ ಕುತೂಹಲಕರವಾಗಿದ್ದರೂ ಮುಸ್ಲಿಂ ಜಾನಪದಕ್ಕೆ ಸಂಬಂಧಿಸಿ ಹೆಚ್ಚಿನ ಅಧ್ಯಯನಗಳೇ ನಡೆದಿಲ್ಲವಾದ್ದರಿಂದ – ಉತ್ತರಗಳೂ ಅಗೋಚರ. ಈ ಕೊರತೆಗೆ ಒಂದು ಸಣ್ಣ ಅಂಶ ಸೇರಿಸಬಹುದಾದ ಒಂದು ಕ್ಯಾಂಡಿಡ್ ಅವಕಾಶ ನನಗೆ ಬಿಟಿಎಸ್‌ನಲ್ಲಿ ಈಚೆಗೆ ಲಭ್ಯವಾಯಿತು-ಆ ಸಂದರ್ಭ ಹೀಗೆ :

ಸೀಟ್ ಇಲ್ಲದೆ ಬಸ್‌ನಲ್ಲಿ ನಿಂತಿದ್ದೆ. ನನ್ನ ಹಿಂದಿನ ಸಾಲಿನ ಸೀಟ್‌ನಲ್ಲಿ ಕುಳಿತಿದ್ದವನೊಬ್ಬ ಬಹು ಅಸಹನೆಯಿಂದ ಸರ್ಕಾರ, ಸಮಾಜ, ಭ್ರಷ್ಟತೆ ಇತ್ಯಾದಿಗಳ ಬಗೆಗೆ ಗಳಹುತ್ತಿದ್ದ. ಅವನ ಮಾತಿನ ಎಳೆಯಿಂದ ಆತನೊಬ್ಬ ಆಧುನಿಕ 'ತಬರ' ಇದ್ದಿರಬಹುದೆಂದು ವೇದ್ಯವಾಗುತ್ತಿತ್ತು. ಕೈಲಿದ್ದ ಒಂದಷ್ಟು ಕಾಗದ ಪತ್ರ ಅದನ್ನು ಸಾಬೀತು ಪಡಿಸುತ್ತಿತ್ತು. ಎಷ್ಟೋ ಸಂದರ್ಭಗಳಲ್ಲಿ ನಾನೂ 'ತಬರ'ನಂತೆಯೇ ತೊಂದರೆ ಅನುಭವಿಸಿದ್ದರೂ ಇದು ಈ ಸಮಾಜದ ನಿತ್ಯದ ನೋವಾದ್ದರಿಂದ ನಾನು ಆತನ ಮಾತುಗಳಿಗೆ ಹೆಚ್ಚು ಗಮನ ಕೊಡ ಹೋಗಲಿಲ್ಲ. ಆದರೆ ಆತ ಪಕ್ಕದವನೊಡನೆ ತನ್ನ ಕಷ್ಟ ಪರಂಪರೆಯನ್ನು ಉಸುರುತ್ತಲೇ ಇದ್ದ. ಆ ಪಕ್ಕದ ಸಹೃದಯ ಏನೋ ಪ್ರಶ್ನಿಸಿದ ಎಂದು ಕಾಣುತ್ತದೆ, ಈತನ ಬಾಯಿಂದ "ಅಲ್ಲಾ ಅನ್ನೋ ಹೊತ್ಗೇ ಹೋಗಿದ್ದೆ ; ಅವನು ಸಿಗಬೇಕಲ್ಲ"– ಎಂಬ ಮಾತು ಹೊರಬಿತ್ತು.

ತಕ್ಷಣ ನನ್ನ 'ಕ್ಯಾಂಡಿಡ್' ಜಾಗೃತವಾಯಿತು, ಮನಸ್ಸಿನಲ್ಲಿಯೇ ಆ ನುಡಿಗಟ್ಟನ್ನು ದಾಖಲಿಸಿಕೊಂಡಿತು. ಅದರ ಅರ್ಥ...? ಆರ್ಕಿಮಿಡೀಸ್‌ನಂತೆ ಮನದೊಳಗೇ 'ಯುರೇಕಾ' ಹೇಳಿಕೊಂಡೆ. ಕಾಲವನ್ನು ಕುರಿತಾದ ಒಂದು ಮುಸ್ಲಿಂ ಸಂಸ್ಕೃತಿಯ ನುಡಿಗಟ್ಟು ಮೊದಲಬಾರಿಗೆ ನನ್ನ ಕಿವಿಗೆ ಬಿದ್ದಿತ್ತು. ಮುಂಜಾನೆ ನಮಾಜು ಮಾಡುವ ಹೊತ್ತನ್ನೇ ಆತ 'ಅಲ್ಲಾ ಅನ್ನೋ ಹೊತ್ತು' ಎಂದಿದ್ದ.

ಕ್ಯಾಂಡಿಡ್ ಬಯ್ಗುಳ

ನನ್ನ 'ಜಾನಪದೀಯ' ಪುಸ್ತಕ ಮುದ್ರಣದ ಒದ್ದಾಟದಲ್ಲಿ ಸಿಕ್ಕಿ, ಮುದ್ರಣಾಲಯದಿಂದ ಹೊರಟು, ಕೊನೇ ಬಸ್ಸು ಹಿಡಿದು ಮಹಾಲಕ್ಷ್ಮೀ ಪುರ ಬಡಾವಣೆ ಹೆಬ್ಬಾಲಿಗೆ ಬರುವ ವೇಳೆಗೆ ರಾತ್ರಿ ೧೧ ಗಂಟೆ ಆಗಿತ್ತು. ತಿರುವಿನಲ್ಲಿ ತಿರುಗಿದ ಬಸ್ ನಿಲುಗಡೆಯಲ್ಲಿ ನಿಂತಾಗ, ಹಿಂದಿನಿಂದ ಬಂದ ಯಾವುದೋ ವಾಹನ ದಾರಿ ಕೇಳಿ ಜೋರಾಗಿ ಹಾರನ್ ಕೀಗುಟ್ಟಿತು. ಅದರ ಕರ್ಕಶ ಶಬ್ದಕ್ಕೆ ಒಳಗಿದ್ದ ಜನರೆಲ್ಲಾ "ಹ್ಯೋ..." ಎಂದು ಪ್ರತಿಯಾಗಿ ಆವಾಜ್ ಹಾಕಿದರು. ಆಗ ಅದೇ ಗುಂಪಿನಿಂದ ಒಂದು ಕಂಠ ಅಬ್ಬರಿಸಿತು :

"ಯಾವನೋ ಅವ್ನ-ಹಾದ್ರಕ್ಕುಟ್ಟಿದ ಆಂಜನೇಯನಂಗೆ ಆಡ್ತಾನೆ..."

ಹಿಂದೆ ಕೇಳಿರದ ಬಯ್ಗುಳ-ನುಡಿ. ಸೀಟು ಸಿಕ್ಕ ತಕ್ಷಣ ಕೂತು ಬರೆದುಕೊಂಡೆ (೧೩-೦೧-೦೧)

ಕ್ಯಾಂಡಿಡ್ 'ಕತೆ'

ಇಬ್ಬರು ತರುಣರು ಕುಳಿತಿದ್ದ ಸೀಟ್ ಕಂಬಿಗೆ ಒರಗಿ ನಾನು ನಿಂತಿದ್ದೆ. ಬಸ್ ESIಗೆ ಬರುವ ಹೊತ್ತಿಗೆ ಅದರಲ್ಲೊಬ್ಬ ಒಂದು ಕತೆ ಪ್ರಾರಂಭಿಸಿದ :

'ನಾರಾಯಣ, ನಾರದನ್ನ ಕೇಳಿದನಂತೆ-'ಈ ವಿಶ್ವದಲ್ಲಿ ಯಾರು ಅತಿ ಹೆಚ್ಚು?' ಅಂತ. ಅದಕ್ಕೆ ನಾರದ ಇದ್ದೋನು 'ನೀರು' ಅಂದನಂತೆ. 'ಯಾಕೇ?' ಅಂದದ್ದಕ್ಕೆ – 'ಅದು ಭೂಮಿಯ ಮೂರು ಭಾಗ ಆವರಿಸಿಕೊಂಡಿದೆ...'

'ಹಾಗಾದರೆ, ಅಂಥಾ ಹೆಚ್ಚಿನ ನೀರನ್ನೆಲ್ಲಾ ಅಗಸ್ತ್ಯ ಒಂದೇ ಆಪೋಶನಕ್ಕೆ ತಗೊಂಡನಲ್ಲಾ! ಆದ್ದರಿಂದ, ಅವನು ಹೆಚ್ಚಲ್ಲವಾ ?'

'ಹೌದು, ಅಗಸ್ತ್ಯನೇ ಹೆಚ್ಚು'- ಎಂದನಂತೆ, ಆಗ ನಾರದ.

'ಆದರೆ, ಅಂಥಾ ಅಗಸ್ತ್ಯ ಆಕಾಶದಲ್ಲಿ ಒಂದು ಚುಕ್ಕೆ ಆಗಿ ಅವನಲ್ಲಾ; ಆದ್ದರಿಂದ ಆಕಾಶಾನೇ ಹೆಚ್ಚಲ್ಲವಾ?'

-ಎಂದನಂತೆ ನಾರಾಯಣ.

'ಹೌದು.'

'ಆದರೆ, ಆ ಆಕಾಶಾನ್ನೂ ವಾಮನ ರೂಪದ ವಿಷ್ಣು ಒಂದೇ ಹೆಜ್ಜೆಗೆ ಅಳೆದನಲ್ಲಾ! ಅಂಥಾ ವಿಷ್ಣುವೇ ಹೆಚ್ಚಲ್ಲವಾ?' ಅಂದನಂತೆ, ನಾರಾಯಣ. ನಾರದ 'ಹೌದು' ಅಂದಾಗ, ಅಂಥಾ ವಿಷ್ಣುವನ್ನೂ-ದೇವರನ್ನೂ ತನ್ನ ಹೃದಯದಲ್ಲಿಟ್ಟುಕೊಂಡು ಪೂಜಿಸಿ, ಭಕ್ತಿಯಿಂದ ಒಲಿಸಿಕೊಳ್ತಾನಲ್ಲಾ, ಭಕ್ತಾ!' ಆದ್ದರಿಂದ, ದೇವರಿಗಿಂತ ಭಕ್ತನೇ ಹೆಚ್ಚಲ್ಲವಾ?' ಅಂದನಂತೆ ನಾರಾಯಣ.

ನಾರದ ಇದ್ದೋನು 'ಹೌದು, ಹೌದು..' ಅಂತ ಒಪ್ಪಿದನಂತೆ. ಮೇಲುನೋಟಕ್ಕೆ ಪೌರಾಣಿಕ ತಾರ್ಕಿಕತೆ ಈ ಕತೆಯಲ್ಲಿದೆ ಎನಿಸಿದರೂ, ವಾಸ್ತವವಾಗಿ ಅದರ ತಳಪಾಯವೇ ಭದ್ರವಾಗಿಲ್ಲ. ಭೂಮಿಯ ಇನ್ನೂ ಒಂದು ಭಾಗ ನೀರಿಗೆ ದಕ್ಕದೆ ತಲೆ ಎತ್ತಿ ನಿಂತಿದೆಯಲ್ಲಾ? ಆದ್ದರಿಂದ ಭೂಮಿಯೇ ಹೆಚ್ಚಲ್ಲವೇ? ಅಥವಾ ಇವೆರಡನ್ನೂ ಆವರಿಸಿರುವ ವಾಯುವೇ ಹೆಚ್ಚಲ್ಲವೇ?- ಎಂದೂ ವಾದಿಸಬಹುದು. ಆದರೆ ಕತೆ ಕೇಳುತ್ತಿದ್ದವ ಬರಿದೇ 'ಹೂ' ಗುಟ್ಟುತ್ತಿದ್ದ. ಇನ್ನೊಬ್ಬ ಉತ್ಸುಕತೆಯಿಂದ ಹೇಳುತ್ತಿದ್ದ. ಅವರ ಕೈಲಿದ್ದ ಪುಸ್ತಕ ಪರಿಕರಗಳಿಂದ ಅವರು ಕಂಪ್ಯೂಟರ್ ವಿದ್ಯಾರ್ಥಿಗಳೆಂಬುದು ಸ್ಪಷ್ಟವಾಗುತ್ತಿತ್ತು.

ಕತೆ ಮುಗಿದ ನಂತರ ಆತ 'ಇಂಥಾ ಕತೆ ಎಂದರೆ ತನಗೆ ಭಾರೀ ಇಷ್ಟವೆಂದೂ, ಒಬ್ಬ 'ಸ್ವಾಮಿ'ಗಳು (ಪ್ರವಚನದಲ್ಲಿ) ಈ ಕತೆ ಹೇಳಿದರೆಂದೂ ತಾನು ಇಂಥೋವನ್ನೆಲ್ಲಾ ಕೇಳಿ, ಸದಾ ಮನಸ್ಸಿನಲ್ಲಿಟ್ಟುಕೊಂಡು ಇತರರಿಗೆ ಹೇಳುವುದಾಗಿಯೂ (ಹೆಮ್ಮೆಯಿಂದ) ಹೇಳಿದ (೧೮-೦೮-೧೯೯೯).

ಕ್ಯಾಂಡಿಡ್ ಜಾನಪದಕ್ಕೆ ಅನಾಯಾಸವಾಗಿ ಒಂದು 'ಕತೆ'ಸಿಕ್ಕಿತು ಎಂದುಕೊಂಡರೂ ನಮ್ಮ ತರುಣ ಜನಾಂಗದ 'ಕಲಿಕೆ', 'ಆಲೋಚನೆ'ಯ ಮಟ್ಟದ ಒಂದು ನಿದರ್ಶನದ ದರ್ಶನವೂ ಆದಂತಾಗಿ ಒಂದು ಕ್ಷಣ ಮೌನವಾದೆ.

-ಹೀಗೆ ಜಾನಪದದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ಅಪರೂಪದ ಗಾದೆ, ಕತೆ, ಸಾಮತಿ, ನಂಬಿಕೆ.:. ಇತ್ಯಾದಿಗಳನ್ನು ಕ್ಯಾಂಡಿಡ್ ಜಾನಪದದಲ್ಲಿ ಕೇಳಬಹುದು; ಸಂಗ್ರಹಿಸಬಹುದು. ಸಹಜ ಸಂದರ್ಭ ಮತ್ತು ಸ್ವಯಂಸ್ಫೂರ್ತಿಯಿಂದ ಅವರು ಇವುಗಳನ್ನು ಹೇಳಿಕೊಳ್ಳುವುದರಿಂದ, ನಮ್ಮ ದಾಖಲೆಗಾಗಿ ಕೇಳಿ ಬರೆದುಕೊಳ್ಳುವುದಕ್ಕಿಂತಲೂ ಹೆಚ್ಚಿನ ಸಹಜತೆ, (ಖಚಿತತೆ?) ಅವುಗಳಿಗಿರುತ್ತದೆ – ಎನ್ನುವುದು ಇವುಗಳ ವಿಶೇಷವಾಗಿರುತ್ತದೆ. ಒಂದು ಅನಿವಾರ್ಯ ಕೊರತೆ ಎಂದರೆ – ಆ ನಿರೂಪಕರ ಯಥಾ 'ಭಾಷೆ-ಶಬ್ದ'ಗಳಲ್ಲಿಯೇ ಮಾಹಿತಿ ದಾಖಲು ಮಾಡಿಕೊಳ್ಳುವುದು ಕಷ್ಟ. (ಸಣ್ಣ ಟೇಪ್‌ರೆಕಾರ್ಡರನ್ನು ಜೇಬಿನಲ್ಲಿ ಅಡಗಿಸಿಟ್ಟುಕೊಂಡಿದ್ದರೆ ಅದೂ ಕಷ್ಟವಲ್ಲ). ನಿರೂಪಕರ ವೈಯಕ್ತಿಕ ಮಾಹಿತಿಯೂ ಇಲ್ಲಿ ದಕ್ಕುವುದಿಲ್ಲ. ಆದರೇನಂತೆ, ಹಲವೊಮ್ಮೆ ಬಾಯಿಬಿಟ್ಟು ಕೇಳಿದರೂ ಹೊರಬರದ ಜಾನಪದೀಯ ಸಂಗತಿಗಳು ಇಲ್ಲಿ ಅಧ್ಯಯನಕಾರರಿಗೆ ಲಭ್ಯವಾಗುತ್ತವೆಯಲ್ಲಾ! ಜೊತೆಗೆ, ಅಧ್ಯಯಕಾರ ಬಸ್ಸು, ಬಸ್ ನಿಲ್ದಾಣ, ಹೋಟೆಲು, ರೈಲು... ಹೀಗೆ ನಿಂತಲ್ಲಿ, ಕುಳಿತಲ್ಲಿ, ನಡೆವಲ್ಲಿಯೂ ಎಲ್ಲೆಂದರಲ್ಲಿ-ತಾನು ಇದ್ದಲ್ಲಿಯೋ – ಜಾನಪದಕ್ಕೆ – ಒಟ್ಟು ಸಮಾಜ-ಸಂಸ್ಕೃತಿಗೆ - ಸಂಬಂಧಿಸಿದ ಮಾಹಿತಿಗಳನ್ನು ಶ್ರಮವಿಲ್ಲದೇ ಸಂಗ್ರಹಿಸಬಹುದಲ್ಲ!

ಅಂತೂ 'ಪ್ರಾಚ್ಯಜಾನಪದೀಯ ಅಧ್ಯಯನದಲ್ಲಿ ಆಗಿಹೋದ ಬದುಕನ್ನು ಕುರಿತ ಶೋಧ-ಪುನರ್ ರಚನೆಯ ಸಾಹಸವಿದ್ದರೆ 'ಕ್ಯಾಂಡಿಡ್ ಜಾನಪದ' ಪ್ರಸ್ತುತದ ಬದುಕಿನ 'ಅಗೋಚರ' ಮುಖಗಳನ್ನೂ ಅರಿಯುವ ವಿಶಿಷ್ಟ ಕಾರ್ಯ ಮಾಡುತ್ತದೆ ಮತ್ತು ಈ ಮೂಲಕ ನಮ್ಮ ಜಾನಪದ ಅರಿವಿನ ಪರಿಧಿಯನ್ನು ವಿಶೇಷವಾಗಿ ವಿಸ್ತರಿಸುತ್ತದೆ.

ಕನ್ನಡ ಜಾನಪದಕ್ಕೆ ಹಾಮಾನಾ ಕೊಡುಗೆ

ಪ್ರೊ. ಅಂಬಳಿಕೆ ಹಿರಿಯಣ್ಣ

ಹಾ.ಮಾ.ನಾಯಕರು ವ್ಯಕ್ತಿಯಾಗಿ, ಪ್ರಾಧ್ಯಾಪಕರಾಗಿ, ಆಡಳಿತಗಾರರಾಗಿ, ಅಂಕಣ ಕಾರರಾಗಿ, ಕನ್ನಡದ ನೇತಾರರಾಗಿ, ಶಿಕ್ಷಣವೇತ್ತರಾಗಿ, ಭಾಷಾ ವಿಜ್ಞಾನಿಯಾಗಿ, ಜಾನಪದ ತಜ್ಞರಾಗಿ ಒಂದೊಂದೂ ಕ್ಷೇತ್ರದಲ್ಲಿ ಒಂದೊಂದು ಸೀಮೆಯನ್ನು ಕಟ್ಟಿದವರು, ಹೊಸ ಸೀಮೆಗಳನ್ನು ಸೃಷ್ಟಿಸಿದವರು. ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ್ದ ಹಾಮಾನಾ ಅವರಿಗೆ ಜಾನಪದ ವಿಶೇಷ ಒಲವಿನ ಕ್ಷೇತ್ರವಾಗಿತ್ತು. ಅವರ ಯಾವುದೇ ಕ್ಷೇತ್ರದ ಸಾಧನೆಯ ಒಟ್ಟು ಫಲಿತವನ್ನು ಒಂದೆಡೆ ಹೇಳಿಬಿಡುವುದು, ಒಂದು ಪ್ರಬಂಧದ ವ್ಯಾಪ್ತಿಯಲ್ಲಿ ಹಿಡಿದಿಡುವುದು ಆಗದ ಮಾತು. ಈ ಮಾತು ಅವರ ಜಾನಪದ ಕ್ಷೇತ್ರದ ಸಾಧನೆಗೂ ಅನ್ವಯಿಸುತ್ತದೆ. ಅವರ ಜಾನಪದ ಬರವಣಿಗೆಗಳಲ್ಲಿ ಕಾಣಿಸುವ, ಜಾನ್ನಪದ ಅಧ್ಯಯನದ ಬಗೆಗಿನ ಅವರ ಸ್ವತಂತ್ರ ಆಲೋಚನೆಗಳು ಕನ್ನಡ ಜಾನಪದ ಅಧ್ಯಯನ ಇತಿಹಾಸದಲ್ಲಿ ವಿಶಿಷ್ಟವೆನಿಸಿದ್ದು ಈ ಆಲೋಚನೆಗಳನ್ನು ಕ್ರೋಢೀಕರಿಸುವ ಕೆಲಸವನ್ನು ಇಲ್ಲಿ ಮಾಡಲಾಗಿದೆ. ಹೀಗೆ ಮಾಡುವಾಗ ಜಾನಪದದ ಬಗೆಗೆ ಹಾಮಾನಾ ಅವರಿಗಿದ್ದ ಗಾಢವಾದ ತಿಳಿವಳಿಕೆ ಮತ್ತು ಕಾಳಜಿಗಳು ಎಂತಹವು ಎಂಬುದನ್ನು ಪರೀಕ್ಷೆಗೆ ಒಡ್ಡಲಾಗಿದೆ.

ಮಲೆನಾಡಿನ ಕೃಷಿಕ ವಲಯದಿಂದ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದ ಹಾಮಾನಾ ಸಹಜವಾಗಿ ತಮ್ಮ ಸುತ್ತಿನ ಜನಪದ ಸಂಸ್ಕೃತಿಯಿಂದ ಆಕರ್ಷಿತರಾದರು. ಮಲೆನಾಡಿನ ಅಂಟಿಗೆ ಪಂಟಿಗೆ ಗೀತ ಸಂಪ್ರದಾಯದ ಬಗೆಗೆ ಬರೆಯುವುದರ ಮೂಲಕ ಜಾನಪದ ಕ್ಷೇತ್ರ ವನ್ನು ಅವರು ಪ್ರವೇಶಿಸಿದರು. ಮುಂದೆ ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ನಡೆದಿದ್ದ ಪಶ್ಚಿಮ ಬಂಗಾಳದಲ್ಲಿ ಅವರು ಅಧ್ಯಯನ ನಡೆಸಿದರು. ಅಮೆರಿಕೆಯ ಇಂಡಿಯಾನಾ ವಿಶ್ವವಿದ್ಯಾನಿಲಯದಲ್ಲಿ ಭಾಷಾವಿಜ್ಞಾನ ವಿಷಯದ ಮೇಲೆ ಪಿಎಚ್.ಡಿ.ಗಾಗಿ ಸಂಶೋಧನೆ ಕೈಗೊಂಡಿದ್ದಾಗ ಆ ವಿಶ್ವವಿದ್ಯಾನಿಲಯದ ಜಾನಪದ ವಿಭಾಗದೊಡನೆ ನೇರ ಸಂಪರ್ಕ ಸಾಧಿಸಿದರು. ಜಾನಪದ ಕ್ಷೇತ್ರದ ಆಚಾರ್ಯ ಪುರುಷರೆನಿಸಿದ್ದ ಸ್ಟಿಥ್‌ಥಾಂಸನ್ ಅವರಿಂದ ಪ್ರಭಾವಿತರಾದರು. ಸಮಾಜ ವಿಜ್ಞಾನ ವಿಷಯಗಳ ಸಾಲಿನಲ್ಲಿ ಬರುವ ಮಾನವಶಾಸ್ತ್ರ, ಭಾಷಾ ವಿಜ್ಞಾನದಂತೆ ಜಾನಪದ ಕೂಡ ವೈಜ್ಞಾನಿಕವಾಗಿ ಅಭ್ಯಾಸ ಮಾಡಬಹುದಾದ ಒಂದು ಪ್ರಮುಖ ಜ್ಞಾನಕ್ಷೇತ್ರ ಎಂಬುದನ್ನು ಅವರು ಬಹುಬೇಗ ಮನಗಂಡರು. ಇಂಡಿಯಾನ ವಿಶ್ವವಿದ್ಯಾನಿಲಯದ ಜಾನಪದ ಅಧ್ಯಯನ ಸಂಸ್ಥೆಯ ಚಟುವಟಿಕೆಗಳು ಅಲ್ಲಿಯ ವಿದ್ವಾಂಸರು, ಪ್ರಪಂಚದ ಬೇರೆ ಬೇರೆ ಕಡೆಗಳಿಂದ ಬಂದು ಅಲ್ಲಿ ಸಂಶೋಧನೆ ಕೈಗೊಂಡಿದ್ದ

ಸಂಶೋಧನಾ ವಿದ್ಯಾರ್ಥಿಗಳು, ಜಾನಪದವನ್ನು ಆ ಹೊತ್ತಿಗಾಗಲೇ ವಿದ್ವತ್ತಿನ ಗದ್ದುಗೆಗೇರಿಸಿದ್ದ ಉತ್ಕೃಷ್ಟಗ್ರಂಥಗಳು ಅವರ ಮನಸ್ಸನ್ನು ಗೆದ್ದುಕೊಂಡಿದ್ದವು.

ಕರ್ನಾಟಕದಲ್ಲಿ ಜಾನಪದ ಸಂಗ್ರಹ ಹಾಗೂ ಅಧ್ಯಯನ ಕಾರ್ಯ ಜಗತ್ತಿನ ಇತರ ಭಾಗಗಳಲ್ಲಿ ಆರಂಭಗೊಂಡ ದಿನಗಳಲ್ಲೇ ನಡೆಯತೊಡಗಿದ್ದುದು ಸರಿಯಷ್ಟೆ. ಕನ್ನಡ ಸಂಸ್ಕೃತಿಯ ಬಗೆಗೆ ಪಾಶ್ಚಾತ್ಯರು ತಾಳಿದ ಆಸಕ್ತಿಯ ಫಲವಾಗಿ ಇಲ್ಲಿನ ಜಾನಪದವೂ ಅಭ್ಯಾಸಯೋಗ್ಯ ವಿಷಯವಾಯಿತು. ಸ್ಥಳೀಯರು ಕೂಡ ಉತ್ಸಾಹದಿಂದಲೇ ಜಾನಪದ ಸಂಗ್ರಹಕಾರ್ಯವನ್ನು ಆರಂಭಿಸಿದರಾದರೂ ಸಂಗ್ರಹ ಅಧ್ಯಯನಗಳೆಲ್ಲ ಬಹುಮಟ್ಟಿಗೆ ವಿವರಣಾತ್ಮಕವೇ ಆಗಿದ್ದವು. ಮಾಸ್ತಿ, ಬಿಎಂಶ್ರೀ, ತೀನಂಶ್ರೀ, ಬೆಟಗೇರಿ ಇವರೇ ಮುಂತಾದವರು ಭಾರತೀಯ ಮತ್ತು ಅನ್ಯಭಾಷೆಗಳಲ್ಲಿ ಪ್ರಕಟಗೊಂಡಿದ್ದ ಬರಹಗಳ ಮೂಲಕ ಕನ್ನಡ ಜಾನಪದದ ಸೊಗಸನ್ನು ಮನಗಂಡು ಸಾಹಿತ್ಯಿಕ ಆಸಕ್ತಿಯಿಂದಲೇ ಕನ್ನಡ ಜಾನಪದದ ವಿವೇಚನೆಗೆ ತೊಡಗಿದರು. ಇದರ ಫಲವಾಗಿ ಕನ್ನಡ ಜನಪದ ಸಾಹಿತ್ಯ ಸಂಗ್ರಹಣೆ ಮತ್ತು ಪ್ರಕಟಣ ಕಾರ್ಯ ಚುರುಕುಗೊಂಡಿತು. ಈ ಹಿರಿಯರು ವ್ಯಕ್ತಪಡಿಸಿದ ಅಭಿಪ್ರಾಯಗಳು, ನೀಡಿದ ಪ್ರೇರಣೆ ಪ್ರಚೋದನೆಗಳು ಮುಂದಿನ ಸಂಗ್ರಾಹಕರಿಗೆ ಚೇತೋಹಾರಿಯಾದವು. ಒಟ್ಟಿನಲ್ಲಿ ಭಾರತದ ಇತರೆಡೆಗಳಲ್ಲಿನಂತೆ ಕರ್ನಾಟಕದಲ್ಲೂ ಜಾನಪದ ಸಂಗ್ರಹ ಕುರಿತ ಆಸಕ್ತಿ ಕುದುರಿದುದು ನವೋದಯ ಚಳವಳಿಯ ಜೊತೆಯಲ್ಲಿಯೇ. ಕನ್ನಡ ಸಾಹಿತ್ಯದಲ್ಲಾದ ನವೋದಯಕ್ಕೆ ಪಾಶ್ಚಾತ್ಯ ಸಾಹಿತ್ಯ ಕಾರಣವಾದಂತೆ ಕನ್ನಡ ಜಾನಪದ ಅಧ್ಯಯನದ ಆರಂಭಕ್ಕೂ ಪಾಶ್ಚಾತ್ಯರೇ ಕಾರಣ ಎಂಬುದರಲ್ಲಿ ಸಂದೇಹವಿಲ್ಲ. ಬೇರೆ ಬೇರೆ ಉದ್ದೇಶಗಳಿಗಾಗಿ ಪಾಶ್ಚಾತ್ಯ ಮಿಷನರಿಗಳು ಕನ್ನಡ ಜನಪದ ಸಾಹಿತ್ಯವನ್ನು ಸಂಗ್ರಹಿಸಿದುದು ಒಂದು ದಾಖಲೆಯಾಗಿದ್ದರೂ ಅದು ಸಾಹಿತ್ಯ ಸೌಂದರ್ಯ ದೃಷ್ಟಿಯ ರಸಾಸ್ವಾದನೆಯ ಆಕಾಂಕ್ಷೆಯ ಹಾಗೂ ಕನ್ನಡ ಸಂಸ್ಕೃತಿಯ ಅರಿವಿನ ಕಾರ್ಯವಾಗಿತ್ತೆಂದು ಹೇಳುವುದು ಕಷ್ಟ. ನವೋದಯ ಕಾಲದ ಭಾವಗೀತೆಯ ಬೆರಗು ಕನ್ನಡ ಸಾಹಿತ್ಯ ರಸಿಕರ ಮೇಲೆ ವಿಶೇಷ ಪ್ರಭಾವವನ್ನು ಬೀರುತ್ತಿದ್ದ ಆ ಕಾಲದಲ್ಲಿ ಆ ಸಾಹಿತ್ಯಕ್ಕೆ ಸಂವಾದಿಯಾಗಿ ಹಾಡು, ಕತೆಗಳನ್ನು ಆಯ್ದು ನೀಡುವುದು ಸ್ಥಳೀಯ ವಿದ್ವಾಂಸರ ಇರಾದೆಯಾಗಿದ್ದಿತು ಎಂದು ತೋರುತ್ತದೆ. ಈ ಅವಧಿಯ ಜಾನಪದ ಅಧ್ಯಯನದ ಮೇಲೆ ರೊಮ್ಯಾಂಟಿಕ್ ಹಾಗೂ ರಾಷ್ಟ್ರೀಯತಾ ಮನೋಭಾವಗಳ ಪ್ರಭಾವ ತೀವ್ರವಾಗಿದ್ದುದೇ ಅದಕ್ಕೆ ಕಾರಣ. ಹೀಗಾಗಿ ಈ ಅವಧಿಯಲ್ಲಿ ವೈಯಕ್ತಿಕ ಅಭಿರುಚಿಯಿಂದ ಜಾನಪದ ಸಂಗ್ರಹ-ಸಂಪಾದನೆ ಅಧ್ಯಯನ ನಡೆಸಿದವರ ಸಂಖ್ಯೆಯೇ ದೊಡ್ಡದು. ಸಂಗ್ರಹ ಸಂಪಾದನೆಯಲ್ಲಿ ಅವರು ತೋರಿದ ಶ್ರದ್ಧೆ, ಕಳಕಳಿ ಅನನ್ಯವಾದರೂ ಈ ಅವಧಿಯಲ್ಲಿ ಸಾಹಿತ್ಯವನ್ನು ಸಂಗ್ರಹಿಸುವ ಅವಸರವೇ ಎದ್ದು ಕಾಣುತ್ತಿತ್ತು. ಜಾನಪದಕ್ಕೆ ತೀರ ಅಗತ್ಯವಾದ ಕ್ಷೇತ್ರಕಾರ್ಯ ಅನುಭವವಾಗಲಿ ಅಧ್ಯಯನದ ಹಿನ್ನೆಲೆಯಾಗಲಿ ಇಲ್ಲದೆ ಕೇವಲ ಭಾವುಕ ಉತ್ಸಾಹದಿಂದ ಕೆಲಸ ನಡೆಯುತ್ತಿತ್ತು. ಜಾನಪದವನ್ನು ವಿಸ್ಮಯ, ಪ್ರಶಂಸೆ, ಆರಾಧನಾ ಮನೋಭಾವಗಳಿಂದ ಸೌಂದರ್ಯಾತ್ಮಕ ದೃಷ್ಟಿಯಿಂದ ಪರಿಭಾವಿಸುತ್ತಿದ್ದುದು ಸಾಮಾನ್ಯ ವಾಗಿತ್ತು. ಎಲ್ಲೋ ಒಮ್ಮೊಮ್ಮೆ ವೈಜ್ಞಾನಿಕ ಸೆಳಕುಗಳು ಕಂಡುಬರುತ್ತಿದ್ದವು. ಇದು ಆಕಸ್ಮಿಕವಾಗಿರಬಹುದೇ ಹೊರತು ವಿಷಯವನ್ನು ವೈಜ್ಞಾನಿಕವಾಗಿ ಪೃಥಕ್ಕರಿಸಬೇಕೆಂಬ

ಸೈದ್ಧಾಂತಿಕ ತಿಳಿವಳಿಕೆಯಿಂದ ಅಲ್ಲ. ಜಾನಪದ ಧೋರಣೆಯ ವೈಜ್ಞಾನಿಕ ದೃಷ್ಟಿಯ ಕೊರತೆಯೇ ಅದಕ್ಕೆ ಕಾರಣ. ಒಟ್ಟಾರೆ ಜನಪದ ಸಾಹಿತ್ಯವನ್ನು ಜಾನಪದದ ಸಮಗ್ರ ಧೋರಣೆಯಲ್ಲಿ ಕಾಣದ ಮನೋಭಾವವೇ ಎದ್ದು ಕಾಣುತ್ತಿತ್ತು. ಕನ್ನಡ ಜಾನಪದ ಅಧ್ಯಯನಕ್ಕೆ ಇಂಥ ಒಂದು ವೈಜ್ಞಾನಿಕ ಆಯಾಮ ತಂದುಕೊಟ್ಟವರು ಹಾಮಾನಾ. ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ 'ಕನ್ನಡ ಜನಪದ ಸಾಹಿತ್ಯ: ವಿವಿಧ ಮುಖಗಳು' ಎಂಬ ಗೋಷ್ಠಿಯಲ್ಲಿ ಅವರು 'ಜನಪದ ಸಾಹಿತ್ಯ, ಅದರ ಸ್ವರೂಪ' ಎಂಬ ಪ್ರಬಂಧವನ್ನು ಮಂಡಿಸಿದರು. ಕನ್ನಡ ಜಾನಪದ ಅಧ್ಯಯನದ ಇತಿಹಾಸದಲ್ಲಿ ಒಂದು ಐತಿಹಾಸಿಕ ದಾಖಲೆ ಅದು. ಆ ಪ್ರಬಂಧದ ವಿಷಯ, ಧಾಟಿ ತೀರ ಹೊಸತಾಗಿದ್ದಿತು. ಆವರೆಗೆ ಸ್ಥಳೀಯ ವಿದ್ವಾಂಸರು ಕನ್ನಡ ಜಾನಪದವನ್ನು ಗ್ರಹಿಸಿದ ರೀತಿಗೂ ಹಾಮಾನಾ ಆ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧದ ಹೊಸ ದೃಷ್ಟಿಗೂ ಅಜಗಜಾಂತರವಿತ್ತು. ಆ ಪ್ರಬಂಧದಲ್ಲಿ, ಜೀಶಂಪ ಅವರು ಸರಿಯಾಗಿ ಗುರುತಿಸಿರುವಂತೆ (೧೯೭೯ : ೪೭) ಜಾನಪದ ಸ್ವರೂಪವನ್ನು ಕುರಿತು ಅವರು ಕನ್ನಡದಲ್ಲಿ ಅದೇ ಮೊದಲ ಬಾರಿಗೆ ಕೆಲವು ಅಂಶಗಳನ್ನು ಮುಂದಿಟ್ಟರು :

೧ ಮಾನವನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದ ಅತ್ಯಂತ ಮಹತ್ತರ ವಿಷಯ.

೨ ಈ ಐತಿಹಾಸಿಕ ವಿಜ್ಞಾನವು ಬರಿ ಊಹೆಯನ್ನು ಅವಲಂಬಿಸಿರುವ ಶಾಸ್ತ್ರವಾಗಿರದೆ ವಾಸ್ತವಿಕ ಆಧಾರದ ಮೇಲೆ ಬೆಳೆಯುತ್ತಿರುವ ಅಧ್ಯಯನದ ವಿಷಯವಾಗಿದೆ.

೩ Folk ಮತ್ತು Folkloreಗೆ ಸಂವಾದಿಯಾಗಿ ಕ್ರಮವಾಗಿ 'ಜನಪದ' ಮತ್ತು 'ಜಾನಪದ' ಎಂದು ಬಳಸಬಹುದಾದ ಸಾಧ್ಯತೆ.

೪ ಜಾನಪದ ಗ್ರಂಥಸ್ಥವಲ್ಲದ ಸಂಪ್ರದಾಯದ ಮೊತ್ತ.

೫ ಜನಪದವನ್ನು ಕುರಿತದ್ದು ಜಾನಪದ.

ಇಂಗ್ಲಿಷಿನ Folk ಶಬ್ದವನ್ನು ಅತ್ಯಂತ ಎಚ್ಚರಿಕೆಯಿಂದ ಸೂಕ್ಷ್ಮವಾಗಿ ಬಳಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದ ಹಾಮಾನಾ Folk ಎನ್ನುವುದು ಜನ, ಮಂದಿ, ಜನಾಂಗ, ಕುಲ, ಜನಸಾಮಾನ್ಯರ ಒಂದು ಗೊತ್ತಾದ ವರ್ಗದ ಜನರು, ಸಂಕೀರ್ಣ ಸ್ವಭಾವದ ನಾಗರಿಕ ಸಮಾಜದಲ್ಲಿ ಹಳೆಯ ಗುಂಪು, ಮೂಲ ಸಂಸ್ಕೃತಿಯನ್ನು ಒಯ್ಯುವ ಸಾಮಾಜಿಕ ವರ್ಗ ಅಥವಾ ಸಂಪ್ರದಾಯದೊಂದಿಗೆ ಹೆಣೆದ ಸಮಾಜ, ಹಳೆಯ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿರುವ ಸಾಮಾನ್ಯರ ಸಮೂಹ. (೧೯೭೧ : ೧೭) ಎಂದೆಲ್ಲಾ ಅರ್ಥೈಸಿದರು. Folk ಎಂಬುದು ಸಮಾಜದ ಅಶಿಕ್ಷಿತ ವರ್ಗದ ಕೆಳಸ್ತರದ ಜನ ಎಂದು ವ್ಯಾಖ್ಯಾನಿಸಿದ ಹಾಮಾನಾ Folklore ಎಂಬುದು ವ್ಯಾಪಕವಾದ ಅರ್ಥವುಳ್ಳ ಶಬ್ದವೆಂದು ಸ್ಪಷ್ಟಪಡಿಸಿ ಅದರಲ್ಲಿ ಜನಪದ ಸಾಹಿತ್ಯ, ಜನಪದ ಕಲೆ, ಜನಪದ ಸಂಗೀತ, ಕ್ರೀಡೆ, ವೈದ್ಯ, ವಾಸ್ತು, ಶಿಲ್ಪ ಮೊದಲಾದ ವಿಷಯಗಳು ಸೇರುತ್ತವೆ ಎಂದು ವಿವರಿಸಿದರು. ಅವರ ಪ್ರಕಾರ ಜಾನಪದ ಎನ್ನುವುದು ಅಧ್ಯಯನ ವಿಷಯವೂ ಹೌದು. ಸಾಮಗ್ರಿಯೂ ಹೌದು. ಜನಪದ ಸಂಸ್ಕೃತಿಯ ಅಧ್ಯಯನವೇ ಜಾನಪದ. ಜನಪದಕ್ಕೆ ಸಂಬಂಧಿಸಿದ ಜ್ಞಾನವೇ ಜಾನಪದ ಎನಿಸುತ್ತದೆ. ಹೀಗೆ ಜಾನಪದ ಪರಿಕಲ್ಪನೆ ಕುರಿತು ಮಹತ್ವದ ವಿಚಾರಗಳನ್ನು ಪ್ರತಿಪಾದಿಸುವ ಹಾಮಾನಾ Folk ಮತ್ತು Lore ಗಳ ಸಂಬಂಧವನ್ನು ಜನಪದ, ಜಾನಪದ

ಶಬ್ದಗಳ ಅರ್ಥವ್ಯಾಪ್ತಿಯನ್ನೂ ಜಾನಪದ ಒಳಗೊಳ್ಳುವ ವಿಷಯಗಳು ಮತ್ತು ಅವುಗಳ ವಿಸ್ತಾರವನ್ನು ವಿವರವಾಗಿ ಚರ್ಚಿಸಿ ಜಾನಪದ ಸಂಬಂಧವಾದ ಆಧುನಿಕ ಅಧ್ಯಯನಗಳತ್ತ ಕನ್ನಡಿಗರ ದೃಷ್ಟಿಯನ್ನು ಸೆಳೆದುದು ಗಮನಾರ್ಹವಾಗಿದೆ (ಜೀಶಂಪ : ೧೯೭೯ : ೪೭) ಆದರೆ ಈ ಎರಡೂ ಪ್ರಯೋಗಗಳನ್ನು ಪ್ರತ್ಯೇಕಿಸಿ ಹೇಳುವಲ್ಲಿ ಅತ್ಯಂತ ಕಡಿಮೆ ರಾಜಕೀಯ ಸೂಕ್ಷ್ಮತೆಯನ್ನು ಹಾಮಾನಾ ಪ್ರದರ್ಶಿಸಿದ್ದಾರೆ ಎಂಬ ಕಾರಣ ನೀಡಿ ಎಂ.ಎ. ಜಯಚಂದ್ರ ಅವರು Folk ಎಂಬುದಕ್ಕೆ 'ಜಾನಪದ' ಎಂಬ ಪದವನ್ನೂ Folklore ಎಂಬುದಕ್ಕೆ 'ಜಾನಪದಾಧಿಗಮ' ಎಂಬ ಪದವನ್ನು ಬಳಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು (೧೯೭೬ : ೭). ಸಮಾಜ ವಿಜ್ಞಾನಗಳ ನಿಕಾಯದಲ್ಲಿ ಬರುವ ಸಮಾಜಶಾಸ್ತ್ರ ಮಾನವ ಶಾಸ್ತ್ರಗಳಂತೆ ಇದು ಕೂಡ ಒಂದು ಶಾಸ್ತ್ರ ವಿಷಯ ಎಂಬ ಗ್ರಹಿಕೆಯಲ್ಲಿ ಎಂ. ಚಿದಾನಂದಮೂರ್ತಿ ಅವರು Folklore ಗೆ ಸಂವಾದಿಯಾಗಿ 'ಜಾನಪದಶಾಸ್ತ್ರ' ಎಂಬ ಪಾರಿಭಾಷಿಕ ಪ್ರಯೋಗ ಯುಕ್ತ ಎಂದು ಅಭಿಪ್ರಾಯಪಟ್ಟಿರುವುದುಂಟು (೧೯೮೪ : ೪೪). ಈ 'ಜನಪದ' ಮತ್ತು 'ಜಾನಪದ' ಶಬ್ದಗಳ ಬಳಕೆ ಕುರಿತು ಮರು ವ್ಯಾಖ್ಯಾನ ನಡೆಸಿರುವ ಅರವಿಂದಮಾಲಗತ್ತಿ ಈ ಶಬ್ದಗಳ ಅರ್ಥದ ಔಚಿತ್ಯವನ್ನು ಪ್ರಶ್ನಿಸಿರುವದಲ್ಲದೆ ಕರ್ನಾಟಕದ ಬದುಕಿನ ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ಜನಪದ-ಜಾನಪದ ಶಬ್ದಗಳ ಅರ್ಥವನ್ನು ಗುರುತಿಸುವ ಯತ್ನ ನಡೆಯಬೇಕೆಂದು ಆಶಿಸಿದ್ದಾರೆ. ಆಂಗ್ಲ ಪರಿಭಾಷೆಯ ಅರ್ಥದಲ್ಲೇ ಆ ಶಬ್ದಗಳನ್ನು ಇಂದಿಗೂ ಬಳಸುತ್ತಿರುವುದನ್ನು ತೀವ್ರವಾಗಿ ಆಕ್ಷೇಪಿಸಿರುವ ಅವರು ಯೂರೋಪಿಯನ್ ನೆಲೆಯಿಂದ ಅರ್ಥೈಸುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. 'ಶಿಷ್ಟ' ಮತ್ತು 'ಜನಪದ' ಎಂಬ ಪರಿಕಲ್ಪನೆಯಲ್ಲಿ ಒಂದು ಜನತೆಯನ್ನು ಗುರಿತಿಸುವ ವಿಧಾನ ಕೂಡ ಪಾಶ್ಚಾತ್ಯ ನೆಲೆಯದ್ದೇ ಆಗಿದೆ ಎಂದು ಸ್ಪಷ್ಟಪಡಿಸಿ Folk Culture Urban Cultureಗೆ ವಿರುದ್ಧವಾದುದು ಎಂಬ ಚಿಂತನೆ ಯೂರೊಪಿಯನ್ ಸಮಾಜದ ಬದುಕಿನ ಹಿನ್ನೆಲೆಯದೇ ಆಗಿದೆ ಎಂದು ಪ್ರತಿಪಾದಿಸಿದ್ದಾರೆ(೧೯೯೯ : ೨೨). ಇಷ್ಟೆಲ್ಲಾ ಭಿನ್ನಾಭಿಪ್ರಾಯಗಳ ನಡುವೆಯೂ ಹಾಮಾನಾ ಬಳಕೆಗೆ ತಂದ 'ಜನಪದ' 'ಜಾನಪದ' ಪ್ರಯೋಗಗಳು ಇಂದಿಗೂ ಸಾರ್ವತ್ರಿಕವಾಗಿ ಚಲಾವಣೆಯಲ್ಲಿರುವುದು ಗಮನಾರ್ಹ.

ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಹಾಮಾನಾ ಅವರು ೧೯೬೦ರಲ್ಲಿ ಜನಪದ-ಜಾನಪದ ಶಬ್ದಗಳನ್ನು ನಿರ್ದಿಷ್ಟ ಅರ್ಥದಲ್ಲಿ ಬಳಕೆಗೆ ತರುವ ಮೊದಲು ಕನ್ನಡದಲ್ಲಿ ಜಾನಪದದ ಸಮಗ್ರ ಕಲ್ಪನೆ ಮೂಡಿರಲಿಲ್ಲ ; ಜಾನಪದವನ್ನು ಒಂದು ಅಧ್ಯಯನ ಶಿಸ್ತಾಗಿ ಪರಿಗಣಿಸುವ ಸಿದ್ಧತೆ ಕೂಡ ಆಗಿರಲಿಲ್ಲ ಎಂಬುದು ಜನಪದ ಸಾಹಿತ್ಯದ ಆಸ್ವಾದನಾ ಪ್ರವೃತ್ತಿ ಮಾತ್ರ ವ್ಯಾಪಕ ಪ್ರಚಾರದಲ್ಲಿದ್ದ ಆ ಕಾಲದಲ್ಲಿ ಜಾನಪದದ ಸಮಗ್ರ ಪರಿಕಲ್ಪನೆ ಮತ್ತು ವೈಜ್ಞಾನಿಕ ದೃಷ್ಟಿಗಳನ್ನು ತಂದುಕೊಟ್ಟ ಹಾಮಾನಾ ಅವರ 'ಜನಪದ ಸಾಹಿತ್ಯ, ಅದರ ಸ್ವರೂಪ' ಪ್ರಬಂಧ ಒಂದು ಹೊಸ ಅಲೆಯನ್ನೇ ಎಬ್ಬಿಸಿತು. ಆವರೆಗೆ ನಡೆದು ಬಂದ ಸಾಂಪ್ರದಾಯಿಕ ಧೋರಣೆಯ ಸ್ವೇಚ್ಛಾನುಸಾರ ಪ್ರವೃತ್ತಿಯ ಅಧ್ಯಯನಗಳ ಬುಡವನ್ನೇ ನಲುಗಿಸಿತು. ಈ ಪ್ರಬಂಧ ಎಷ್ಟು ಪರಿಣಾಮ ಬೀರಿತೆಂದರೆ ೧೯೬೦ರ ಅನಂತರದ ಜಾನಪದ ಸಂಗ್ರಹ ಮತ್ತು ಅಧ್ಯಯನ ಕಾರ್ಯಗಳ ಮಾದರಿಯೇ (paradigm) ಬದಲಾಗುವಷ್ಟು, ಹೊಸ ಚೌಕಟ್ಟನ್ನೇ (canvas) ರೂಪಿಸಿಕೊಳ್ಳುವಷ್ಟು.

ಜಾನಪದ ಸಂಗ್ರಹ-ಸಂಪಾದನೆಗಳಷ್ಟೇ ಮುಖ್ಯವಾದುದು ಅದನ್ನು ಕುರಿತ ಅಧ್ಯಯನ. ಕನ್ನಡ ಜಾನಪದ ಅಧ್ಯಯನ ವೈಜ್ಞಾನಿಕ ನೆಲಗಟ್ಟಿನ ಮೇಲೆ ನಡೆಯಲು ಆರಂಭವಾದುದು ಹೊಸ ದೃಷ್ಟಿ ಮೂಡಿದ ಅನಂತರವೇ. ಕನ್ನಡ ಜಾನಪದ ಅಧ್ಯಯನಕ್ಕೆ ವ್ಯಾಪಕವಾದ ಈ ಬಗೆಯ ತಾತ್ವಿಕ ನೆಲೆಯನ್ನು ಒದಗಿಸಿದ ಕೀರ್ತಿ ಹಾಮಾನಾ ಅವರದು. ಅವರ 'ಜಾನಪದ ಸ್ವರೂಪ' (೧೯೭೧) ಇಂತಹ ಒಂದು ಪ್ರವರ್ತಕ ಕೃತಿಯಾಗಿದೆ. ಬೇರೆ ಬೇರೆ ಸಂದರ್ಭಗಳಿಗಾಗಿ ಅವರು ಬರೆದು ಪ್ರಕಟಿಸಿದ ಇಲ್ಲಿಯ ಬರಹಗಳಲ್ಲಿ ನಿರ್ದುಷ್ಟ ಆಲೋಚನೆಗಳು ಹರಡಿಕೊಂಡಿರುವುದನ್ನು ನೋಡುತ್ತೇವೆ. ಈ ಒಂದೊಂದೂ ಬರಹವೂ ಜಾನಪದ ಅಧ್ಯಯನದ ಹಲವಾರು ಸಾಧ್ಯತೆಗಳನ್ನು ತೆರೆದು ತೋರಿಸಿದವು (ರಾಗೌ:೧೯೮೧:೧೨೧) ಈ ಕೃತಿಯಲ್ಲಿ ಸೇರ್ಪಡೆಗೊಂಡಿರುವ ಹಾಮಾನಾ ಅವರ ಮಹತ್ವಪೂರ್ಣವಾದ ಮತ್ತೊಂದು ಬರಹ 'ಜಾನಪದ ಅಧ್ಯಯನ : ವೈಜ್ಞಾನಿಕ ದೃಷ್ಟಿ' 'ಹೊನ್ನ ಬಿತ್ತೇವು ಹೊಲಕೆಲ್ಲ' ಸಂಪುಟಕ್ಕಾಗಿ ಸಿದ್ಧವಾದಂತಹುದು. ಈ ಪ್ರಬಂಧದಲ್ಲಿ ಜಾನಪದದ ವೈಜ್ಞಾನಿಕ ವರ್ಗೀಕರಣದ ಪ್ರಸ್ತಾಪ ವಿವರವಾಗಿ ಬಂದಿದೆ. ಆರ್.ಎಸ್. ಬಾಗ್ಸ್ ಅವರು ವಿಸ್ತಾರವಾಗಿ ರೂಪಿಸಿ ಬೆಳಕಿಗೆ ತಂದ ಜಾನಪದ ವರ್ಗೀಕರಣ ತತ್ವದ ಚರ್ಚೆ ಇಲ್ಲಿದೆ. ಅದೇ ಬಾಗ್ಸ್ ಅವರು ಮೊದಲಿಗೆ ಪ್ರಾಚುರ್ಯಗೊಳಿಸಿದ್ದ ಚತುರ್ಮುಖ ವರ್ಗೀಕರಣದ ಸ್ಥೂಲ ವಿವೇಚನೆಯೂ ಇದೆ. ಜಾನಪದದ ನಾಲ್ಕು ಪ್ರಮುಖ ಬಗೆಗಳಾದ ಸಾಹಿತ್ಯಿಕ, ಭಾಷಿಕ, ಕ್ರಿಯಾತ್ಮಕ ಮತ್ತು ವೈಜ್ಞಾನಿಕ ಬಗೆಗಳನ್ನು ಉದಾಹರಣೆಗಳೊಡನೆ ಪ್ರಸ್ತಾಪಿಸಿ ಹಾಮಾನಾ ಹೊಸ ಅರಿವನ್ನು ಮೂಡಿಸಿದ್ದಾರೆ. ಎಲ್ಲಕ್ಕಿಂತ ವಿಶೇಷವಾಗಿ ಆ ಕಾಲದಲ್ಲಿ ಬಹು ಜನಪ್ರಿಯವಾಗಿದ್ದ ಆಶಯ (Motif) ಮತ್ತು ವರ್ಗ (Type) ಪರಿಕಲ್ಪನೆಗಳನ್ನು ಪರಿಚಯಿಸಿ ಕನ್ನಡ ಜಾನಪದ ಅಧ್ಯಯನ ಫಿನ್ನಿಷ್ ವಿಧಾನದಲ್ಲಿ ಸಾಗಲು ಕಾರಣರಾಗಿದ್ದಾರೆ. 'ಜಾನಪದ ಸ್ವರೂಪ' ಕೃತಿಯ 'ವಿಲಿಯಂ ಥಾಮ್ಸ್ ಮತ್ತು ಜಾನಪದ' ಎಂಬ ಬರಹದಲ್ಲಿ ಥಾಮ್ಸ್ Folklore ಪದವನ್ನು ಬಳಕೆಗೆ ತಂದ ಬಗೆಯನ್ನೂ ಜಾನಪದದ ಬಗೆಗಿನ ಅವನ ಬದ್ಧತೆ ಮತ್ತು ಕಳಕಳಿಯನ್ನೂ ಅರ್ಥಮಾಡಿಕೊಳ್ಳಬಹುದು. 'ಜನಪದ ಕಲೆ : ಒಂದು ನೋಟ' ಎಂಬ ಬರಹದಲ್ಲಿ ಜನಪದ ಕಲೆಗಳನ್ನು ನೋಡಲು ಒಂದು ವಿಶಿಷ್ಟ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವನ್ನು ಪ್ರತಿಪಾದಿಸಲಾಗಿದೆ. ಒಟ್ಟಿನಲ್ಲಿ ಈ ಕೃತಿಯ ಮೂಲಕ ಹಾಮಾನಾ ಜಾನಪದದ ವೈಜ್ಞಾನಿಕ ಅಧ್ಯಯನವನ್ನು ಉದ್ಘಾಟಿಸಿದರು ಎಂದು ಹೇಳಬಹುದು.

ಹಾಮಾನಾ ಅವರು ಜಾನಪದ ಕುರಿತು ಬರೆದ ಇನ್ನೂ ಕೆಲವು ಮಹತ್ವದ ಬರಹಗಳು ಸಂಗ್ರಹ, ಸಂವಾದ, ಸಿವುಡು ಮುಂತಾದ ಕೃತಿಗಳಲ್ಲಿ ಸೇರಿಕೊಂಡಿವೆ. ಜಾನಪದ ಮುನ್ನಡೆ, ಕರ್ನಾಟಕ ಜಾನಪದ ಚಟುವಟಿಕೆಗಳು : ಒಂದು ಸ್ಥೂಲ ಸಮೀಕ್ಷೆ ಎಂಬ ಎರಡು ಬರಹಗಳು 'ಸಂಗ್ರಹ' ಕೃತಿಯಲ್ಲಿ ಸೇರಿವೆ. ಅಂತೆಯೇ 'ಅಂಟಿಗೆ ಪಂಟಿಗೆ' ಗೀತ ಸಂಪ್ರದಾಯ ಕುರಿತು ಹಾಮಾನಾ ಬರೆದ ಬರಹ 'ಸಂವಾದ'ದಲ್ಲಿ ಸೇರ್ಪಡೆಗೊಂಡಿದೆ. 'ಸಿವುಡು' ಕೃತಿ ಹಾಮಾನಾ ಅವರ ಅರವತ್ತನೆಯ ವರ್ಷದ ನೆನಪಿಗಾಗಿ 'ಅರವತ್ತರ ಆರಲು' ಮಾಲೆಯಲ್ಲಿ ಪ್ರಕಟವಾದ ಕೃತಿ. ಸಿವುಡು ಎಂದರೆ ಕಟ್ಟು. ವಿವಿಧ ವಿಷಯಗಳನ್ನು ಕುರಿತ ಹದಿನೈದು ಬರಹಗಳನ್ನು ಇಲ್ಲಿ ಒಟ್ಟಿಗೇ ಸೇರಿಸಿದ್ದಾರೆ. ಜಾನಪದಕ್ಕೆ ಸಂಬಂಧಿಸಿದ ಎರಡು ಬರಹಗಳಿವೆ. ಜಾನಪದ

ಈವರೆಗೆ ನಡೆದು ಬಂದ ದಾರಿಯ ಒಂದು ವಿಹಂಗಮ ನೋಟ ಒಂದರಲ್ಲಿದ್ದರೆ ಕಥೆ, ಕಾವ್ಯ, ಗಾದೆ, ಒಗಟು, ನಾಟಕ ಪ್ರಕಾರಗಳ ಅವಲೋಕನ ಮತ್ತೊಂದರಲ್ಲಿದೆ. ಎರಡೂ ಬರಹಗಳು ಅಭ್ಯಾಸಯೋಗ್ಯವಾಗಿವೆ.

ಹಾಮಾನಾ ಅವರು ಕನ್ನಡ ಜಾನಪದ ಕ್ಷೇತ್ರಕ್ಕೆ ನೀಡಿದ ಮತ್ತೊಂದು ವಿಶಿಷ್ಟ ಕೊಡುಗೆ 'ಕನ್ನಡ ಜಾನಪದ ಗ್ರಂಥಸೂಚಿ' (೧೯೭೪). ಕನ್ನಡ ಜಾನಪದದ ಗ್ರಂಥಸೂಚಿಯೊಂದು ಬಹುಕಾಲದ ಅಗತ್ಯವಾಗಿತ್ತು. ಈ ಗ್ರಂಥ ಸೂಚಿ ಆ ಅಗತ್ಯವನ್ನು ಈಡೇರಿಸುವ ಒಂದು ಉತ್ತಮ ಪ್ರಯತ್ನ ಎನಿಸಿದೆ. ಇದರಲ್ಲಿ ೧೯೭೩ರವರೆಗೆ ಕನ್ನಡದಲ್ಲಿ ಪ್ರಕಟವಾದ ಜಾನಪದ ಗ್ರಂಥಗಳನ್ನು ಮಾತ್ರ ಪಟ್ಟಿ ಮಾಡಲಾಗಿದೆ. ಕಾವ್ಯ, ಲಾವಣಿ ; ಕಥೆ, ಐತಿಹ್ಯ ; ಕಥೆ, ಭಾಷಾಂತರ, ರೂಪಾಂತರ ; ಗಾದೆ, ಒಗಟು ; ನಾಟಕ, ರಂಗಭೂಮಿ ; ವಿಚಾರ, ವಿಮರ್ಶೆ, ಸಂಶೋಧನೆ; ಸಂಕೀರ್ಣ ಎಂಬ ಏಳು ವರ್ಗಗಳಲ್ಲಿ ವಿಂಗಡಿಸಿ ೫೩೨ ಗ್ರಂಥಗಳ ಬಗೆಗೆ ಮಾಹಿತಿ ಒದಗಿಸಲಾಗಿದೆ. ಕೃತಿಗಳ, ಕೃತಿಕಾರರ ಹಾಗೂ ಪ್ರಕಾಶಕರ ಸೂಚಿಗಳನ್ನೂ ಉಲ್ಲೇಖಿತ ಕೃತಿಗಳ, ಕೃತಿಕಾರರ ಸೂಚಿಯನ್ನೂ ಪ್ರತ್ಯೇಕವಾಗಿ ಒದಗಿಸಿರುವುದು ವಿಶೇಷ. ಈ ಬಗೆಯ ಕೆಲಸಗಳಿಗೆ ಇದೊಂದು ಮಾದರಿ ಎಂಬಂತೆ ವಿನೂತನ ರೀತಿಯಲ್ಲಿ ಈ ಸೂಚಿಯನ್ನು ಸಿದ್ಧಪಡಿಸಿರುವುದು ಗಮನಾರ್ಹ.

ಹಾಮಾನಾ ಅವರ ವೈಯಕ್ತಿಕ ಸ್ತರದಲ್ಲಿ ಎಬ್ಬಿಸಿದ ಈ ವೈಜ್ಞಾನಿಕ ಅಧ್ಯಯನದ ಅಲೆ ಜಾನಪದದ ಎಲ್ಲ ಮುಖಗಳಿಗೆ ಸಂಬಂಧಿಸಿದಂತೆ ಸಂಗ್ರಹ ಅಧ್ಯಯನ ನಡೆಯಲು ಪ್ರೇರಣೆ ಒದಗಿಸಿತು. ಜನಪದ ಸಾಹಿತ್ಯದ ಮುಖ್ಯ ಪ್ರಕಾರಗಳೊಡನೆ ಜನಪದ ಬದುಕನ್ನು ನಿಕಟವಾಗಿ ನೋಡಿ ವಿವಿಧ ಗುಂಪುಗಳ ವೃತ್ತಿ, ಉಡುಗೆ ತೊಡುಗೆ, ಅಡುಗೆ ಪದ್ಧತಿ, ವೈದ್ಯಪದ್ಧತಿ, ನಂಬಿಕೆ ಸಂಪ್ರದಾಯಾಚರಣೆಗಳ ಬಗೆಗೆ ಕಾಲ ಮತ್ತು ಪ್ರಾದೇಶಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ವ್ಯಾಪಕ ಕ್ಷೇತ್ರಕಾರ್ಯ ಕೈಗೊಳ್ಳಲು ಸ್ಫೂರ್ತಿ ನೀಡಿತು. ಆ ಮೂಲಕ ಕರ್ನಾಟಕದ ಬೇರೆ ಬೇರೆ ಸಂಸ್ಕೃತಿಗಳ ವಿವಿಧ ಮುಖಗಳನ್ನು ಗುರುತಿಸುವ ಯತ್ನ ಆರಂಭಗೊಂಡಿತು. ಇದರಿಂದಾಗಿ ಕನ್ನಡ ಜಾನಪದ ವ್ಯಾಪಕತೆ ಮತ್ತು ಸೂಕ್ಷ್ಮತೆಗಳ ಅರಿವು ಮೂಡಿತು.

ಹಾಮಾನಾ ಅವರ ಸಾಂಸ್ಥಿಕ ಸಾಧನೆ ಕೂಡ ಅನನ್ಯವಾದುದು. ಅವರು ಸುಮಾರು ಹದಿನಾರು ವರ್ಷಗಳಷ್ಟು ಸುದೀರ್ಘಕಾಲ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಆಡಳಿತದ ಚುಕ್ಕಾಣಿ ಹಿಡಿದಿದ್ದರು. ಆ ಅವಧಿಯಲ್ಲಿ ಅವರು ಜಾನಪದ ಒಂದು ಅಧ್ಯಯನ ಶಿಸ್ತಾಗಿ ರೂಪುಗೊಳ್ಳಲು ಶ್ರಮಿಸಿದ್ದು ವಿಶೇಷ ಗಮನಾರ್ಹವಾಗಿದೆ. ಕನ್ನಡದ ಸುಯೋಗ ಎನ್ನುವಂತೆ ಹಾಮಾನಾ ಅವರಿಗೆ ಆ ಬಗೆಯ ಚಟುವಟಿಕೆಗಳಿಗೆ ಆಗಿನ ಕುಲಪತಿ ದೇಜಗೌ ಅವರ ಸಹಕಾರ ಸಹಯೋಗ ಲಭ್ಯವಿತ್ತು. ದೇಜಗೌ ಆಡಳಿತಾತ್ಮಕವಾಗಿ ಒಪ್ಪಿಗೆ ಕೊಟ್ಟು, ಜಾನಪದಕ್ಕೆ ಒಂದು ಸಾಂಸ್ಥಿಕ ನೆಲೆಯನ್ನು ಕಲ್ಪಿಸಿಕೊಟ್ಟರು. ಜಾನಪದವನ್ನು ಸ್ನಾತಕೋತ್ತರ ಮಟ್ಟದಲ್ಲಿ ಕಲಿಯಲು ಅಗತ್ಯವಾದ ಸನ್ನಿವೇಶ ನಿರ್ಮಾಣ ಮಾಡಿದ್ದಲ್ಲದೆ ಎಂ.ಫಿಲ್., ಪಿಎಚ್.ಡಿ. ಪದವಿಗಳಿಗೆ ಅವಕಾಶ ಕಲ್ಪಿಸಿ ಜಾನಪದ ಸಂಶೋಧನೆಯನ್ನು ಅಧಿಕೃತಗೊಳಿಸಿದರು. ಈ ನಿರ್ಣಯ ಕನ್ನಡ ಸಂಶೋಧನೆಗೇ ಒಂದು ಮಹತ್ವದ ತಿರುವು ಕೊಟ್ಟಿತು. ಜಾನಪದ ಅಧ್ಯಯನಾಂಗದಂತೆ ಸಂಶೋಧನಾಂಗವೂ ಸುಪುಷ್ಟವಾಗಿ ಬೆಳೆದು ವಿಸ್ತರಣೆಗೊಂಡು ದಾಖಲೆಯ ಪ್ರಮಾಣದ

ಸಂಗ್ರಹಕಾರ್ಯ ಹಾಗೂ ಪ್ರಕಟಣೆ ನಡೆದುದು ಹಾಮಾನಾ ಅವರ ಆಡಳಿತಾವಧಿಯಲ್ಲಿಯೇ. ಸಂಸ್ಥೆಯ ಹತ್ತು ಹಲವು ಯೋಜನೆಗಳ ಜೊತೆಯಲ್ಲಿ ಮಹತ್ವಾಕಾಂಕ್ಷೆಯ 'ಕರ್ನಾಟಕ ಜಾನಪದ ಸರ್ವೇಕ್ಷಣೆ' ಎಂಬ ಬೃಹತ್ ಯೋಜನೆಯನ್ನು ಕೈಗೆತ್ತಿಕೊಂಡು ಅದನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದ ಶ್ರೇಯಸ್ಸು ಅವರದು. ಸಂಶೋಧಕರಿಗೆ ಬೇಕಾದ ಎಲ್ಲ ಅನುಕೂಲಗಳನ್ನು ಕಲ್ಪಿಸಿಕೊಟ್ಟುದಲ್ಲದೆ ಅಗತ್ಯ ಸಲಹೆ ಮಾರ್ಗದರ್ಶನ ನೀಡಿ ತ್ವರಿತಗತಿಯಲ್ಲಿ ಆ ಯೋಜನೆ ಕಾರ್ಯಗತವಾಗುವಂತೆ ಅವರು ಮುತುವರ್ಜಿ ವಹಿಸಿದರು. ಇದು ಅವರ ಕಾರ್ಯನಿಷ್ಠೆ ಮತ್ತು ಗಂಭೀರ ಸಾಂಸ್ಕೃತಿಕ ಕಾಳಜಿಯ ಫಲವೆಂದೇ ಹೇಳಬೇಕು.

ಜಾನಪದದ ಬಗೆಗಿನ ಅವರ ಕಾಳಜಿ ಪೂರ್ಣರೂಪದಲ್ಲಿ ಸಾಕಾರಗೊಂಡಿರುವುದು ಜಾನಪದ ವಸ್ತು ಸಂಗ್ರಹಾಲಯದ ಸಂವರ್ಧನೆ ಮತ್ತು ಅದರ ಪುನರ್ ನಿರ್ಮಾಣದಲ್ಲಿ. ಈ ಕಾರ್ಯದಲ್ಲಿ ಅವರಿಗೆ ನಿರಂತರವಾಗಿ ಸಹಕರಿಸಿದವರು ಜೀಶಂಪ ಮತ್ತು ಪಿಆರ್‌ಟಿ. ವಸ್ತುಸಂಗ್ರಹಾಲಯದ ಕ್ಷೇತ್ರಕಾರ್ಯಕರ್ತರಿಗೆ ವ್ಯಾಪಕ ರೀತಿಯ ಕ್ಷೇತ್ರಕಾರ್ಯ ನಡೆಸಲು ಅಗತ್ಯವಾದ ವಾಹನ ಸೌಲಭ್ಯ-ವಸತಿ ವ್ಯವಸ್ಥೆ ಕಲ್ಪಿಸಿಕೊಟ್ಟು ವಸ್ತು ಸಂಗ್ರಹಾಲಯದ ಸಂಪತ್ತು ವರ್ಧಿಸುವಂತೆ ಹಾಮಾನಾ ನೋಡಿಕೊಂಡರು. ಕ್ಷೇತ್ರಕಾರ್ಯಕರ್ತರು ಪರಿಶ್ರಮಪಟ್ಟು ಉಚಿತ ರೀತಿಯಲ್ಲಿ ಸಂಗ್ರಹಿಸಿ ತಂದ ಸಹಸ್ರಾರು ಜನಪದ ವಸ್ತುಗಳ ವೈಜ್ಞಾನಿಕ ವಿಂಗಡಣೆ ಮತ್ತು ಅವುಗಳನ್ನು ಪ್ರದರ್ಶನಕ್ಕೆ ಸಜ್ಜುಗೊಳಿಸುವ ವಿಷಯದಲ್ಲೂ ಹಾಮಾನಾ ತೀವ್ರ ಆಸಕ್ತಿಯನ್ನು ಹೊಂದಿದ್ದರು. ವಸ್ತು ಸಂಗ್ರಹಾಲಯದ ವಸ್ತುಗಳ ನಮೂದು ಸೂಚಿಯನ್ನು ಸಿದ್ಧಪಡಿಸುವ ಯೋಜನೆಯೊಂದನ್ನು ಸ್ವಯಂ ರೂಪಿಸಿ ಅದನ್ನು ಕಾರ್ಯಗತಗೊಳಿಸುವ ಆಕಾಂಕ್ಷೆಯನ್ನಿಟ್ಟುಕೊಂಡಿದ್ದರು. ವರ್ಗೀಕೃತ ವಸ್ತುಗಳ ನಮೂನೆ ಸೂಚಿಯನ್ನು ಮುದ್ರಣಗೊಳಿಸಿ ಪ್ರಕಾಶಕ್ಕೆ ತರುವ ಅವರ ಕನಸು ಕಾರಣಾಂತರದಿಂದ ಸಾಕಾರಗೊಳ್ಳಲೇ ಇಲ್ಲ. ಇಷ್ಟಾದರೂ ಹಾಮಾನಾ ಅವರ ಜಾನಪದ ಪ್ರೀತಿ, ಜೀಶಂಪ, ಪಿಆರ್‌ಟಿ ಮತ್ತು ಯು.ಎಸ್. ರಾಮಣ್ಣ ಅವರ ಪ್ರಾಮಾಣಿಕ ದುಡಿಮೆ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಹಾಲಯ ಇಂದು ಬೃಹತ್ ಪ್ರಮಾಣದಲ್ಲಿ ಬೆಳೆದು ನಿಲ್ಲಲು ಸಾಧ್ಯವಾಗಿದೆ. ಈ ಉಪಖಂಡದಲ್ಲೇ ಅಪೂರ್ವವೆನಿಸಿದ ವಸ್ತು ಸಂಗ್ರಹಾಲಯ ಎಂಬ ಪ್ರಶಂಸೆಗೂ ಪಾತ್ರವಾಗಿದೆ. ಆದರೆ ಇಂದಿನ ಬದಲಾದ ಸನ್ನಿವೇಶದಲ್ಲಿ ಈ ವಸ್ತುಸಂಗ್ರಹಾಲಯದ ಸ್ವತಂತ್ರ ಅಸ್ತಿತ್ವಕ್ಕೆ ಸಂಚಕಾರ ಬಂದಂತೆ ಕಾಣುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಈಗಿನ ಆಡಳಿತ ಅದನ್ನು ವಸ್ತು ಸಂಗ್ರಹಾಲಯಗಳ ಸಮುಚ್ಚಯದಲ್ಲಿ ಅಳವಡಿಸಲು ಚಿಂತನೆ ನಡೆಸಿದೆ ಎಂಬ ಆತಂಕದ ವರದಿಗಳಿವೆ. ಇದರ ಉದ್ದೇಶ ಏನೇ ಇರಲಿ, ಜಾನಪದ ವಸ್ತು ಸಂಗ್ರಹಾಲಯದ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳದಿದ್ದರೆ ಅದರ ಹಿರಿಮೆಗೆ ಕುಂದುಂಟಾಗುವುದು ನಿಶ್ಚಿತ. ಆದುದರಿಂದ ಅದರ ಉಸ್ತುವಾರಿಯನ್ನು ಕನ್ನಡ ಅಧ್ಯಯನ ಸಂಸ್ಥೆ ಆಡಳಿತಕ್ಕೇ ವಹಿಸಿಕೊಟ್ಟು ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ವಿಶ್ವವಿದ್ಯಾನಿಲಯವು ಎತ್ತಿ ಹಿಡಿಯುವುದು ಎಂದು ಆಶಿಸಲಾಗಿದೆ.

ಮೇಲೆ ಪ್ರಸ್ತಾಪಿಸಿದ ಸಂಗತಿಗಳು ಹಾಮಾನಾ ಅವರ ಮುಂದಾಲೋಚನೆ ಹಾಗೂ ಕರ್ತೃತ್ವ ಶಕ್ತಿಯಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನ ಬೆಳವಣಿಗೆ ಹೊಂದಲು ಸಾಧ್ಯವಾಯಿತು ಎಂಬುದನ್ನು ದೃಢೀಕರಿಸುತ್ತವೆ. ಭಾರತಕ್ಕೇ ಮಾದರಿಯಾದ

ರೀತಿಯಲ್ಲಿ ಜಾನಪದ ಅಧ್ಯಯನ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದದ್ದರ ಫಲವಾಗಿ ಕರ್ನಾಟಕ, ಬೆಂಗಳೂರು ವಿಶ್ವವಿದ್ಯಾನಿಲಯಗಳು ಜಾನಪದ ಸಂಶೋಧನೆ ಮತ್ತು ಅಧ್ಯಯನಗಳಿಗೆ ತೀವ್ರ ರೀತಿಯಲ್ಲಿ ತೊಡಗಿಸಿಕೊಂಡವು. ಇದರಿಂದಾಗಿ ಕನ್ನಡ ಸಂಸ್ಕೃತಿಯ ಅಧ್ಯಯನ ಸಾಕಷ್ಟು ಸಮಗ್ರವಾಗಿ ನಡೆಯುವಂತಾಯಿತು; ಸಾಂಸ್ಕೃತಿಕ ಇತಿಹಾಸವನ್ನು ಪುನರ್ರಚಿಸುವ ಯತ್ನಗಳು ಪರಿಣಾಮಕಾರಕವಾಗಿ ನಡೆದವು. ಇಡೀ ದೇಶದಲ್ಲೇ ಜಾನಪದ ಕ್ಷೇತ್ರದಲ್ಲಿ ಈ ಪ್ರಮಾಣದ ಶ್ರದ್ಧೆ, ಅಭ್ಯಾಸ, ಕಾಳಜಿ ವ್ಯಕ್ತಗೊಂಡಿರುವುದು ಕರ್ನಾಟಕದಲ್ಲೇ. ಇದಕ್ಕೆ ಕಾರಣರಾದವರು ಹಾಮಾನಾ ಎಂಬುದನ್ನು ಮರೆಯುವಂತಿಲ್ಲ.

ಹೀಗೆಂದ ಮಾತ್ರಕ್ಕೆ ಹಾಮಾನಾ ಅವರ ಜಾನಪದ ಚಿಂತನಗಳಿಗೆ ಪರಿಮಿತಿಗಳಿರಲಿಲ್ಲ ಎಂದಲ್ಲ. ಆ ಪೈಕಿ,

೧ ಯೂರೋಪಿಯನ್ ಪರಿಭಾಷೆಗಳನ್ನು ಯಥಾವತ್ತಾಗಿ ಸ್ವೀಕರಿಸಿದ್ದು. ಯೂರೋಪಿಯನ್ ಪರಿಕಲ್ಪನೆಗಳಿಂದ ಆಕರ್ಷಿತರಾದ ಹಾಮಾನಾ ಆ ಪರಿಭಾಷೆಗಳನ್ನು ಯಥಾವತ್ತಾಗಿ ಸ್ವೀಕರಿಸಿ ಕನ್ನಡ ಸಂಸ್ಕೃತಿಯ ವಿಶ್ಲೇಷಣೆಗೆ ಬಳಸಲು ತವಕ ತೋರಿದ್ದು ದೇಸೀ ಚಿಂತಕರ ದೃಷ್ಟಿಯಿಂದ ಆಕ್ಷೇಪಾರ್ಹವಾದುದು. ಅಂತಾರಾಷ್ಟ್ರೀಯ ಮನ್ನಣೆ ಗಳಿಸಿರುವ ಎಲ್ಲ ಶಿಸ್ತುಗಳಲ್ಲೂ ಪರಿಭಾಷೆಗಳ ಸ್ವೀಕರಣ ಕಾರ್ಯ ಸಾಮಾನ್ಯ ಪ್ರವೃತ್ತಿ ಯಾದರೂ ಮೌಖಿಕ ಪರಂಪರೆಯನ್ನು ನೆಲದ ಸಂಸ್ಕೃತಿಯ ಹಿನ್ನೆಲೆಯಲ್ಲೇ ಅರ್ಥೈಸುವುದು ಯುಕ್ತ ಎಂಬ ಅಭಿಪ್ರಾಯದಲ್ಲೂ ತಪ್ಪೆಣಿಸಲಾಗದು. ಯಾವುದೇ ಪ್ರದೇಶದ ಜನಪದ ಸಂಸ್ಕೃತಿಯನ್ನು ಅಂದ್ಗಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ಗ್ರಹಿಸುವ ಅದಕ್ಕೆ ಅಗತ್ಯವಾದ ಪರಿಭಾಷೆಗಳನ್ನು ರೂಪಿಸುವ ಯತ್ನ ನಡೆಯಬೇಕೆನ್ನುವುದು ಸರಿಯಾದ ನಿಲುವೇ ಹೌದು.

೨ ಗಟ್ಟಿಯಾದ ಸಾಂಸ್ಕೃತಿಕ ವಿಶ್ಲೇಷಣೆಗೆ ಎಡೆಮಾಡಿಕೊಡದಿದ್ದುದು.

ಪಾಶ್ಚಾತ್ಯ ಜಾನಪದ ಚಿಂತನೆಯನ್ನು ಯಥಾವತ್ತಾಗಿ ಸ್ವೀಕರಿಸಿದ್ದರಿಂದ ಕನ್ನಡದಲ್ಲಿ ರಸನಿಷ್ಠ ಹಾಗೂ ನೀತಿನಿಷ್ಠ ವ್ಯಾಖ್ಯಾನ ವಿಶ್ಲೇಷಣೆಗಳ ಹಾವಳಿ ಕಡಿಮೆಯಾದ್ದದೇನೊ ನಿಜ. ಆದರೆ ಈ ಚಿಂತನೆ ಬಹುಮುಖೀ ಸಂಸ್ಕೃತಿಯ ವಿವಿಧ ಆಯಾಮಗಳ ನೆಲೆಯಿಂದ ಇಲ್ಲಿಯ ಮೌಖಿಕ ಸಂಸ್ಕೃತಿಯನ್ನು ಪರಿಭಾವಿಸುವ ಯತ್ನಕ್ಕೆ ಹೆಚ್ಚು ಒತ್ತುಕೊಡಲಿಲ್ಲ ಎಂಬುದೂ ಅಷ್ಟೇ ನಿಜ. ವಾಸ್ತವವಾಗಿ ೧೯೭೦ರ ಅನಂತರದ ಬೆಳವಣಿಗೆ ಕನ್ನಡ ಜಾನಪದ ಸಂಗ್ರಹ ಮತ್ತು ವಿವರಣೆಗೆ ಹೆಚ್ಚಿನ ಮಹತ್ವ ಕಲ್ಪಿಸಿತು. ಹೀಗಾಗಿ ಆ ಕಾಲವೇ ಗಟ್ಟಿಯಾದ ಸಾಂಸ್ಕೃತಿಕ ವಿಶ್ಲೇಷಣೆಗೆ ಅವಕಾಶ ನೀಡಿಲ್ಲ ಎಂದು ಹೇಳಬಹುದು.

೩ ಏಕಮುಖಿ ಸಂಸ್ಕೃತಿಯ ಕಡೆಗೆ ಒಲವು ತೋರಿದುದು.

ಪಶ್ಚಿಮದ ಚಿಂತನ ಮಾದರಿ ಮೊದ ಮೊದಲು ಪಂಥೀಯ ಹಿನ್ನೆಲೆಯಲ್ಲಿ ಆರಂಭಗೊಂಡಿತಾದರೂ ಕ್ರಮೇಣ ಅದು ವ್ಯಕ್ತಿಗತವಾಗತೊಡಗಿತು. ಹೀಗಾಗಿ ಬಹುಮುಖೀ ಸಂಸ್ಕೃತಿಗೆ ಬದಲಾಗಿ ಏಕಮುಖಿ ಸಂಸ್ಕೃತಿಯ ಕಡೆಗೆ ವಿದ್ವಾಂಸರ ಒಲವು ಹೊರಳಿತು. ಪರಿಣಾಮವಾಗಿ ಕನ್ನಡ ಪರಂಪರೆಯ ಅಧ್ಯಯನದ ಹಲವಾರು ಸಾಧ್ಯತೆಗಳು ತೆರೆದು ಕೊಳ್ಳಲಿಲ್ಲ.

ಏನೇ ಇರಲಿ, ಕನ್ನಡ ಜಾನಪದ ಅಧ್ಯಯನಕ್ಕೆ ಹೊಸದೃಷ್ಟಿಯನ್ನು ತಂದುಕೊಟ್ಟು ಅಧ್ಯಯನವು ಹಳೆಯ ಸಾಂಪ್ರದಾಯಿಕ ಧೋರಣೆಯನ್ನು ಕೈಬಿಟ್ಟು ಹೊಸಜಾಡಿಗೆ ಹೊರಳಲು ಕಾರಣರಾದ ಹಾಮಾನಾ ಅವರ ಪ್ರಯತ್ನ ಐತಿಹಾಸಿಕವಾದುದು ಎಂದು ಹೇಳಬಹುದು.

ಗ್ರಂಥ ಸೂಚಿ

ಅರವಿಂದ ಮಾಲಗತ್ತಿ ೧೯೯೯ **Folk-Folklore :** ದೇಶೀವಾದದ ಹಿನ್ನೆಲೆಯಲ್ಲಿ ಮರುಚಿಂತನೆ ಹಾಗೂ ಜಾಗತೀಕರಣ ಮತ್ತು ಉದಾರೀಕರಣ ಇದರಲ್ಲಿ : ಜಾನಪದ ತತ್ವಗಳು ಸಂ. ಆರ್ಬೀಯಸ್ , ಪ್ರಸಾರಾಂಗ, ಮೈಸೂರು

ಚಿದಾನಂದಮೂರ್ತಿ ಎಂ. ೧೯೮೪, ಪಗರಣ ಮತ್ತು ಇತರ ಸಂಪ್ರಬಂಧಗಳು, ಪುಸ್ತಕ ಚಿಲುಮೆ, ಮೈಸೂರು

ಜಯಚಂದ್ರ ಎಂ.ಎ. ೧೯೭೬, ಫೋಕ್‌ಲೋರ್-ಫೋಕ್‌ಲೋರ್, ಬೆಂಗಳೂರು.

ನಾಯಕ ಹಾ.ಮಾ. ೧೯೭೧, ಜಾನಪದ ಸ್ವರೂಪ, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.

ಪರಮಶಿವಯ್ಯ ಜೀ.ಶಂ. ೧೯೭೯, ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಪ್ರಸಾರಾಂಗ, ಮೈ. ವಿ. ವಿ. ಮೈಸೂರು

ರಾಮೇಗೌಡ ೧೯೮೧, ಜಾನಪದ ಸಂಶೋಧನ, ಚಿತ್ರಕೂಟ, ಮೈಸೂರು.

ಚಿಕ್ಕಮಗಳೂರು ಜಿಲ್ಲೆ : ಜಾನಪದ ಸಂಪತ್ತು

ಡಾ. ಎಂ. ಪಿ. ಮಂಜಪ್ಪಶೆಟ್ಟಿ ಮಸಗಲಿ

ಚಿಕ್ಕಮಗಳೂರು ಜಿಲ್ಲೆ. ಕರ್ನಾಟಕ ರಾಜ್ಯದಲ್ಲಿಯೇ ವಿಶಿಷ್ಟವಾದದ್ದು. ಭೌಗೋಳಿಕವಾಗಿ ಮಲೆನಾಡು, ಅರೆಮಲೆನಾಡು ಹಾಗೂ ಬಯಲು ನಾಡುಗಳನ್ನೊಳಗೊಂಡಿರುವ ಈ ಜಿಲ್ಲೆ ಹಲವು ಬಗೆಯ ವೈಪರೀತ್ಯಗಳ ಹಾಗೂ ಸಾದೃಶ್ಯಗಳ ಆಗರವಾಗಿದೆ. ಈ ವೈಪರೀತ್ಯಗಳಿಗನುಗುಣವಾಗಿ ಇಲ್ಲಿಯ ಜನಜೀವನವೂ ರೂಪುಗೊಂಡಿದೆ. ಅಲ್ಲದೆ ಇದೊಂದು ಹಲವು ಧರ್ಮಗಳ, ಜಾತಿ-ಪಂಗಡಗಳ ಸಂಗಮಕ್ಷೇತ್ರವಾಗಿರುವುದರಿಂದ ಇಲ್ಲಿ ಸಹಜವಾಗಿಯೇ ಸಾಂಸ್ಕೃತಿಕ ಭಿನ್ನತೆಗಳನ್ನು ಕಾಣುತ್ತೇವೆ. ಇಲ್ಲಿ ಮುಸ್ಲಿಮರಿದ್ದಾರೆ, ಹಿಂದೂಗಳಿದ್ದಾರೆ, ಕ್ರಿಶ್ಚಿಯನ್ನರಿದ್ದಾರೆ, ಜೈನರಿದ್ದಾರೆ, ಬೌದ್ಧರಿದ್ದಾರೆ ಹಾಗೂ ಇತರ ಧರ್ಮೀಯರೂ ಇದ್ದಾರೆ. ಹಿಂದೂಗಳಲ್ಲಿಯೇ ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು, ನೇಕಾರರು, ಹರಿಜನರು, ಗಿರಿಜನರು, ಕುರುಹಿನವರು, ದೇವಾಂಗದವರು, ಕುಂಬಾರರು, ಕಮ್ಮಾರರು, ಮಡಿವಾಳರು, ವೈಶ್ಯರು, ಲಂಬಾಣಿಗಳು, ಮಾರ್ವಾಡಿಗಳು - ಹೀಗೆ ಹಲವಾರು ಪಂಗಡಗಳಿಗೆ ಸೇರಿದವರೇ ಅಲ್ಲದೆ ಅತ್ಯಂತ ಹಿಂದುಳಿದ ಈ ಜಾತಿಗೆ ಸೇರಿದ ಈರುಳಿಗ, ಜೇನುಕುರುಬ, ಜಾಡ, ಜಾಟ, ಸುಡುಗಾಡುಸಿದ್ಧ, ದೊಂಬಿದಾಸ, ಬಗ್ಗರು, ಹಾವಾಡಿಗ, ಮೇದಾರ, ಉಪ್ಪಾರ, ಜಟ್ಟಿ, ಹೆಳವ, ತಿಗಳ-ಹೀಗೆ ಹತ್ತಾರು ಬಗೆಯವರಿದ್ದಾರೆ. ಹೀಗಾಗಿ ಈ ಜಿಲ್ಲೆಯಾದ್ಯಂತ ಜಾನಪದ ಸಂಪತ್ತು ತುಂಬಿತುಳುಕುತ್ತಿದೆ.

'ಜನಪದ' ಎಂಬುದಕ್ಕೆ 'ಜನಸಮೂಹ' ಎಂಬ ಅರ್ಥವಿದೆ. ಹಾಗೆಯೇ 'ಜಾನಪದ' ಎಂಬುದು ಜನಪದಕ್ಕೆ ಅಥವಾ ಜನಸಮೂಹಕ್ಕೆ ಸಂಬಂಧಿಸಿದುದು ಎಂದಾಗುತ್ತದೆ. ಎಂದರೆ, ಜನರಾಡುವ ಭಾಷೆ, ಅವರ ಸಾಹಿತ್ಯ, ಅವರು ಪ್ರದರ್ಶಿಸುವ ಕಲೆಗಳು, ಧರಿಸುವ ಉಡುಗೆ-ತೊಡುಗೆಗಳು, ತಯಾರಿಸುವ ಅಡುಗೆಗಳು, ಮಾಡುವ ಊಟೋಪಚಾರಗಳು, ಬಳಸುವ ವಸ್ತುಗಳು, ಕಟ್ಟುವ ಮನೆಯ ಮಾದರಿ ಜೀವನ ವಿಧಾನ, ನಿತ್ಯ ಆಚರಿಸುವ ಆಚರಣೆಗಳು, ಅವರಾಡುವ ಆಟೋಟಗಳು, ಆಚರಿಸುವ ಹಬ್ಬಗಳು, ಜಾತ್ರೆಗಳು, ಪೂಜಿಸುವ ದೇವಾನು ದೇವತೆಗಳು - ಹೀಗೆ ಇವೆಲ್ಲವನ್ನೂ ಸ್ಥೂಲವಾಗಿ 'ಜಾನಪದ' ಎನ್ನುತ್ತಾರೆ.

ಈ ಜಾನಪದವನ್ನು ಮುಖ್ಯವಾಗಿ ಜನಪದ ಸಾಹಿತ್ಯ, ಜನಪದ ಕಲೆ, ಜನಪದ ಸಂಪ್ರದಾಯ ಮತ್ತು ಜನಪದ ವಸ್ತು ವಿಶೇಷಗಳು ಎಂದು ನಾಲ್ಕು ಗುಂಪು ಮಾಡುತ್ತಾರೆ.

ಜನಪದ ಸಾಹಿತ್ಯ ಗುಂಪಿನಲ್ಲಿ ಜನಪದ ಕಾವ್ಯ, ಮಹಾಕಾವ್ಯ, ಗೀತೆ, ಲಾವಣಿ, ಮುಕ್ತಕ, ನಾಟಕ, ಗಾದೆ, ಒಗಟು, ಕಥೆ, ಐತಿಹ್ಯ ಮುಂತಾದ ಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲ

ಪ್ರಕಾರಗಳೂ ಸೇರುತ್ತವೆ. ಜನಪದಕಲೆ ಗುಂಪಿನಲ್ಲಿ ಜನಪದ ನಾಟಕ, ಯಕ್ಷಗಾನ, ಬಯಲಾಟ, ದೊಂಬರಾಟ, ಗೊಂಬೆಯಾಟ, ನೃತ್ಯ, ಕರಕುಶಲಕಲೆ, ಚಿತ್ರಕಲೆ, ಶಿಲ್ಪಕಲೆ, ಮುಂತಾದ ಎಲ್ಲ ಕಲಾಪ್ರಕಾರಗಳೂ ಸೇರುತ್ತವೆ. ಜನಪದ ಸಂಪ್ರದಾಯಗಳ ಗುಂಪಿನಲ್ಲಿ ಜನಪದರು ಅಂದಿನಿಂದ ಇಂದಿನವರೆಗೆ ಅನುಸರಿಸಿಕೊಂಡು ಬಂದಿರುವ ಸಂಪ್ರದಾಯಗಳು, ನಡಾವಳಿಗಳು, ನಂಬಿಕೆಗಳು, ರೀತಿರಿವಾಜುಗಳು, ವಿವಿಧ ಪದ್ಧತಿಗಳು, ಸೇರುತ್ತವೆ. ಎಂದರೆ ಜನರು ಹುಟ್ಟಿನಿಂದ ಹಾಗೂ ಸಾವಿನತನಕ ಅನುಸರಿಸುವ ಜನನ, ಮದುವೆ, ಒಸಗೆ ಹಾಗೂ ಮರಣ ಸಂಪ್ರದಾಯಗಳೇ ಅಲ್ಲದೆ ವ್ಯವಸಾಯ, ಅಡುಗೆ, ವೈದ್ಯ, ಊಟೋಪಚಾರ ಪದ್ಧತಿಗಳು, ಮಾಟ – ಮಂತ್ರಗಳು – ಹೀಗೆ ಇವೆಲ್ಲವೂ ಸೇರುತ್ತವೆ. ಇನ್ನು ಜನಪದ ವಸ್ತು ವಿಶೇಷಗಳ ಗುಂಪಿಗೆ – ಜನಪದರ ಮನೆಯ ಮಾದರಿಗಳು, ಅವರು ಬಳಸುತ್ತಾ ಬಂದಿರುವ ಸಾಧನ ಸಾಮಗ್ರಿಗಳು, ಆಯುಧ ವಿಶೇಷಗಳು, ವ್ಯವಸಾಯ ಸಲಕರಣೆಗಳು, ಶಿಕಾರಿ ಸಾಧನಗಳು, ಅಡುಗೆ ಸಲಕರಣೆಗಳು ; ಅವರು ಧರಿಸುವ ಉಡುಗೆ-ತೊಡುಗೆಗಳು ಮುಂತಾದವು ಸೇರುತ್ತವೆ. ಈ ಎಲ್ಲವೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೃದ್ಧ ವಾಗಿರುವುದೊಂದು ವಿಶೇಷ.

೧ ಜನಪದ ಸಾಹಿತ್ಯ

ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಜನಪದ ಸಾಹಿತ್ಯ ಹಾಸು ಹೊಕ್ಕಾಗಿದೆ. ಜಿಲ್ಲೆಯ ಯಾವುದೇ ಒಂದು ಮೂಲೆಗೆ ಹೋದರೂ ನಾವಲ್ಲಿ ಜನಪದ ಹಾಡುಗಾರರನ್ನು, ಕಥೆಗಾರರನ್ನು ಕಾಣುತ್ತೇವೆ. ಕಥೆ, ಲಾವಣಿ, ಒಗಟು, ಐತಿಹ್ಯ, ಗಾದೆ, ಬಿರುದಾವಳಿಗಳನ್ನು ದಿನಗಟ್ಟಲೆ, ವಾರಗಟ್ಟಲೆ, ಅಷ್ಟೇ ಏಕೆ ತಿಂಗಳುಗಟ್ಟಲೆ, ಹೇಳುವವರಿದ್ದಾರೆ. ಸುಗ್ಗಿಯ ಕಾಲದಲ್ಲಿ ಒಕ್ಕಲಾಟ ಮಾಡುವಾಗ, ಮಲೆನಾಡಿನಲ್ಲಿ ಗದ್ದೆ ಸಸಿ ಕೀಳುವಾಗ, ಗದ್ದೆ ನಾಟಿ ಮಾಡುವಾಗ, ಕಳೆ ತೆಗೆಯುವಾಗ, ಬೇಸಾಯ ಮಾಡುವಾಗ, ಹಂತಿ ಹೊಡೆಯುವಾಗ ಬತ್ತ ಕುಟ್ಟುವಾಗ, ಅಕ್ಕಿ-ರಾಗಿ ಬೀಸುವಾಗ, ತೋಟಗಳಲ್ಲಿ ಕಾಫೀ ಕೊಯ್ಯುವಾಗ - ಹೀಗೆ ಹಲವು ಸಂದರ್ಭಗಳಲ್ಲಿ ಹಾಡುಗಳು ಅಲೆ ಅಲೆಯಾಗಿ ತೇಲಿ ಬರುತ್ತಿರುತ್ತವೆ. ಅವರು ಮಾಡುವ ಅಣಕಗಳು, ಒಬ್ಬರಿಗೊಬ್ಬರು ಒಗಟುಗಳನ್ನು ಹೇಳಿಕೊಂಡು, ಅವನ್ನು ಒಡೆಯುತ್ತ ತಮಾಷೆ ಮಾಡುವ ದನಿಗಳು ಅಲ್ಲಲ್ಲಿ ಅನುರಣಿಸುತ್ತಿರುತ್ತವೆ. ಮಗುವನ್ನು ತೊಟ್ಟಿಲಿಗೆ ಹಾಕುವಾಗ, ಹೆಣ್ಣು ಮಕ್ಕಳಿಗೆ ಒಸಗೆ ಶಾಸ್ತ್ರ ಮಾಡುವಾಗ, ಹಸೆ ಹಾಕಿದಾಗ, ಬಳೆ ತೊಡಿಸುವಾಗ, ಮದುವೆ ನಡೆಯುವಾಗ, ಯಾರಾದರೂ ಸತ್ತಾಗ- ಮುಂತಾದ ಸಂದರ್ಭಗಳಲ್ಲಿ ಜಿಲ್ಲೆಯ ಮಲೆನಾಡು ಭಾಗಗಳಲ್ಲಿ ಹಾಡುವ ಶಾಸ್ತ್ರದ ಸೋಬಾನೆಯ ಹಾಗೂ ಸಂಪ್ರದಾಯದ ಹಾಡುಗಳು ವಿಶಿಷ್ಟವಾದಂಥವು. ಅಲ್ಲಿ ವರ್ಷಕ್ಕೊಮ್ಮೆ ನಡೆಯುವ ಸುಗ್ಗಿ ಹಬ್ಬಗಳು ಮತ್ತು ಜಾತ್ರೆಗಳ ಸಂದರ್ಭಗಳಲ್ಲಿ ಹಾಡುವ ಲಾವಣಿಗಳು, ಬಿರುದಾವಳಿಗಳು, ಕೋಲಾಟದ ಪದಗಳು, ಖಡ್ಗಗಳು ಅಪರೂಪದ ಹಾಡುಗಳಾಗಿವೆ. ಅಲ್ಲದೆ ಜಿಲ್ಲೆಯಾದ್ಯಂತ ಕುಟ್ಟುವ, ಬೀಸುವ ಪದ, ಅಂಟಿಕೆ – ಪಂಟಿಕೆ ಹಾಡು, ತಿಂಗಳುಮಾಮನ ಪದ, ಸುಗ್ಗಿ ಹಾಡು, ತತ್ತ್ವಪದ, ಕಥೆಗಳು, ಲಾವಣಿಗಳು ಅಪೂರ್ವ ಭಾವಸಂಪದದಿಂದಲೂ ಸಾಹಿತ್ಯದ ಮೌಲ್ಯದಿಂದಲೂ ಕೂಡಿರುತ್ತವೆ.

ಇಲ್ಲಿರುವ ಕಲ್ಲುಕಲ್ಲಿಗೊಂದು ಕಥೆಯುಂಟು, ನೆಲಜಲಕ್ಕೆಲ್ಲ ಐತಿಹ್ಯವುಂಟು, ಹಳ್ಳ-ಕೊಳ್ಳ, ಕಾಡು-ಮೇಡು, ಗುಡಿಗುಂಡಾರ, ಮಡು, ಹೊಳೆ, ಬಾವಿ, ಗುಡ್ಡ-ಬೆಟ್ಟ, ಊರು-ಕೇರಿ, ಹಾದಿಬೀದಿಗೊಂದು ಪರಸಂಗವುಂಟು, ನಾವು ಆ ಒಂದೊಂದನ್ನು ಎಡವಿ ತಡವಿ ನೋಡಿದಾಗಲೂ ಅವು ತಮ್ಮ ಪೂರ್ವಪುರಾಣವನ್ನು ಎದೆಬಿಚ್ಚಿ ಹೇಳುತ್ತವೆ. ಹೇಳಿಕೊಂಡು ನಗುತ್ತವೆ, ಅಳುತ್ತವೆ, ಬಯಸಿದವರಿಗೆ ಮಾರ್ಗದರ್ಶನ ನೀಡುತ್ತವೆ, ಈ ಸಾಹಿತ್ಯನಿಧಿ ಇಂತಿಷ್ಟೇ ಎಂದು ಹೇಳುವಂತಿಲ್ಲ. ಇಡೀ ಜಿಲ್ಲೆಯಾದ್ಯಂತ ತುಂಬಿ ತುಳುಕುತ್ತಿದೆ, ಮೊಗೆದಷ್ಟು ಉಕ್ಕಿ ಉಕ್ಕಿ ಹರಿಯುತ್ತದೆ.

೨ ಜನಪದ ಕಲೆ

ಜನಪದ ಕಲೆಗಳಂತೂ ನಾಡಿನ ಯಾವ ಪ್ರಾಂತಕ್ಕೂ ಕಡಿಮೆ ಇಲ್ಲದಂತೆ ಇಲ್ಲಿ ಪ್ರಚಲಿತವಾಗಿವೆ. ಈ ಪ್ರಾಂತ್ಯವನ್ನು ಜನಪದಕಲೆಗಳ ಆಗರವೆಂದರೂ ಸರಿಹೋಗುತ್ತದೆ. ಅವು ಇಲ್ಲಿಯ ಜನಜೀವನದ ಅವಿಭಾಜ್ಯ ಅಂಗಗಳಾಗಿ ಬೆಳೆದುಕೊಂಡು ಬಂದಿವೆ. ಜಿಲ್ಲೆಯ ಕೋಲಾಟ ಕಲೆ ನಾಡಿನಲ್ಲಿಯೇ ವಿಶಿಷ್ಟವಾದುದು. ಅದನ್ನು ಜಿಲ್ಲೆಯ ಎಲ್ಲ ಭಾಗಗಳಲ್ಲೂ ಕಾಣಬಹುದು. ಇಡೀ ಜಾನಪದ ಜಗತ್ತಿಗೆ ಜಿಲ್ಲೆಯ ವಿಶಿಷ್ಟ ಕೊಡುಗೆಯಾದ ವೀರಗಾಸೆ ಕುಣಿತ ಪ್ರಪಂಚದಾದ್ಯಂತ ಪ್ರಶಂಸೆಗಳಿಸಿದೆ. ಮಲೆನಾಡಿನ ಕೊಡುಗೆಗಳಾದ ಸುಗ್ಗಿ ಕುಣಿತ ಮತ್ತು ಬೇಟೆ ಕುಣಿತದ್ದು ಇನ್ನೊಂದು ವಿಶೇಷ. ಅಲ್ಲದೆ ಸಾಲುಕುಣಿತ, ಸುತ್ತು ಕುಣಿತ, ಕೀಲುಕುದುರೆ ಕುಣಿತ, ನಂದೀ ಧ್ವಜ ಕುಣಿತ, ಡೊಳ್ಳು ಕುಣಿತ, ಲಂಬಾಣಿ ಕುಣಿತ, ಭಾಗವಂತಿಕೆ ಮೇಳ, ಕರಪಾಲಮೇಳ, ಚೌಡಿಕೆ ಮೇಳ, ರಾಜಕುಣಿತ, ಹರೆಕುಣಿತ, ಚಕ್ರಕುಣಿತ, ಖಡ್ಗಕುಣಿತ, ಮಾರಿ ಕುಣಿತ, ಭೂತದ ಕುಣಿತ, ಅಂಟಿಕ – ಪಂಟಿಕೆ, ಆಸಾದಿ ಮೇಳ, ಕರಡೆಮೇಳ, ಕತ್ತಿವರಸೆ, ಯಕ್ಷಗಾನ, ಬಯಲಾಟ, ದೊಂಬರಾಟ, ಬಸವನಕುಣಿತ, ಮಂಗನಕುಣಿತ - ಮುಂತಾದ ಕುಣಿತಕ್ಕೆ ಸಂಬಂಧಿಸಿದ ಕಲೆಗಳು ಜಿಲ್ಲೆಯ ವಿವಿಧ ಭಾಗಗಳಲ್ಲಿ ಪ್ರಚಲಿತವಾಗಿವೆ.

ಜನಪದ ಆಟಗಳಾದ ಮರಕೊತ್ತಿಆಟ, ಚಿನ್ನಿಕೋಲಾಟ, ಬುಗುರಿ, ಗಜ್ಜುಗ, ಗೋಲಿ ಆಟಗಳು, ಲಗ್ಗೆಚೆಂಡಾಟ, ಚೆಂಡಾಟ, ಕುಂಟುಪಿಲ್ಲೆಆಟ, ಹುಲ್ಲು ಚೆಂಡಾಟ, ಹಿಡಿದಾಡು ವಾಟ, ಕದ್ದುಕೂರುವಾಟ, ಟೋಪಿಆಟ, ಹಾಲಫಲಂಗಿ, ಚಂದ್ರಫಲಂಗಿ, ಕುಂಟಾಟ, ಚಿಣಿಮಿಣಿಯಾಟ, ಹಗ್ಗದಾಟ, ಗಿರಗಟ್ಟೆಯಾಟ, ಕಳ್ಳನ ಪಟ್ಟೆ ಮುಂತಾದವು ಜಿಲ್ಲೆಯ ಎಲ್ಲೆಡೆಗಳಲ್ಲಿಯೂ ಇವೆ. ಅಲ್ಲದೆ ಚಿತ್ರಕಲೆ, ಕರಕುಶಲ ಕಲೆಗಳಾದ ಬೆತ್ತ-ಬಿದಿರಿನ ಹೆಣಿಗೆ, ರಂಗೋಲಿ ಬಿಡಿಸುವುದು, ಹಚ್ಚೆ ಹುಯ್ಯುವುದು ಮುಂತಾದ ಕಲೆಗಳದ್ದೇ ಒಂದು ವಿಶೇಷ. ಮಲೆನಾಡಿನ ಪ್ರಮುಖ ಜನಪದಕಲೆಗಳಲ್ಲೊಂದಾದ ಶಿಕಾರಿಕಲೆಯದು ಮತ್ತೊಂದು ವಿಶೇಷ.

೩. ಜನಪದ ಸಂಪ್ರದಾಯಗಳು

ಈ ಜಿಲ್ಲೆಯ ಜನರ ಸಂಪ್ರದಾಯಗಳು ಅನುಸರಿಸುವ ಪದ್ಧತಿಗಳದೇ ಇನ್ನೊಂದು ವಿಶೇಷ. ಇದು ಮಲೆನಾಡು, ಅರೆಮಲೆನಾಡು ಮತ್ತು ಬಯಲುನಾಡು ಸಂಸ್ಕೃತಿಗಳ ತ್ರಿವೇಣಿ

ಸ್ವಂತವು ಸ್ವಾತಂತ್ರವಾಗಿರುವುದರಿಂದ ಮತ್ತು ವಿವಿಧ ಜಾತಿವರ್ಗಗಳಿಗೆ ಸೇರಿದ ಜನ ಇಲ್ಲಿ ನೆಲೆಸಿರುವುದರಿಂದ ಇಲ್ಲಿ ಸಂಕೀರ್ಣವಾದ ಸಂಪ್ರದಾಯಗಳನ್ನು ಕಾಣಬಹುದಾಗಿದೆ. ಈ ಪ್ರತಿಯೊಂದು ಜಾತಿ ವರ್ಗದವರೂ ಜನನ, ನಾಮಕರಣ, ಮದುವೆ, ಮರಣ ಸಂದರ್ಭಗಳಲ್ಲಿ [illegible] ಹಬ್ಬ ಹರಿದಿನಗಳು, ಮಾಟ ಮಂತ್ರಗಳು ಮುಂತಾದ ಆಚರಣೆಗಳಲ್ಲಿ ತಮ್ಮದೇ ಸಂಪ್ರದಾಯ ಪದ್ಧತಿ ರೀತಿ ರಿವಾಜುಗಳನ್ನು ಅನುಸರಿಸುತ್ತಾರೆ.

೪ ಜನಪದ ವಸ್ತು ವಿಶೇಷಗಳು

ಈ ಜಿಲ್ಲೆಯಲ್ಲಿ ದೊರೆಯುವ ಮತ್ತು ಜನರು ಬಳಸುವ ಜನಪದ ವಸ್ತು ವಿಶೇಷಗಳದ್ದೇ ಇನ್ನೊಂದು ವೈಶಿಷ್ಟ್ಯ. ಇಲ್ಲಿ ವಿವಿಧ ಸಂಸ್ಕೃತಿಗಳ ಜನರಿರುವಂತೆಯೇ ಹಲವಾರು ವೃತ್ತಿಗಳ ಜನರಿದ್ದಾರೆ. ಮಲೆನಾಡು, ಅರೆಮಲೆನಾಡು ಮತ್ತು ಬಯಲುನಾಡುಗಳ ಭೌಗೋಳಿಕ ಭಿನ್ನತೆ ಇಲ್ಲಿದೆ. ಹೀಗಿರುವುದರಿಂದ ಅವರ ಜೀವನ ವಿಧಾನಗಳೇ ಬೇರೆ ಬೇರೆ, ಮನೆಯ ಮಾದರಿಗಳೇ ಭಿನ್ನ ಭಿನ್ನ, ಅವರು ಬಳಸುವ ಸಾಧನ ಸಲಕರಣೆಗಳ ವೈವಿಧ್ಯಮಯ. ಉದಾಹರಣೆಗೆ:- ಬಯಲುನಾಡಿನ ಒಕ್ಕಲಿಗರು ಕೆಲವು ಬಗೆಯ ವ್ಯವಸಾಯ ಸಾಧನಗಳನ್ನು ಬಳಸಿದರೆ, ಮಲೆನಾಡಿನ ಒಕ್ಕಲಿಗರದೇ ಬೇರೆ. ಬಯಲುನಾಡಿನ ಕುಂಟೆ, ಕೂರಿಗೆ, [illegible], [illegible], [illegible], [illegible], [illegible], [illegible], [illegible] ಮುಂತಾದುವು ಮಲೆನಾಡಿನಲ್ಲಿ ಬಳಕೆಯಲ್ಲಿಲ್ಲ. ಆದರೆ [illegible], [illegible], [illegible], [illegible], [illegible] ಮುಂತಾದುವು ಬಯಲುಸೀಮೆಯಲ್ಲಿಲ್ಲ. ಆದರೆ ನೇಗಿಲು, ಬುಟ್ಟಿ, [illegible], [illegible], [illegible], ಹಗ್ಗ, [illegible], ಕುಡುಗೋಲು, [illegible], ಕೊಡಲಿ, [illegible], [illegible], ಕುಕ್ಕೆ, [illegible], [illegible], ಮೊರ, [illegible] [illegible] ಮುಂತಾದುವು ಎರಡೂ ಪ್ರದೇಶಗಳಲ್ಲಿ ಬಳಕೆಯಲ್ಲಿವೆ. ಅಲ್ಲದೆ [illegible] ಆಯುಧಗಳು [illegible] ಸಾಮಗ್ರಿಗಳು [illegible] ತೊಡುಗೆಗಳು ಭಿನ್ನ ಭಿನ್ನವಾಗಿರುತ್ತವೆ.

೫ ಹಬ್ಬಗಳು

ಸಂಸ್ಕೃತಿ ಸಂಪನ್ನರೂ ಆಚಾರಶೀಲರೂ ದೈವಭಕ್ತರೂ ಆದ ಈ ಜಿಲ್ಲೆಯ ಜನಪದರು ಆಚರಿಸುವ ಹಬ್ಬಗಳು ಹತ್ತಾರು, ನಡೆಸುವ ಜಾತ್ರೆಗಳು ನೂರಾರು ಹಾಗೂ ಪೂಜಿಸುವ ದೈವಗಳು ಸಾವಿರಾರು. ಅವನ್ನು ಆಚರಿಸುವ ಪದ್ಧತಿಗಳು ಹಾಗೂ ಪೂಜಿಸುವ, ಹರಕೆ ಒಪ್ಪಿಸುವ ವಿಧಾನಗಳಂತೂ ಭಿನ್ನ ಭಿನ್ನ.

ಕರ್ನಾಟಕದ ಇತರೆ ಭಾಗಗಳಲ್ಲಿ ಆಚರಿಸುವ ಯುಗಾದಿ, ದೀಪಾವಳಿ, ಗೌರಿ, ಸಂಕ್ರಾಂತಿ, ಶಿವರಾತ್ರಿ ಮುಂತಾದ ಹಬ್ಬಗಳೇ ಅಲ್ಲದೆ, ಇವರು ತಮ್ಮದೇ ಆದ [illegible] ಹಬ್ಬ, ಕೆಂಡೋತ್ಸವ, ಭೂಮಿ ಹುಣ್ಣಿಮೆ, ಹೊಸಕ್ಕಿಹಬ್ಬ, ಅಂಟಿಗೆ – ಪಂಟಿಗೆ ಮೊದಲಾದ ಹಬ್ಬಗಳನ್ನು ತಮ್ಮದೇ ಆದ ವಿಶಿಷ್ಟ ರೀತಿಗಳಲ್ಲಿ ಆಚರಿಸುತ್ತಾರೆ. ಇವರು ಆಚರಿಸುವಂಥ [illegible] ಹಬ್ಬಗಳು [illegible] ಮಲೆನಾಡಿನಲ್ಲಿ [illegible]

೬ ಜಾತ್ರೆಗಳು

ಇನ್ನು ಜಾನಪದ ಜಾತ್ರೆಗಳ ವೈಭವವನ್ನು ಕಾಣಬೇಕಾದರೆ ಈ ಜಿಲ್ಲೆಗೇ ಹೋಗಬೇಕು. ಅಷ್ಟೊಂದು ಸಂಖ್ಯೆಯ ಅಷ್ಟೊಂದು ಸಂಭ್ರಮದ ಅಷ್ಟೊಂದು ವೈಶಿಷ್ಟ್ಯಪೂರ್ಣವಾದ ಜಾತ್ರೆಗಳು ನಮ್ಮ ಜಿಲ್ಲೆಯಲ್ಲಿವೆ. ಅವು ಇವರ ಸಮೃದ್ಧ ಸಂಸ್ಕೃತಿಯ ಪ್ರತೀಕವಾಗಿವೆ. ಅವುಗಳಲ್ಲಿ ಮುಳ್ಳಯ್ಯನಗಿರಿಯ ಮುಳ್ಳಯ್ಯಸ್ವಾಮಿ ಜಾತ್ರೆ, ಸೀತಾಳಯ್ಯನ ಜಾತ್ರೆ, ಸರ್ವಾಣಿಸ್ವಾಮಿ ಜಾತ್ರೆ, ಕಾವಿಕಲ್ಲು ಮಠದ ಜಾತ್ರೆ, ಬೆರಟಿಕಪ್ಪನ ಜಾತ್ರೆ, ಕರೇಬೂಗಳೂರು ಜಾತ್ರೆ, ಬಿಂಡಿಗದ ದೇವೀರಮ್ಮನ ಜಾತ್ರೆ, ಕೊಲ್ಲಾಪುರದಮ್ಮನ ಜಾತ್ರೆ, ಬಾಬಾಬುಡನ್‌ಗಿರಿ ಉರುಸ್, ಸರದಿಯ ನೆಲ್ಲಿಯ ಆಂಜನೇಯನ ಜಾತ್ರೆ, ಹುಲಿಕೆರೆ ಕಲ್ಲೇಶ್ವರ ಜಾತ್ರೆ, ದೊಡ್ಡಕುರುಬರಹಳ್ಳಿಯ ಜಾಪಾಲಿಪುರ ಜಾತ್ರೆ, ಅಂಗಡಿಯ ವಸಂತಪರಮೇಶ್ವರಿ ಜಾತ್ರೆ, ಅಂತರಘಟ್ಟಮ್ಮನ ಜಾತ್ರೆ, ನಾಯಕನಪುರದ ಚಾಮುಂಡೇಶ್ವರಿ ಜಾತ್ರೆ, ದೇವನೂರಿನ ವೀರಭದ್ರ ಜಾತ್ರೆ, ಹೊರನಾಡಿನ ಅನ್ನಪೂರ್ಣೇಶ್ವರಿ ಜಾತ್ರೆ, ಮಲ್ಲೇಶ್ವರದ ಬ್ರಹ್ಮೋತ್ಸವ, ಸಿಂಹನಗದ್ದೆಯ ಜ್ವಾಲಾಮಾಲಿನಿ ಜಾತ್ರೆ, ಸಖರಾಯಪಟ್ಟಣದ ಶಕುನರಂಗನ ಜಾತ್ರೆ, ಕಲ್ಲತ್ತಿಗಿರಿಯ ವೀರಭದ್ರನ ಜಾತ್ರೆ, ಸೋಮಪುರದ ಸೋಮೇಶ್ವರ ಜಾತ್ರೆ, ಕರಗುಟ್ಟೆ ಗುಳ್ಳಮ್ಮನ ಜಾತ್ರೆ, ಶಿರವಾಸೆ ಆರ್ಯಮ್ಮನ ಜಾತ್ರೆ, ನಿಲ್ಲೀಬೀಳು ಮಾರಮ್ಮನ ಜಾತ್ರೆ, ಕುಂಬ್ರಿ ಮಳ್ಳೂರಮ್ಮನ ಜಾತ್ರೆ, ತಿಪ್ಪಗೊಂಡನಹಳ್ಳಿಯ ಜುಂಜಪ್ಪನ ಜಾತ್ರೆ, ಕಡೂರಿನ ಮಹೇಶ್ವರನ ಜಾತ್ರೆ, ಹೇಮಗಿರಿಯ ಮಲ್ಲಿಕಾರ್ಜುನಸ್ವಾಮಿ ಜಾತ್ರೆ, ಕೆಳಗೂರು ದ್ಯಾವೀರಮ್ಮನ ಜಾತ್ರೆ, ಆವತಿ ಸಾಲ್ಕಳಮ್ಮನ ಜಾತ್ರೆ, ಹೊಗರೆಹಳ್ಳಿ ಸಿದ್ಧೇಶ್ವರನ ಜಾತ್ರೆ, ಬಾಳೆಹೊನ್ನೂರು ರೇಣುಕಾಚಾರ್ಯರ ರಥ, ಅಜ್ಜಂಪುರದ ಕರಾಳಮ್ಮನ ಜಾತ್ರೆ, ಕತ್ರಿಮಾರಮ್ಮನ ಜಾತ್ರೆ, ಹುಲಿಕಲ್ಲು ಅಜ್ಜಯ್ಯನ ಜಾತ್ರೆ, ಕಲ್ಲೇಶ್ವರ ಜಾತ್ರೆ, ಆಲ್ದೂರಿನ ಈಶ್ವರ ಜಾತ್ರೆ, ಅಮೃತಾಪುರದ ಅಮೃತೇಶ್ವರ ಜಾತ್ರೆ - ಹೀಗೆ ಜಿಲ್ಲೆಯ ಜಾತ್ರೆಗಳು ಹಲವಾರು.

೭ ದೇವರು

ಇನ್ನು ಇವರು ಪೂಜಿಸುವ ದೇವ-ದೇವತೆಗಳು, ಭೂತಗಳು, ಚೌಡಿ-ದೈವ, ಮಾರಿ-ಮಸಣಿಗಳು ನೂರಾರು. ಅವು ಜಿಲ್ಲೆಯ ಪ್ರತಿ ಹಳ್ಳಿ ಹಳ್ಳಿಗಳಲ್ಲಿ ಕಾಡು ಮೇಡುಗಳಲ್ಲಿ ದೊರೆಯುತ್ತವೆ. ಅವುಗಳಲ್ಲಿ ಶಕ್ತಿ ದೇವತೆಗಳು, ಕ್ಷುದ್ರದೇವತೆಗಳು ಹಾಗೂ ಶಿಷ್ಟದೇವತೆಗಳು ಸೇರುತ್ತವೆ. ಶೃಂಗೇರಿಯ ಶಾರದಾಂಬಾ, ಹೊರನಾಡು ಅನ್ನಪೂರ್ಣೇಶ್ವರಿ, ಸಿಂಹನ ಗದ್ದೆಯ ಜ್ವಾಲಾಮಾಲಿನಿ, ಮಸಗಲಿಯ ಮಂಜುನಾಥೇಶ್ವರ, ಹಿರೇಮಗಳೂರು ಕೋದಂಡ ರಾಮೇಶ್ವರ, ಹುಲಿಕಲ್ಲು ಅಜ್ಜಯ್ಯ, ನಿಲ್ಲೀಬೀಳು ಮಾರಮ್ಮ, ಕಟ್ಟೆಮಾರಮ್ಮ, ಕಂಬದಮ್ಮ, ಕಟ್ಟೆಹೊಳೆಯಮ್ಮ, ರಾಮಕ್ಕಚೌಡಿ, ಹರೆಭೂತ, ಹೊಸಹೊಂಬ್ಳದ ಭೂತ, ಕುಕ್ಕಡದಮ್ಮ, ಗುಳ್ಳಮ್ಮ, ದುರ್ಗಮ್ಮ, ಮರಿಯಮ್ಮ -ಹೀಗೆ ಇವುಗಳ ಪರಂಪರೆಯೇ ಎದುರಾಗುತ್ತದೆ.

೮ ಅಡುಗೆಗಳು

ನಮ್ಮ ಜಿಲ್ಲೆಯ ಜನರು ಭೋಜನ ಪ್ರಿಯರು, ಹಾಗೆಯೇ ಅತಿಥಿ ಸತ್ಕಾರದಲ್ಲಿಯೂ ಪ್ರವೀಣರು. ಅವರು ಅಡುಗೆ ಮಾಡುವಂತೆಯೇ ಊಟ ಮಾಡುವುದರಲ್ಲಿಯೂ ನಿಪುಣರು. ಇಲ್ಲಿ ಶಾಖಾಹಾರಿ ಹಾಗೂ ಮಾಂಸಾಹಾರಿ - ಹೀಗೆ ಎರಡೂ ಬಗೆಯ ಜನರಿರುವುದರಿಂದ ಇವರು ಮಾಡುವ ಅಡುಗೆಗಳಲ್ಲಿ ವೈವಿಧ್ಯ ಹೆಚ್ಚು. ಹಾಗೆಯೇ ಮಲೆನಾಡಿನ ಅಡುಗೆಗಳೇ ಒಂದು ಬಗೆಯವಾದರೆ ಬಯಲು ನಾಡಿನವೇ ಇನ್ನೊಂದು ಬಗೆ. ಇವು ಒಂದೊಂದು ಜಾತಿಗೂ ಒಂದೊಂದು ಕಾಲಕ್ಕೂ ಒಂದೊಂದು ಹಬ್ಬಕ್ಕೂ ಬೇರೆಬೇರೆಯಾಗಿರುತ್ತವೆ. ರುಚಿಯೂ ಅಷ್ಟೇ ಭಿನ್ನ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆ ಅಡುಗೆಗಳಲ್ಲಿ ಕೆಲವು ಸಿಹಿ ಅಡುಗೆಗಳೆಂದರೆ ತಂಬಿಟ್ಟು, ಗೀಬು, ಹರಳು ಹೂರಣ ಗಡುಬು, ಕಡುಬು, ಸಣ್ಣಕಡುಬು, ನೀರುಗಡುಬು, ಮೋದಕ, ಸೌತೆಕಾಯಿ ಕಡುಬು, ಚೀಣಿಕಾಯಿ ಕಡುಬು, ಹಲಸಿನ ಹಣ್ಣಿನ ಕಡುಬು, ಅವರೆಕಡುಬು, ಸಾಂಬಾರಕಡುಬು, ಅನ್ನದ ಕಡುಬು, ಗಂಗಳದ ಕಡುಬು, ಸೂರಣ ಕಡುಬು, ಕಾಯಿಕಡುಬು, ಕಳಲೆಪಲ್ಯ, ಗಂಗಳದೋಸೆ, ನೀರುದೋಸೆ, ಅಕ್ಕಿಪಾಯಸ, ರಾಗಿಪಾಯಸ, ಸೋರೆಕಾಯಿ ಪಾಯಿಸ, ಚೀಣಿಕಾಯಿ ಪಾಯಸ, ರಾಗಿ ಅಂಬಲಿ, ಚಟ್ಟಿಟ್ಟು, ಅಕ್ಕಿ ಉಪ್ಪಿಟ್ಟು, ಹಾಲುಗದ ಹಿಟ್ಟು, ನಂಬಿಟ್ಟು, ಕಲಸುರೊಟ್ಟಿ, ಒತ್ತು ಶಾವಿಗೆ, ಬಾಳಂಬಲಿ, ಬೆಲ್ಲದ ಕಜ್ಜಾಯ - ಇತ್ಯಾದಿ.

ಇಲ್ಲಿಯ ಮಾಂಸಾಹಾರಗಳದೇ ಒಂದು ಸಂಭ್ರಮ. ಅವುಗಳಲ್ಲಿ ಏಡಿಸಾರು, ಏಡಿಗೊಜ್ಜು, ಚಿಗಣಿಚಟ್ನಿ, ಕಣಜದ ಮೊಟ್ಟೆಸಾರು, ಹುರಿತುಂಡು, ಸಂಡಿಗೆಗೊಜ್ಜು, ಕರಿಮೀನುಗೊಜ್ಜು, ಮೀನುಗಸಿ, ಕೋಳಿಗಸಿ, ಕುರಿಗಸಿ, ಉಪ್ಪುಸಾರು, ಒಣಮೀನು ಚಟ್ನಿ, ಬೆರಕೆಸಾರು, ಏಡಿ ಹುರುಕ್ಲು, ಸೀಗಡಿಗೊಜ್ಜು, ಮೊಟ್ಟೆಸಾರು, ಮೊಟ್ಟೆ ಪದಾತ ಮೊದಲಾದ ಭಕ್ಷ್ಯಗಳು ವಿಶಿಷ್ಟವಾದವು. ಅಲ್ಲದೇ ಅಕ್ಕಿಬೋಜ, ಬಗನೆ ಹೆಂಡ, ಈಚಲು ಹೆಂಡ, ತೆಂಗಿನ ಹೆಂಡ, ರಾಮರಸ, ಬಟ್ಟಿ ಸಾರಾಯಿ ಮುಂತಾದುವು ಅಲ್ಲಿಯ ಜನಪ್ರಿಯ ಮದ್ಯಪಾನೀಯಗಳು.

ಹೀಗೆ ಈ ಜಿಲ್ಲೆಯ ಜಾನಪದ ಸಂಪತ್ತಿಗೆ ಕೊನೆ ಮೊದಲಿಲ್ಲ. ಇದರ ವೈಭವಕ್ಕೆ ಮೇರೆಯೇ ಇಲ್ಲ. ಒಟ್ಟಿನಲ್ಲಿ ಅದನ್ನು ನೋಡುವ ಕಣ್ಣು ಬೇಕಷ್ಟೇ.

ಹೈದರ್ ಆಲಿಯ ಸೈನಿಕ ಸುಧಾರಣೆಗಳು

ಜಿ. ಶಿವಪ್ಪ

ಹದಿನೆಂಟನೆಯ ಶತಮಾನದ ದ್ವಿತೀಯಾರ್ಧವು ಭಾರತದ ಇತಿಹಾಸದಲ್ಲಿ ಬಹಳ ಮಹತ್ವದ ಕಾಲ. ಮೊಗಲ್ ಸಾಮ್ರಾಜ್ಯದ ಅವನತಿ ಮರಾಠರ ಉಚ್ಛ್ರಾಯ ಸ್ಥಿತಿ ಮತ್ತು ವಸಾಹತುಗಾರರ ಪ್ರಭುತ್ವದ ಉದಯ -ಈ ಸಮಯದ ಮೂರು ಬಹು ಮುಖ್ಯವಾದ ಘಟನೆಗಳು[1]. ಮೈಸೂರು ರಾಜ್ಯದಲ್ಲಿ ಎರಡನೇ ಕೃಷ್ಣರಾಜ ಒಡೆಯರು (೧೭೩೪-೧೭೬೬) ಹೆಸರಿಗೆ ಒಡೆಯ, ಅಧಿಕಾರ ಕಳಲೆಯ ಸಹೋದರರ ಕೈಯಲ್ಲಿತ್ತು[2]. ಶತ್ರುಗಳು ಮೈಸೂರಿನ ಮೇಲೆ ಆಕ್ರಮಣ ನಡೆಸಿ, ಲೂಟಿ ಮಾಡುತ್ತಿದ್ದರು, ಹೊರಲಾರದ ತೆರಿಗೆಗಳಿಂದ ಜನ ಕಂಗಾಲಾಗಿದ್ದರು[3]. ಇಂತಹ ವಾತಾವರಣದಲ್ಲಿ ಸಮರ್ಥನೂ, ಚಾಣಾಕ್ಷನೂ ಆದ ಹೈದರ್ ಆಲಿ ಹಂತಹಂತವಾಗಿ ಮೇಲೇರಿದನು.

ಹೈದರ್ ಅಧಿಕಾರಕ್ಕೆ ಬರುವ ವೇಳೆಗಾಗಲೇ ಬ್ರಿಟಿಷರು ಭಾರತದಲ್ಲಿ ತಕ್ಕಮಟ್ಟಿಗೆ ಬಲಿಷ್ಠರಾಗಿದ್ದರು. ದಕ್ಷಿಣ ಭಾರತದಲ್ಲಿ ನಡೆದ ಕರ್ನಾಟಕ ಯುದ್ಧಗಳಿಂದಾಗಿ ಬ್ರಿಟಿಷರಿಗೆ ರಾಜಕೀಯ ನೆಲೆ ಸಿಕ್ಕಿತ್ತು. ಬಂಗಾಲದ ಪ್ಲಾಸೀ ಮತ್ತು ಬಕ್ಸರ್ ಯುದ್ಧಗಳು ಅವರಿಗೆ ವಿಶಾಲ ಭೂ ಪ್ರದೇಶಗಳನ್ನೂ ಹಾಗೂ ಅಪಾರ ಸಂಪತ್ತನ್ನೂ ದೊರಕಿಸಿಕೊಟ್ಟಿದ್ದವು. ಇಡೀ ದೇಶ ಬ್ರಿಟಿಷರ ಕೈವಶವಾಗಬೇಕಾಗಿತ್ತು. ಮೈಸೂರಿನ ಹೈದರ್ ಆಲಿ ಮತ್ತು ಅವನ ಮಗ ಟಿಪ್ಪುಸುಲ್ತಾನ್ ಬ್ರಿಟಿಷರ ಶಕ್ತಿಯನ್ನು ಕುಂಠಿತಗೊಳಿಸಲು ಹಾಗೂ ಅವರನ್ನು ರಂಗದಿಂದ ತೆಗೆದುಹಾಕಲು ಸಂಕಲ್ಪ ಮಾಡಿದರು. ಬ್ರಿಟಿಷರು ಅಜೇಯರೆಂಬ ಕಲ್ಪನೆಯನ್ನು ಅವರು ಅಳಿಸಿದರು. ೧೭೬೭-೬೯ರ ಪ್ರಥಮ ಮೈಸೂರು ಯುದ್ಧದಲ್ಲಿ ದಕ್ಷಿಣ ಭಾರತದಲ್ಲಿ ಬ್ರಿಟಿಷರ ರಾಜಧಾನಿಯಾಗಿದ್ದ ಮದರಾಸಿನ ಬಾಗಿಲಲ್ಲಿ ನಿಂತು ಅವರು ಸಂಧಿಯನ್ನು ಬೇಡುವಂತೆ ಹೈದರ್ ಮಾಡಿದನು. ಈ ಘಟನೆಯಿಂದ ಅವರು ಭಾರಿ ಅಪಮಾನಕ್ಕೆ ಗುರಿಯಾದರು. ಬ್ರಿಟಿಷರ ವಿರುದ್ಧ ಅತಿ ಹೆಚ್ಚು ಯುದ್ಧಗಳನ್ನು ಮಾಡಿದ ಹಾಗೂ ಹೆಚ್ಚು ಜಯಗಳಿಸಿದ ಕೀರ್ತಿ ಮೈಸೂರಿನ ಹೈದರ್ ಮತ್ತು ಟಿಪ್ಪುಸುಲ್ತಾನರಿಗೆ ಸಲ್ಲುತ್ತದೆ.[4] ಮೈಸೂರು ರಾಜ್ಯ ಅಷ್ಟು ಬಲಿಷ್ಠವಾಗಿದ್ದು ಹೈದರ್ ಮತ್ತು ವಿಶೇಷನಾಗಿ ಟಿಪ್ಪು ಮೈಸೂರು ರಾಜ್ಯದಲ್ಲಿ ಜಾರಿಗೆ ತಂದ ಸುಧಾರಣೆಗಳಿಂದಾಗಿ.

ಮೈಸೂರಿನ ಸೇನೆ ಮೂರನೇ ಕರ್ನಾಟಕ ಯುದ್ಧದಲ್ಲಿ ಪಾಲ್ಗೊಂಡಿತ್ತು. ಮೈಸೂರಿನ ಸೈನ್ಯದಲ್ಲಿದ್ದ ಹೈದರ್ ಯೂರೋಪಿಯನ್ನರ ಯುದ್ಧ ತಂತ್ರಗಳನ್ನು ಆಸಕ್ತಿಯಿಂದ ವೀಕ್ಷಿಸಿದನು. ಫ್ರೆಂಚರ ಶ್ರೇಷ್ಠ ಮಟ್ಟದ ಯುದ್ಧ ತಂತ್ರಗಳು ಮತ್ತು ಆಯುಧಗಳಿಂದ ಪ್ರಭಾವಿತನಾದ ಹೈದರ್ ತನ್ನದೇ ಆದ ಫಿರಂಗಿಗಳ, ಆಯುಧಶಾಲೆ (arsenal) ಮತ್ತು

ಕಾರ್ಖಾನೆಯನ್ನು ಸಂಘಟಿಸಲು ಕ್ರಿ.ಶ. ೧೭೫೫-೫೬ರ ಸಮಯದಲ್ಲೇ ಫ್ರೆಂಚರ ಸಹಾಯವನ್ನು ಪಡೆದುಕೊಂಡನು. ಹೈದರನ ಪದಾತಿದಳ ಯೂರೋಪಿಯನ್ನರ ಮಾದರಿಯಲ್ಲಿ ಕಸರತ್ತು ಮಾಡತೊಡಗಿತ್ತು. ಮೊಗಲ್ ಮಾದರಿಯ ಅಶ್ವದಳ ಹಾಗೂ ಯೂರೋಪಿಯನ್ನರ ಚಕಮಕಿ [illegible] ಹೈದರ್ ಆಲಿಯ ಸೈನ್ಯ ಕಾಲಕ್ರಮೇಣ ಅಜೇಯ ಸೈನ್ಯವಾಗಿ ರೂಪುಗೊಂಡಿತು.[೬]

ನಿಯಮಿತವಾಗಿ ತೆರಿಗೆಯನ್ನು ವಸೂಲಿ ಮಾಡುವ ಮೂಲಕ ಹೈದರ್ ಆಲಿ ಹೆಚ್ಚು ಸಂಪನ್ಮೂಲಗಳನ್ನು ಸಂಗ್ರಹಿಸಿ, ತನ್ನ ಸೈನ್ಯದ ಸಂಖ್ಯೆ ಹಾಗೂ ಸಾಮರ್ಥ್ಯವನ್ನು ಹೆಚ್ಚಿಸಿದನು. ಸಾಂಪ್ರದಾಯಿಕವಾಗಿ ಭಾರತೀಯ ಸೈನ್ಯವನ್ನು ಸೇನಾಪತಿಯ ಸಾಮರ್ಥ್ಯ ಮತ್ತು ಸಂಪನ್ಮೂಲಗಳ ಆಧಾರದ ಮೇಲೆ ವಿಭಜಿಸಲಾಗುತ್ತಿತ್ತು. ಆದರೆ ಹೈದರ್ ಆಲಿ ರಿಸಾಲಾ (Risala) ಪದ್ಧತಿಯನ್ನು ಜಾರಿಗೆ ತಂದು, ಯೂರೋಪಿಯನ್ನರ ಮಾದರಿಯಲ್ಲಿ ಸೈನ್ಯವನ್ನು ವಿಭಜಿಸಿ, ನಿರ್ದಿಷ್ಟ ಸೈನಿಕರು ಹಾಗೂ ಶಸ್ತ್ರಗಳನ್ನು ನಿಗದಿಪಡಿಸಿದನು. ಉದಾಹರಣೆಗೆ, ಕಾಲ್ದಳದ ಪ್ರತಿಯೊಂದು ರಿಸಾಲಾ ೧೦೦೦ ಸೈನಿಕರನ್ನು ಹೊಂದಿರುತ್ತಿತ್ತು.

ಹೈದರ್ ಆಲಿಯು ಯುದ್ಧದಲ್ಲಿ ಶತ್ರುಗಳ ವಿರುದ್ಧ ರಾಕೆಟ್ಟುಗಳನ್ನು ಉಪಯೋಗಿಸುತ್ತಿದ್ದನು. ೧೭೮೦ರಲ್ಲಿ ರಾಕೆಟ್ಟು ಸೈನಿಕರ (Rocketmen) ಸಂಖ್ಯೆ ೨೦೦೦[೮]. ಹೈದರ್ ಆಲಿ ಮತ್ತಿತರ ದಕ್ಷಿಣ ಭಾರತದ ರಾಜರುಗಳ ಈ ರಾಕೆಟ್ಟುಗಳನ್ನು ಅನುಸರಿಸಿ ಇಂಗ್ಲೆಂಡ್ ನಂತರ ಕಾಂಗ್ರೀವ್ ರಾಕೆಟ್ಟುಗಳನ್ನು ಅಭಿವೃದ್ಧಿಪಡಿಸಿತು. ಆಂಗ್ಲೋ-ಮೈಸೂರು ಯುದ್ಧಗಳಲ್ಲಿ ಮೈಸೂರಿನ ರಾಕೆಟ್ಟುಗಳು ಬ್ರಿಟಿಷ್ ಸೈನ್ಯಕ್ಕೆ ಉಂಟುಮಾಡಿದ ಹಾನಿಯನ್ನು ವಿಲ್ಕ್ಸ್‌ನ ತನ್ನ 'Historical Sketch of South India' ಕೃತಿಯಲ್ಲಿ ಉಲ್ಲೇಖಿಸಿದ್ದಾನೆ.

ಹೈದರ್ ಆಲಿ ಸೈನ್ಯದ ಇನ್ನೊಂದು ವಿಶೇಷ ಅಂಶವೆಂದರೆ ಅಮೃತ್‌ಮಹಲ್ ದನಗಳನ್ನು ಯುದ್ಧ ಕಾರ್ಯಗಳಲ್ಲಿ ಬಳಸಿಕೊಂಡಿದ್ದು. ಚಿಕ್ಕದೇವರಾಯನು (೧೬೭೨-೧೭೦೪) ಈ ದನಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಂಡಿದ್ದನು. ಆದರೆ ಅವುಗಳನ್ನು ಹೈದರ್ ಮತ್ತಷ್ಟು ಅಭಿವೃದ್ಧಿಪಡಿಸಿ ಅವುಗಳ ಸಂಖ್ಯೆಯನ್ನು ೬೦,೦೦೦ಕ್ಕೆ ಏರಿಸಿದನು. ಮಾರ್ಕ್ ವಿಲ್ಕ್ಸ್ ಹೀಗೆ ಬರೆದಿದ್ದಾನೆ: "ಈ ಅಮೃತಮಹಲ್ ದನಗಳು ಹೈದರ್ ಸೈನ್ಯವು [illegible] ದಿನಗಳಲ್ಲಿ ೧೦೦ ಮೈಲಿಗಳನ್ನು ಚಲಿಸುವಂತೆ ಮಾಡಿದ್ದವು. ಹೈದರ್ ಆಲಿಯ ಕಾಲಾಳುಗಳನ್ನು ಮತ್ತು ಯುದ್ಧ ಸಾಮಗ್ರಿಗಳನ್ನು ಹೊತ್ತುಕೊಂಡು ಬ್ರಿಟಿಷ್ ಅಧಿಕಾರಿಗಳು ಆಶ್ಚರ್ಯಪಡುವಷ್ಟು ಬಿರುಸಾಗಿ ನಡೆಯುವ ಅಮೃತಮಹಲ್ ದನಗಳು ಹೈದರ್ ಆಲಿಗೆ ಅನೇಕ ವಿಜಯಗಳನ್ನು ಗಳಿಸಿಕೊಟ್ಟವು." ಈ ದನಗಳು ೧.೫ ಮೀ.ನಿಂದ ೧.೮ ಮೀ. ಎತ್ತರವಾಗಿರುತ್ತವೆ[೧೦]. ಇವುಗಳ ಕೊಂಬುಗಳು ಉದ್ದವಾಗಿ ಮತ್ತು ಚೂಪಾಗಿರುವುದರಿಂದ ಆವಶ್ಯಕತೆ ಇದ್ದಾಗ ಶತ್ರು ಸೈನಿಕರನ್ನು ನಾಶಪಡಿಸಲು ಈ ದನಗಳನ್ನು ಶತ್ರುಗಳ ವಿರುದ್ಧ ನುಗ್ಗಿಸಲಾಗುತ್ತಿತ್ತು.

ಹೈದರ್ ಆಲಿಯ ಸೈನಿಕ ಸಂಘಟನೆಯ ಇತರೆ ಎರಡು ಮುಖ್ಯ ಲಕ್ಷಣಗಳನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಅವು ಚೇಲಾ ಪಡೆ ಮತ್ತು ಕಂದಾಚಾರ ಸೇವಕರನ್ನು ಸಂಘಟಿಸಿದ್ದು. ಯುದ್ಧದ ಸಮಯದಲ್ಲಿ ವಶಪಡಿಸಿಕೊಂಡ ಮಕ್ಕಳನ್ನು ಮತ್ತು ಯುವಕರನ್ನು

ಚೇಲಾಪಡೆಯಲ್ಲಿ ಭರ್ತಿಮಾಡಿಕೊಳ್ಳಲಾಗುತ್ತಿತ್ತು. ಅವರೆಲ್ಲರೂ ಹಿಂದೂ ಮೂಲದವರು. ಈ ಚೇಲಗಳಲ್ಲಿ ಹೆಚ್ಚು ಪ್ರಸಿದ್ಧಿ ಪಡೆದವನೆಂದರೆ ಸ್ಕಾಟಿಷ್ ಹಿಂದ್ ಇಸ್ಲಾಂಗೆ ಮತಾಂತರಗೊಂಡ ಶೇರ್ ಅಯಾಜ್. ಅವನು ಶೌರ್ಯ ನಿರ್ವಹಣಾ ಸಾಮರ್ಥ್ಯ ಮತ್ತು ತನ್ನ ಚೆಲುವಾದ ಆಕಾರದಿಂದ ಹೈದರನ ಅಂತರಂಗಕ್ಕೆ ಬಂದನು. ೧೭೬೬ರಲ್ಲಿ ಅವನನ್ನು ಹೈದರ್ ಚಿತ್ರದುರ್ಗದ ರಾಜ್ಯಪಾಲನನ್ನಾಗಿ ನೇಮಿಸಿದನು. ನಂತರ ೧೭೮೨ರಲ್ಲಿ ಬಿದನೂರು ಪ್ರಾಂತ್ಯಪಾಲ ಬಿದನೂರಿಗೆ ಕಳಿಸಲಾಗಿತ್ತು. ಹೈದರನ ಮರಣಾನಂತರ ಅವನು ಮ್ಯಾಥ್ಯೂಸನೊಡನೆ ಒಂದು ಒಪ್ಪಂದ ಮಾಡಿಕೊಂಡು, ಬಿದನೂರು ಪ್ರಾಂತ್ಯವನ್ನು ಬ್ರಿಟಿಷರಿಗೆ ಕೊಡಲು ಸಿದ್ಧನಾದನು. ವಿಲ್ಕ್ಸ್ ಚೇಲಾ ಪಡೆಯನ್ನು ಟರ್ಕಿಯ ಜಾನಿಸ್ಸಾರಿಗಳಿಗೆ ಹೋಲಿಸಿದ್ದಾನೆ. ಆದರೆ ಹೋಲಿಕೆ ಸರಿಯಲ್ಲ. ಹೈದರ್ ಮತ್ತು ಟಿಪ್ಪುವಿನ ಸೈನ್ಯದಲ್ಲಿ ಚೇಲಾ ಪಡೆ ವಿಶೇಷವಾದ ಪಾತ್ರವನ್ನೇನೂ ನಿರ್ವಹಿಸಲಿಲ್ಲ. ದಂಗೆಕೋರ ಪ್ರವೃತ್ತಿಯ ಪ್ರದೇಶಗಳನ್ನು ತಣ್ಣಗಾಗಿಸುವ ಮತ್ತು ಈ ಪಡೆಯಿಂದ ಸೈನ್ಯಕ್ಕೆ ಭರ್ತಿಮಾಡಿಕೊಳ್ಳುವ ಉದ್ದೇಶವೇ ಚೇಲಾ ಪಡೆಯ ಪ್ರಾರಂಭಕ್ಕೆ ಕಾರಣ.

ಕಂದಾಚಾರ ಸೇವಕರು ಹೈದರನ ಸೈನ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅನಿಯತ ಸೈನಿಕರು ಇವರಾಗಿದ್ದರು. ಮೂಲತಃ ಇವರು ರೈತರು. ಕೃಷಿ ಕಾರ್ಯಗಳು ಇಲ್ಲದ ತಿಂಗಳುಗಳಲ್ಲಿ ಸೈನ್ಯದಲ್ಲಿ ಭರ್ತಿಯಾಗುತ್ತಿದ್ದರು. ಕಂದಾಚಾರ ಸೇವಕರು ಹೈದರನ ಸೈನ್ಯದೊಂದಿಗೆ ಯುದ್ಧಭೂಮಿಗೆ ಹೋಗುತ್ತಿದ್ದರು. ಅವರು ಮುಖ್ಯ ಕೆಲಸ ದಾರಿಯನ್ನು ಸ್ವಚ್ಛಗೊಳಿಸುವುದು, ಗೆದ್ದ ಪಟ್ಟಣಗಳ ರಕ್ಷಣೆ ಮಾಡುವುದಾಗಿತ್ತು.

ಹೈದರ್ ಆಲಿಯ ಸೈನಿಕ ಸಂಘಟನೆಯ ಬಹು ವಿಶೇಷ ಅಂಶವೆಂದರೆ ನೌಕಾಪಡೆಯ ಸಂಘಟನೆ. ಹೈದರನ ಶತ್ರುಗಳಾದ ಬ್ರಿಟಿಷರು ಸಾಗರದಲ್ಲಿ ಬಲಿಷ್ಠರಾಗಿದ್ದರು. ಆತನ ನೆರೆಯ ಪೋರ್ಚುಗೀಸರೂ ಸಹ ನೌಕಾಪಡೆಯಿಂದಾಗಿ ಶಕ್ತಿಶಾಲಿಗಳಾಗಿದ್ದರು. ಮರಾಠ ಪೇಶ್ವೆಯು ಸಹ ನೌಕಾಸೇನೆಯನ್ನು ಹೊಂದಿದ್ದನು. ಮಲಬಾರ್ ಕಡಲು ತೀರವನ್ನು ಗೆದ್ದ ನಂತರ ಹಲವು ಪ್ರಸಿದ್ಧ ಬಂದರುಗಳು ಹೈದರನ ವಶವಾದವು. ಹೈದರ್ ಆಲಿ ಸಹ ನೌಕಾಪಡೆಯನ್ನು ಸಂಘಟಿಸಲು ಪ್ರಯತ್ನಿಸಿದನು. ೧೭೬೬ರಲ್ಲಿ ಎರಡು ಹಡಗುಗಳನ್ನು ಏಳು ಸಣ್ಣ ದೋಣಿಗಳನ್ನು ಮತ್ತು ೪೦ ಚಪ್ಪಟೆಯ ಹಡಗು (Gallivats) ಗಳನ್ನು ಹೈದರ್ ಹೊಂದಿದ್ದನು. ಸ್ಟನ್ನೆಟ್ ಎಂಬ ಯೂರೋಪಿಯನ್ ಅಧಿಕಾರಿಯನ್ನು ಹಡಗುಗಳ ಮೇಲ್ವಿಚಾರಕನಾಗಿ (ಸಮುದ್ರದಲ್ಲಿರುವಾಗ) ನೇಮಿಸಿದ್ದನು. ಮಾರ್ಕ್ ವಿಲ್ಕ್ಸ್ ಹೈದರನ ನೌಕಾ ಪಡೆಯ ವಿಷಯವನ್ನು ಕೇವಲ ಒಂದು ಸಲ ಪ್ರಸ್ತಾಪಿಸಿದ್ದಾನೆ. ೧೭೬೮ರಲ್ಲಿ ಮೈಸೂರಿನ ನೌಕಾಧಿಪತಿ (Admiral) ತನ್ನ ರಾಜನ ಹಿತಾಸಕ್ತಿಯನ್ನು ತ್ಯಜಿಸಿ, ಇಂಗ್ಲಿಷರನ್ನು ಸೇರಿದನು. ಆದರೆ ಹೈದರ್ ಆಲಿ ಒಂದು ದುರ್ಘಟನೆಯಿಂದ ನಿರಾಶೆಹೊಂದುವ ವ್ಯಕ್ತಿಯಲ್ಲ, ತನ್ನ ನೌಕಾಬಲವನ್ನು ಮತ್ತೊಮ್ಮೆ ಸಂಘಟಿಸಲು ಆತ ಪ್ರಯತ್ನಿಸಿದನು.

ಡಿಸೆಂಬರ್ ೨೮, ೧೭೭೮ರ ಒಂದು ಪೋರ್ಚುಗೀಸ್ ಪತ್ರವು ಹೈದರ್ ಆಲಿಯು ಬಟ್ಕಳದಲ್ಲಿನ ಬಂದರನ್ನು ಬಲಪಡಿಸಲು ಒಬ್ಬ ಡಚ್ ನಾಗರಿಕನನ್ನು ನೇಮಿಸಿದ್ದ ಬಗ್ಗೆ ತಿಳಿಸುತ್ತದೆ. ಮೂರು ವರ್ಷಗಳಲ್ಲಿ ಈ ಕೆಲಸವನ್ನು ಮುಗಿಸಲು ಯೋಜಿಸಲಾಗಿತ್ತು. ಆದರೆ ನುರಿತ ಕೆಲಸಗಾರರ ಕೊರತೆಯಿಂದಾಗಿ ಹಾಗೂ ಬ್ರಿಟಿಷರು ೧೭೮೦ರಲ್ಲಿ ಹೈದರನ ಯುದ್ಧದ

ಹಡಗುಗಳನ್ನು ಮಂಗಳೂರಿನಲ್ಲಿ ನಾಶಪಡಿಸಿದ್ದರಿಂದಾಗಿ ಹೈದರನ ನೌಕಾಸೇನಾ ಸಂಘಟನೆಯ ಯೋಜನೆಗೆ ಭಾರಿ ಪೆಟ್ಟು ಬಿತ್ತು[೨೧].

ಹೈದರ್ ಆಲಿಯು ನೌಕಾಪಡೆಯ ಮಹತ್ವವನ್ನು ಅರಿತು. ಬಲಿಷ್ಠ ಪಡೆಯನ್ನು ಸಂಘಟಿಸಲು ಪ್ರಯತ್ನಿಸಿದನು. ಫ್ರೆಂಚರು ಮತ್ತು ಇತರ ಯೂರೋಪಿಯನ್ ಶಕ್ತಿಗಳು ಹೈದರನಿಗೆ ಸಹಕಾರಿಯಾದವು. ಹೈದರನ ಶತ್ರುಗಳು ಸಹ ಆತನ ನೌಕಾಬಲ ಸಂಘಟನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ[೨೨]. ಹೈದರ್ ಆಲಿ ೧೭೮೨ರಲ್ಲಿ ಮೃತನಾದನು. ಅವನ ಉತ್ತರಾಧಿಕಾರಿ ಟಿಪ್ಪು ಮತ್ತೊಮ್ಮೆ ಮೈಸೂರಿನ ನೌಕಾಬಲವನ್ನು ಸಂಘಟಿಸಲು ಪ್ರಯತ್ನಿಸಿದನಾದರೂ, ಸುರೇಂದ್ರನಾಥ ಸೇನ್ ಹೇಳುವಂತೆ "ಅವನ ತಂದೆ ಯಾವುದರಲ್ಲಿ ವಿಫಲನಾದನೋ, ಅದರಲ್ಲಿ ಅವನು ಯಶಸ್ಸು ಕಾಣಲಿಲ್ಲ"[೨೩].

ರಾಜಕಾರಣದಲ್ಲಿ ಜಾಣ್ಮೆ, ಸುಧಾರಿತ ಸೇನೆ ಇವುಗಳಿಂದ ಹೈದರನು ಮೈಸೂರನ್ನು ದಕ್ಷಿಣ ಭಾರತದಲ್ಲಿ ಒಂದು ಬಲಿಷ್ಠ ರಾಜ್ಯವನ್ನಾಗಿ ಮಾಡಿದನು. ಹೈದರನ ನಿರಂಕುಶ ಹಾಗೂ ಕೇಂದ್ರೀಕೃತ ಆಡಳಿತವು ಸೈನ್ಯದ ಆಧುನೀಕರಣಕ್ಕೆ ಹೆಚ್ಚು ಒತ್ತು ನೀಡಿತು. ಕಡಿಮೆ ಸಮಯದಲ್ಲಿ ಗಣನೀಯ ಯಶಸ್ಸು ಕಂಡಿತು. ಆದರೆ ಆವಶ್ಯಕ ಆಧುನಿಕ ತಂತ್ರಜ್ಞಾನ ಮತ್ತು ವಾಣಿಜ್ಯವನ್ನು ಅಭಿವೃದ್ಧಿಪಡಿಸದ ಕಾರಣ ಯಶಸ್ಸು ಬಹುಕಾಲ ಉಳಿಯಲಿಲ್ಲ[೨೪].

ಅಡಿ ಟಿಪ್ಪಣಿಗಳು

೧. ಹದಿನೆಂಟನೆಯ ಶತಮಾನದ ರಾಜಕಾರಣದ ಒಲವುಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನೋಡಿ - ಪ್ರೊ. ಬಿ. ಷೇಖ್ ಅಲಿ, ಕರ್ನಾಟಕ ಚರಿತ್ರೆ, ಸಂಪುಟ ೫, ಪು ೧-೨೦.

೨. ಅಣ್ಣ ದೇವರಾಜ ದಳವಾಯಿಯಾಗಿದ್ದರೆ, ತಮ್ಮ ನಂಜರಾಜ ಸರ್ವಾಧಿಕಾರಿಯಾಗಿದ್ದನು.

೩. ಲಿಂಗದೇವರು ಹಳೆಮನೆ ವಿರಚಿತ ಐತಿಹಾಸಿಕ ನಾಟಕ 'ಹೈದರ್' ಅಂದಿನ ಮೈಸೂರು ರಾಜ್ಯದ ಸ್ಥಿತಿಗತಿಗಳನ್ನು ಸುಂದರವಾಗಿ ನಿರೂಪಿಸಿದೆ.

೪. ಬ್ರಿಟಿಷರ ವಿರುದ್ಧ ಸಿಬ್ಬರು ಎರಡು ಯುದ್ಧಗಳನ್ನು, ಮರಾಠರು ಮೂರು ಯುದ್ಧಗಳನ್ನು ಮಾಡಿದರೆ, ಹೈದರ್ ಮತ್ತು ಟಿಪ್ಪು ನೇತೃತ್ವದ ಮೈಸೂರು ಸೈನ್ಯ ನಾಲ್ಕು ಯುದ್ಧಗಳನ್ನು ಮಾಡಿತು.

೫. Irfan Habi(Ed) Colomalism colmalism: Resistance and Modernization under Haidar Ali and Tipu Sultan, p. XX (Introduction)

೬. ಅದೇ,

೭. ಅದೇ, ಪು.

೮. M. H. Gopal, Tipu Sultan's Mysore An Economic Study, 1971, p 33.

೯. ನೋಡಿ, Mark wilks, Historical Sketches of South India, Vol.I and II Murray Hannick, 2nd Edition, 1930.
ವಿಲ್ಕ್ಸನ ಮೂಲ ಕೃತಿಯ ಸಂಪುಟ ೧. ಕ್ರಿ. ಶ. ೧೮೧೦ರಲ್ಲಿ ಮತ್ತು ಸಂಪುಟ ೨. ಕ್ರಿ. ಶ. ೧೮೧೭ರಲ್ಲಿ ಪ್ರಕಟಗೊಂಡವು.

೧೦. N. K. Sinha, Haider Ali, third edition 1959. p. 263

೧೧. ಹೆಚ್ಚಿನ ವಿವರಗಳಿಗಾಗಿ ನೋಡಿ ; N. Nagaraju and Nagalakshmi, Amrithamahal cattle, March of Karnataka, July 1999 p. 6-9.

೧೨. N. K. Sinha, Haider Ali, third ed. p. 267.

೧೩. ಮೊಹಿಬ್ಬುಲ್ ಹಸನ್ (ಮೂಲ) ಸಮೇತನಹಳ್ಳಿ ರಾಮರಾಯ (ಅನು) ಟಿಪ್ಪೂ ಸುಲ್ತಾನನ ಇತಿಹಾಸ, ೧೯೮೮, ಮೈಸೂರು ವಿಶ್ವವಿದ್ಯಾನಿಲಯ, ಪು. ೪೧ (ಟಿಪ್ಪಣಿ).

೧೪. ಹೆಚ್ಚಿನ ಮಾಹಿತಿಗಾಗಿ ನೋಡಿ N.K. Sinha, Haider Ali, p. 268.

೧೫. ಅದೇ,

೧೬. ಅದೇ, ೧೧೦, ೦೦೦ ಕಂದಾಚಾರ ಸೇವಕರಿದ್ದರೆಂದು ಲೇಖಕರು ತಿಳಿಸುತ್ತಾರೆ.

೧೭. ಅದೇ, ಪು. ೨೬೯

೧೮. Irfan Habi (Ed), Confronting ...... p. XXII.

೧೯. Mark Wilks, Historical Sketches of the South of India (2nd ed.) Vol.1, p. 331.

೨೦. Officios Dos Governadores, Maco 5, No. 70 ಪತ್ರದ ವಿವರಗಳಿಗಾಗಿ ನೋಡಿ. Surendra Nath sen "Hyder Alis Fleet", The Indian Historical Quarterly, Vol.VI, No2, June 1930.

೨೧. Dr. Rajkumar, "Naval Adventrues of Tipu Sultan", Tipu Sultan., A Great Martyr (Editor-B. Sheik Ali), p. 156.

೨೨. ಅದೇ,

೨೩. Surendra Nath Sen " Hyder Ali's Fleet" in the Indian Historical Quarterly, Vol.VI, No2, June 1930.

೨೪. Irfan Habib Confronting colonialism: Resistance and Modernization Under Haider Ali and Tipu Sultan, p.XXII (Introduction).

ಮಾತೃತ್ವದ ಚಿಲುಮೆಯಾಗಿ ಶ್ರೀಶಾರದಾದೇವಿಯವರು

ಪ್ರೊ. ಅನುಸೂಯ

ಶಾರದಾದೇವಿಯವರು ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಸಂಗಾತಿಯಾಗಿ ಆಧ್ಯಾತ್ಮಿಕತೆಯ ಸಾಧನೆಗೆ ಸ್ಫೂರ್ತಿಯಾಗಿದ್ದರು. ಶ್ರೀರಾಮಕೃಷ್ಣರು ಶುಷ್ಕ ಸಂನ್ಯಾಸಿಯಂತೆ ತಮ್ಮ ಪತ್ನಿಯನ್ನು ನಿರಾಕರಿಸದೆ "ನನ್ನನ್ನು ಪ್ರಾಪಂಚಿಕ ಜೀವನಕ್ಕೆ ಎಳೆಯುವ ಮನಸ್ಸಿದೆಯೇನು ? ಸಂಸಾರ ಜೀವನವನ್ನು ಅನುಭವಿಸಲು ನಿನಗೆ ಇಚ್ಛೆಯಿದ್ದರೆ ಅದಕ್ಕೂ ನಾನು ಸಿದ್ಧನಾಗಿದ್ದೇನೆ" ಎಂದರು. ಅಂದರೆ ಶಾರದಾದೇವಿಯವರು ಇಚ್ಛೆಪಟ್ಟಿದ್ದರೆ ಪತಿಯನ್ನು ಸಾಂಸಾರಿಕ ಬಂಧನಕ್ಕೆ ಸಿಲುಕಿಸಬಹುದಿತ್ತು. ಅವರು ಅಂತಹ ನೈತಿಕ ಹಕ್ಕನ್ನು ಹೊಂದಿದ್ದರು. ಸಂಯಮತೆಗೆ ಮತ್ತೊಂದು ಹೆಸರಾದ ಶ್ರೀಶಾರದಾದೇವಿಯವರು ಪತಿಯ ಮಾತಿಗೆ ಪ್ರತ್ಯುತ್ತರವಾಗಿ "ನಾನು ನಿಮ್ಮ ಸಹಧರ್ಮಿಣಿ, ನಿಮ್ಮ ಆದರ್ಶವೇ ನನ್ನ ಆದರ್ಶವೂ ಕೂಡ" ಎಂದು ವಿಷಯಾಸಕ್ತ ಬದುಕಿನಿಂದ ಹೊರಬಂದು ಆಧ್ಯಾತ್ಮಿಕ ಶಕ್ತಿಯಾಗಿ ಬೆಳೆದು ಇಂದಿಗೂ ಜನರಿಗೆ ಪ್ರೇರಕಶಕ್ತಿಯಾಗಿದ್ದಾರೆ.

ಇವರಿಬ್ಬರ ಜೀವನದಲ್ಲಿ ಕಾಮದ ಕಿಲುಬು ಇರಲಿಲ್ಲ. ಈ ಶರೀರ ಬುದ್ಧಿಯನ್ನು ಮೀರಿನಿಂತ ಚೈತನ್ಯಮಯ ಶಕ್ತಿ ಅವರದಾಗಿದ್ದು ಆತ್ಮಶಕ್ತಿ ಸಂಪನ್ನರಾಗಿದ್ದರು. ರಾಮಕೃಷ್ಣರು ಎಲ್ಲ ಸ್ತ್ರೀಯರನ್ನು ಮಾತೃಸ್ವರೂಪವಾಗಿ ಪೂಜಿಸುತ್ತಿದ್ದರು. ತಮ್ಮ ಪತ್ನಿಯಾದ ಶಾರದಾದೇವಿಯನ್ನು 'ಜಗನ್ಮಾತೆಯಾಗಿ' ಕಾಣುತ್ತಿದ್ದರು. ಇವರ ವೈವಾಹಿಕ ಜೀವನ ಸಂಬಂಧವು ಗುರು-ಶಿಷ್ಯರ ಆಧ್ಯಾತ್ಮಿಕ ಸಂಬಂಧವಾಗಿ ಪರಿಣಮಿಸಿ, ಏಕಕಾಲದಲ್ಲಿ ಆದರ್ಶ ಗೃಹಸ್ಥರೂ ಸಂನ್ಯಾಸಿಗಳೂ ಆಗಿದ್ದರು.

ಶಾರದಾದೇವಿಯವರು 'ತಾನು, ತನ್ನ ಕುಟುಂಬ, ತನ್ನವರು' ಎಂಬ ಸೀಮಿತ ಪರಿಧಿಯಲ್ಲಿ ಬಂಧಿತರಾಗದೆ ಜಗತ್ತನ್ನೇ ತನ್ನ ಕುಟುಂಬವಾಗಿ ನೋಡುತ್ತಾ ಜನರೆಲ್ಲರಿಗೂ ತಮ್ಮ ಅನಂತ ಪ್ರೀತಿ, ವಾತ್ಸಲ್ಯ, ಮಮಕಾರ, ಕರುಣೆಯನ್ನು ಧಾರೆಯೆರೆಯುತ್ತಿದ್ದರು. ಗೃಹಸ್ಥರು, ಸಂನ್ಯಾಸಿಗಳೆಂಬ ಭೇದ-ಭಾವದ ಸ್ಪರ್ಶವಿರಲಿಲ್ಲ ಅವರಿಗೆ. ಎಲ್ಲರನ್ನೂ ತಮ್ಮ ಮಕ್ಕಳಂತೆಯೇ ಆದರಿಸುತ್ತಿದ್ದರು. ತಮ್ಮ ಪತಿ ಆಹಾರದ ವಿಷಯದಲ್ಲಿ ಶಿಷ್ಯರಲ್ಲಿ ನಿಯಮ ವಿಧಿಸಿದರೆ ಇವರ ಮಾತೃಹೃದಯ ಅದನ್ನು ಸಹಿಸುತ್ತಿರಲಿಲ್ಲ. ಮಕ್ಕಳಿಗೆ ತೃಪ್ತಿಯಾಗುವಷ್ಟು ಬಡಿಸುವುದು ಅವರ ಸ್ವಭಾವವಾಗಿತ್ತು. ದುಃಖಿತರನ್ನು ದೀನರನ್ನು ಕಂಡರೆ ಮರುಕದಿಂದ ಅವರಿಗಾಗಿ ವ್ಯಥೆಪಡುತ್ತಿದ್ದು ಸಮಯದ ಅರಿವನ್ನು ಲೆಕ್ಕಿಸದೆ ಸೇವೆ ಮಾಡಲು ಉತ್ಸುಕರಾಗಿದ್ದರು.

ಚಾರಿತ್ರ್ಯ ಹೀನ ಜನರು, ಹುಚ್ಚರು, ಕಳ್ಳರಿಗೂ ಶ್ರೀಮಾತೆಯವರ ವಾತ್ಸಲ್ಯ ಮಮತೆ

ಮೀಸಲಾಗಿತ್ತು. ಅವರು ಯಾವುದೇ ವ್ಯಕ್ತಿಯ ಬಾಹ್ಯ ಅಪರಾಧವನ್ನು ಹುಡುಕುತ್ತಿರಲಿಲ್ಲ. ಏಕೆಂದರೆ ಪ್ರತಿವ್ಯಕ್ತಿಯೂ ಮತ್ತೊಬ್ಬರ ನ್ಯೂನತೆಯನ್ನು ಹುಡುಕಲು ಉತ್ಸುಕರಾಗಿರುತ್ತಾರೆ. ಅಂತಹವರನ್ನು ಕುರಿತು ಸರ್ವಜ್ಞನು "ತನ್ನ ದೋಷವನೂರು ಬೆನ್ನ ಹಿಂದಕೆ ಇರಿಸಿ, ಅನ್ಯರೊಂದಕ್ಕೆ ಹುಲಿಯಪ್ಪ ಮಾನವನು ಕುನ್ನಿಯಲ್ಲೇನು?" ಎಂದು ಟೀಕಿಸಿದ್ದಾನೆ. ಇನ್ನೊಬ್ಬರ ದೋಷವನ್ನು ಕಂಡು ಕೆರಳುವ, ಉತ್ಸಾಹ ತೋರುವ ಮನುಷ್ಯನೇ ತನ್ನನ್ನು ತಾನು ಮೊದಲು ಶುದ್ಧೀಕರಿಸಿಕೊಳ್ಳಬೇಕು. ತಮ್ಮ ತಮ್ಮ ದೋಷಗಳನ್ನು ಮರೆಮಾಚಿಕೊಂಡು ಅನ್ಯರ ತಪ್ಪಿಗೆ ಕುಪಿತಗೊಂಡರೆ ಅದು ಕುನ್ನಿಯ ಕೋಪದಂತಾಗುತ್ತದೆ. ಹಾಗೆಯೇ ಶ್ರೀಮಾತೆಯವರು "ನಿನಗೆ ಶಾಂತಿ ಬೇಕಾದರೆ ಮತ್ತೊಬ್ಬರಲ್ಲಿ ತಪ್ಪನ್ನು ಕಂಡು ಹಿಡಿಯಬೇಡ" ಎನ್ನುತ್ತಿದ್ದರು. ಕಳ್ಳನೊಬ್ಬನು ಬಾಳೆಹಣ್ಣನ್ನು ಕದ್ದು ತಂದು 'ಅಮ್ಮ ಈ ಹಣ್ಣನ್ನು ದೇವರಿಗೆ ನೈವೇದ್ಯ ಮಾಡಬೇಕೆಂದು' ಬೇಡಿಕೊಂಡನು. ಭಕ್ತ ಶಿಷ್ಯರು ಅದನ್ನು ದಯಮಾಡಿ ಸ್ವೀಕರಿಸಬಾರದು ಎಂದಾಗ ಮಾತೆಯವರು "ಯಾರು ಒಳ್ಳೆಯವರು ಯಾರು ಕೆಟ್ಟವರು ಎಂದು ನನಗೆ ಗೊತ್ತು" ಎನ್ನುತ್ತಾ ಆ ಹಣ್ಣುಗಳನ್ನು ನೈವೇದ್ಯ ಮಾಡಿ ಆ ಪ್ರಸಾದವನ್ನು ಆತನಿಗೂ ನೀಡಿದರು. ಇದನ್ನೆಲ್ಲಾ ಗಮನಿಸುತ್ತಿದ್ದ ಜನರು 'ಶ್ರೀಮಾತೆಯವರ ಕೃಪೆಯಿಂದ ಡಕಾಯಿತನೂ ಭಕ್ತನಾಗಿ ಬಿಟ್ಟನೋ!' ಎಂದು ಅಪಹಾಸ್ಯ ಮಾಡುತ್ತಿದ್ದರು. ಅವರು ಸಾಧು-ಅಸಾಧುಗಳೆಲ್ಲರ ತಾಯಿಯಾಗಿದ್ದರು. ಸೌಜನ್ಯದ ವೈಭವ ಮತ್ತು ಮುಕ್ತವಾದ ಮನಸ್ಸು ಅವರ ಸಾಧುತ್ವದಷ್ಟೇ ಉದಾತ್ತ ಗುಣಗಳಾಗಿದ್ದವು. [illegible] ಪಾತ್ರಲ್ಲಿದ್ದ ಹಿರಿಯ ಗುಣವೇ ತಾಳ್ಮೆಯು. ಅವರ ಬಳಿ ಯಾರೇ ಆಗಲಿ ಸಲಿಗೆಯಿಂದ ವರ್ತಿಸಬಹುದಾಗಿದ್ದರೂ ಯಾವುದೇ ಬಗೆಯ ಆಡಂಬರದ ವೈಭವವಿರಲಿಲ್ಲ. ಅವರ ಸಾಮೀಪ್ಯವೇ ಪೂಜ್ಯತಮವಾಗಿತ್ತು. ಜನರಿಗೆ ಆಧ್ಯಾತ್ಮಿಕ ಬದುಕಿನಲ್ಲಿ ಮತ್ತು ಪ್ರಾಪಂಚಿಕತೆಯ ಬಗ್ಗೆ ಅನುಮಾನ ಅಪನಂಬಿಕೆ ಉಂಟಾದವರಿಗೆ ನಂಬಿಕೆಯ ಧ್ರುವತಾರೆಯಾಗಿ, ದೈನಂದಿನ ಬದುಕಿನ ವ್ಯವಹಾರಗಳಿಗೂ ಸಲಹೆ ಸೂಚನೆಗಳನ್ನು ಕೊಡುವಲ್ಲಿ ಉತ್ಸುಕದ ಚಿಲುಮೆಯಾಗಿದ್ದರು. ಜೀವನದಲ್ಲಿ ವ್ಯಕ್ತಿಯು ತಪ್ಪು ಮಾಡಿ ಅದಕ್ಕೇ ತಮ್ಮ ಜೀವನದಲ್ಲಿ ಜಿಗುಪ್ಸೆ ಹೊಂದಿ ಜೀವನವನ್ನು ಅಂತ್ಯಗೊಳಿಸಲು ಮುಂದಾಗಿದ್ದರೆ ಶ್ರೀಮಾತೆಯವರು "ನನ್ನ ಮಗು ಕೆಸರಿನಲ್ಲಿ ಬಿದ್ದು ಮೈಯನ್ನು ಕೊಳೆ ಮಾಡಿಕೊಂಡರೆ ಆ ಕೆಸರನ್ನು ತೊಳೆದು ಪ್ರೀತಿಸುವುದು ನನ್ನ ಕರ್ತವ್ಯ"ವೆಂದು ಹೇಳಿ ಅಂತಹವರಿಗೆ ಉತ್ತಮರಾಗಲು ಅವಕಾಶ ಕೊಟ್ಟು ಅವರ ಬದುಕಿಗೆ ಆಶ್ರಯದಾತೆಯಾಗಿ ನಿಲ್ಲುತ್ತಿದ್ದರು. [illegible] ಇವರು ತಮ್ಮ ಶಿಷ್ಯರಿಗೆ ಅತಿಯಾದ ಪ್ರೀತಿಯನ್ನು ತೋರಿಸುತ್ತಿದ್ದುದನ್ನು ಗಮನಿಸುತ್ತಿದ್ದ ಶ್ರೀರಾಮಕೃಷ್ಣರು ಪತ್ನಿಗೆ "ನೋಡು ನೀನು ಈ ತರಹ ಅತಿಯಾದ ಪ್ರೀತಿ ತೋರಿದರೆ ಆ ಮಕ್ಕಳ ಭವಿಷ್ಯವೆಲ್ಲ ಮಣ್ಣು ಪಾಲಾಗುತ್ತದೆ" ಎಂದಾಗ ಶ್ರೀಮಾತೆಯವರು ಅವರ ಭವಿಷ್ಯವನ್ನು ನಾನು ನೋಡಿಕೊಳ್ಳುತ್ತೇನೆ ಎಂಬ ಭರವಸೆಯ ಉತ್ತರ ಕೊಡುತ್ತಿದ್ದರು. ಅಂದರೆ ಅತಿಯಾದ ಪ್ರೀತಿಯಿಂದಲೇ ಮಕ್ಕಳಲ್ಲಿರುವ ಕೆಟ್ಟ ಗುಣಗಳನ್ನು ಗೌಣವಾಗಿರಿಸಿ ಒಳ್ಳೆಯ ಗುಣಗಳನ್ನೇ ಮೆಚ್ಚಿ ಬೆಂಬಲಿಸುವುದು, ಆ ಪ್ರೀತಿಯಿಂದಲೇ ತನ್ನನ್ನು ತಾನು ಅರಿತು ಜವಾಬ್ದಾರಿಯುತವಾದ ಸ್ಥಾನಕ್ಕೆ ಕರೆದೊಯ್ಯುವುದು ಪ್ರೀತಿ ತೋರಿಸುವುದರಿಂದಲೇ

ತಮ್ಮತ್ತ ಅವರ ಮನಸ್ಸೆಳೆದು ತನ್ನ ಮಾತುಗಳನ್ನು ಆಲಿಸುವಂತೆ ಮಾಡುವುದು ಶ್ರೀಮಾತೆಯವರ ಪ್ರಮುಖ ಗುರಿಯಾಗಿತ್ತು.

ಇವರ ವಾತ್ಸಲ್ಯ ಅತೀತವಾದದ್ದು ಅಲೌಕಿಕವಾದದ್ದು ಎಂಬ ವಿಚಾರವನ್ನು ಮತ್ತೊಂದು ಘಟನೆಯಿಂದ ತಿಳಿಯಬಹುದಾಗಿದೆ. ಮಧುರ ಭಾವದ ಸಾಧಕಿಯೊಬ್ಬಳು ಶ್ರೀರಾಮಕೃಷ್ಣರನ್ನು ತಮ್ಮ ಪ್ರಿಯಪತಿ ಎಂದು ಭಾವಿಸುತ್ತ ಅದಕ್ಕನುಗುಣವಾದ ಹಾವಭಾವಗಳನ್ನು ಪ್ರದರ್ಶಿಸುತ್ತ ಓಡಾಡುತ್ತಿದ್ದಳು. ಸಾಧನೆಯಲ್ಲಿ ಪರಿಪಕ್ವತೆಯನ್ನು ಪಡೆಯದ ಅವಳ ನಡತೆ, ಆಚಾರವು ಶ್ರೀರಾಮಕೃಷ್ಣರಿಗೆ ಅವಳಲ್ಲಿ ಅಸಮಾಧಾನ ಉಂಟಾಗುವಂತೆ ಮಾಡುತ್ತಿದ್ದವು. ಇದನ್ನೆಲ್ಲ ಗಮನಿಸುತ್ತಲಿದ್ದ ಅವರ ಪತ್ನಿಯೂ ಶ್ರೀರಾಮಕೃಷ್ಣರಿಗೆ 'ಅವಳೇನೋ ಬುದ್ಧಿಯಿಲ್ಲದೆ ಮಾತಾಡಿದರೆ ಅವಳನ್ನು ಬೈಯುವುದು ಸರಿಯೆ?" ಎನ್ನುತ್ತಾ ಆಕೆಯನ್ನು ಸಮಾಧಾನಪಡಿಸುತ್ತಾ ಪ್ರೀತಿಯಿಂದ "ಮಗು, ಅವರ ಬಳಿಗೆ ಹೋಗುವುದರಿಂದ ಅವರಿಗೆ ಬೇಸರವಾಗುವುದಾದರೆ ನೀನು ನನ್ನ ಬಳಿಗೆ ಬಂದು ಬಿಡು" ಎಂದು ಅಕ್ಕರೆಯ ಸವಿನುಡಿಯಿಂದ ಅವರ ಮನದ ಬಯಕೆಯನ್ನು ಅರಿತು ಈಡೇರಿಸುತ್ತಿದ್ದರು. ಇವರು ಕ್ಷಮಿಸುವ ಕ್ಷಮಾನಿಧಿಯನ್ನು ಹೊಂದಿದ್ದು ಅವರ ಮನಸ್ಸು ಸದಾ ಆನಂದಮಯವಾಗಿರುತ್ತಿತ್ತು. ಲೌಕಿಕ ಬದುಕಿನಲ್ಲಿ ಪರಸ್ತ್ರೀ ತನ್ನ ಪತಿಯನ್ನು ಪತಿ ಎಂದು ಹೇಳಿಕೊಳ್ಳುವುದನ್ನು ಯಾವ ಸ್ತ್ರೀಯೂ ಸಹಿಸಲಾರಳು. ಆದರೆ ಶ್ರೀಮಾತೆಯವರು ಆ ಸ್ತ್ರೀಪರವಾಗಿ ಪತಿಯನ್ನೇ ಪ್ರಶ್ನಿಸಿ ಆ ಸ್ತ್ರೀಗೆ ಸಹಾನುಭೂತಿ, ಮಮತೆ, ವಾತ್ಸಲ್ಯವನ್ನು ನೀಡಿ, ತಮ್ಮ ಪತಿ ನನಗೆ ಮಾತ್ರವೇ ಮೀಸಲು ಎನ್ನುವ ನಾನತ್ವದಿಂದ ವಿಶಾಲತ್ವದೆಡೆಗೆ ಸಾಗಿ ಶಿಷ್ಯರನ್ನೂ ಸಹ ಸಂಕುಚಿತತೆಯನ್ನು ಬಿಟ್ಟು ವಿಶಾಲವಾದ ಮಾರ್ಗದೆಡೆಗೆ ಕೊಂಡೊಯ್ಯುತ್ತಿದ್ದರು.

ಶಾರದಾದೇವಿಯವರಿಗೆ ದೇಶೀಯರು, ವಿದೇಶೀಯರೆಂಬ ಭೇದವಿರಲಿಲ್ಲ. ಸ್ವದೇಶಿ ಆಂದೋಲನದ ಸಮಯ, ದುರ್ಗಾಪೂಜೆಯ ಸಂದರ್ಭದಲ್ಲಿ ಮಕ್ಕಳಿಗೆ ಹೊಸ ಬಟ್ಟೆ ತರಲು ತಿಳಿಸಿದಾಗ ಭಕ್ತರು ಸ್ವದೇಶಿ ಅಭಿಮಾನ ವ್ಯಾಮೋಹದಿಂದ ಸ್ವದೇಶಿ ಬಟ್ಟೆಯನ್ನೇ ಕೊಂಡು ತಂದನು. ಆದರೆ ಆ ಬಟ್ಟೆ ಯಾರಿಗೂ ಇಷ್ಟವಾಗಲಿಲ್ಲ. ಇದರಿಂದ ಉದ್ರೇಕ ಗೊಂಡು ವಿದೇಶಿವಸ್ತುಗಳ ಬಳಕೆಯನ್ನು ಖಂಡಿಸುತ್ತಾ ಆ ಭಕ್ತ ಕಿಡಿಕಾರಿದನು. ಇದಕ್ಕೆ ಶ್ರೀಮಾತೆಯವರು ಶಾಂತವಾಗಿ ಅವನನ್ನು ಕುರಿತು "ಮಗು ಯಾರೂ ಅನ್ಯರಲ್ಲ, ಅವರೂ ನನ್ನ ಮಕ್ಕಳೇ ಈ ಸಂಕುಚಿತ ಮನೋಭಾವ ನನಗಾಗದು" ಎಂದರು.

ಕಾಳೀಕೃಷ್ಣನೆಂಬ ಭಕ್ತನು ಶ್ರೀಮಾತೆಯವರನ್ನು ನೋಡಿ "ಇವರು ಒಂದೇ ಸಲಕ್ಕೆ ನಮ್ಮೆಲ್ಲರ ಹೃನ್ಮನಗಳನ್ನು ತಮ್ಮೆಡೆಗೆ ಸೆಳೆದುಕೊಂಡು ಬಿಟ್ಟರಲ್ಲ! ನನಗೆ ನನ್ನ ಸ್ವಂತ ತಾಯಿಯ ಮೇಲೆ ತುಂಬ ಪ್ರೀತಿಯಿದೆ. ಅವಳಿಗೂ ನನ್ನ ಮೇಲೆ ವಾತ್ಸಲ್ಯವಿದೆ. ಆದರೆ ಈ ತಾಯಿ ಮಾತ್ರ ನನ್ನ ಜನ್ಮ ಜನ್ಮಾಂತರದ ತಾಯಿಯೇ ಸರಿ. ಸರ್ವಕಾಲಕ್ಕೂ ಇವರೇ ನನ್ನ ನಿಜವಾದ ತಾಯಿ ಎನ್ನುತ್ತಿದ್ದನು. ಅಂದರೆ ಅವರ ಸಾನಿಧ್ಯ ಒಂದು ರೀತಿಯ ಶಾಂತತೆಯನ್ನು ತರುತ್ತಿತ್ತು. ಯಾವುದೋ ಆನಂದಮಯವಾದ ಅನುಭವವಾಗುತ್ತಿತ್ತು ಭಕ್ತರಿಗೆ. ಶಿಷ್ಯರು, ಗೃಹಸ್ಥರು ಮೊದಲ ಭೇಟಿಯಲ್ಲಿಯೇ ಅಪೂರ್ವ ಆಕರ್ಷಣೆಯನ್ನು ಅನುಭವಿಸುತ್ತಿದ್ದರು. ಹೀಗೆ ಸಾಧಕರ ಮನಸ್ಸನ್ನೂ ಅಯಸ್ಕಾಂತದಂತೆ ತಮ್ಮೆಡೆಗೆ ಸೆಳೆಯುತ್ತಿದ್ದರು.

ಮಕ್ಕಳು ತಮ್ಮ ಬಳಿ ಮನೋಭಿಲಾಷೆಯನ್ನು ವ್ಯಕ್ತಪಡಿಸುವ ಮೊದಲೇ ಅದನ್ನು ಅರಿತು ಪೂರ್ಣಗೊಳಿಸುವ ಅಂತಃಶಕ್ತಿಯನ್ನು ಅವರು ಹೊಂದಿದ್ದರು. 'ಅಮ್ಮ' ಎಂದು ಕರೆದಾಗ ಅವರ ಮಾತೃಪ್ರೇಮ ಕೈ ಬೀಸಿ ಕರೆದು ಅಪ್ಪಿಕೊಳ್ಳುತ್ತಿತ್ತು. ಶಿಷ್ಯರನ್ನು ಸಂನ್ಯಾಸಿಗಳು ಎಂದು ಕರೆಯುವುದು ಶ್ರೀಮಾತೆಯವರ ಮನಸ್ಸಿಗೆ ನೋವಾಗುತ್ತಿತ್ತು. ಸಂನ್ಯಾಸ ಎಂದರೆ ಸರ್ವಸಂಗ ಪರಿತ್ಯಾಗ. ತಂದೆ-ತಾಯಿಯರ ವಾತ್ಸಲ್ಯ-ಮಮಕಾರದ ಬಾಂಧವ್ಯವನ್ನು ತ್ಯಜಿಸುವಂತಹದ್ದು. ಹಾಗಾಗಿ ಸಂನ್ಯಾಸಿಗಳನ್ನು 'ಮಗು' ಎಂದೇ ಪ್ರೀತಿಯಿಂದ ಕರೆಯುತ್ತಿದ್ದರು.

ಗೃಹಸ್ಥ ಭಕ್ತನಾದ 'ನಾಗಮಹಾಶಯ' ಆಧ್ಯಾತ್ಮಿಕ ಜೀವನದ ತುತ್ತತುದಿಗೇರಿದವ ರಾಗಿದ್ದು, ಆಗಾಗ್ಗೆ ಶ್ರೀಮಾತೆಯವರ ದರ್ಶನಕ್ಕೆ ಬರುತ್ತಿದ್ದರು. ಒಮ್ಮೆ ಭಾವಾವೇಶ ಭರಿತರಾಗಿ 'ತಂದೆಗಿಂತಲೂ ತಾಯಿಯೇ ದಯಾಳು! ತಂದೆಗಿಂತಲೂ ತಾಯಿಯೇ ದಯಾಳು!' ಎನ್ನುತ್ತಾ ಶ್ರೀಮಾತೆಯವರಿಗೆ ನಮಸ್ಕರಿಸುತ್ತಾ 'ಮಾತೃಸ್ವರೂಪಿಣಿ' ನೀವು ಎನ್ನುತ್ತಾರೆ.

ಶ್ರೀಮಾತೆಯವರು ಯಾವಾಗಲೂ ಮಕ್ಕಳ ಹಿತ ಚಿಂತನೆಯ ಕಡೆಗೆ ಹೆಚ್ಚು ಗಮನ ಕೊಡುತ್ತಿದ್ದರು. ಇತರರ ದುಃಖ ಸಂಕಟ ಅವರ ಮನಸ್ಸಿಗೆ ತುಂಬ ವೇದನೆಯುಂಟು ಮಾಡುತ್ತಿತ್ತು ಎನ್ನುವುದನ್ನು ಅವರ ಮಾತುಗಳಿಂದಲೇ ಸ್ಪಷ್ಟಪಡಿಸಬಹುದು. "ಮಗು, ನಿಮಗೊಂದು ಮುಳ್ಳು ಚುಚ್ಚಿದರೂ ನನ್ನ ಹೃದಯಕ್ಕೆ ಕತ್ತಿಯನ್ನು ಇರಿದಂತಾಗುವುದು". ಇವರ ದಿವ್ಯ ವ್ಯಕ್ತಿತ್ವದ ಮುಂದೆ ಎಂತಹ ಕಠಿಣ ಹೃದಯವು ಮೃದುಭಾವನೆಯನ್ನು ತಾಳುತ್ತಿತ್ತು. ದುಷ್ಟವ್ಯಕ್ತಿಗಳೂ ಸಹ ಇವರಿಗೆ ತಲೆಬಾಗುತ್ತಿದ್ದರು. ಒಂದು ಕಡೆ 'ಜಗನ್ಮಾತೆ' ಯಾಗಿ ಭಕ್ತರ ಸೇವೆಯನ್ನು ಸ್ವೀಕರಿಸಿದರೆ ಮತ್ತೊಂದು ಕಡೆ ತಾವೇ ಸೇವಕಿಯಾಗಿ ನೊಂದ ಜನರ ಸೇವೆಯಲ್ಲಿ ತೊಡಗಿಕೊಳ್ಳುತ್ತಿದ್ದರು.

ಕೆಲವರು ವಿಚಿತ್ರ ರೀತಿಯಲ್ಲಿ ಅವರನ್ನು ಪೂಜಿಸುತ್ತಿದ್ದರು. ಅವರಿಗೆ ನಮಸ್ಕಾರ ಮಾಡುವಾಗ ಅವರ ಹೆಬ್ಬೆರಳನ್ನು ಕಚ್ಚಿ "ನೀವು ನನ್ನನ್ನು ಸದಾ ನೆನಪಿನಲ್ಲಿಟ್ಟು ಕೊಳ್ಳುತ್ತೀರಲ್ಲಾ!" ಎನ್ನುತ್ತಿದ್ದರು. ಮತ್ತೆ ಕೆಲವರು ಅವರ ಎರಡೂ ಪಾದಗಳನ್ನು ಕೈಗೆತ್ತಿಕೊಂಡು ನಮಸ್ಕರಿಸುತ್ತಿದ್ದರು ಹಾಗೂ ವಿಗ್ರಹದ ರೀತಿಯಲ್ಲಿ ಶ್ರೀಮಾತೆಯವರಿಗೆ ಪೂಜೆ ಪ್ರಾರಂಭಿಸಿ ಬಿಡುತ್ತಿದ್ದ ವ್ಯಕ್ತಿಗಳೂ ಉಂಟು.

ಹೀಗೆ ಶ್ರೀಶಾರದಾದೇವಿಯವರು ಮಾತೃ ಸ್ವರೂಪಿಣಿಯಾಗಿ, ದೇವಿಯಾಗಿ, ಶಕ್ತಿ ಸ್ವರೂಪಿಣಿಯಾಗಿ, ಮಮತಾಮಯಿ ತಾಯಿಯಾಗಿ ಬಳಿಗೆ ಬಂದವರಿಗೆ ಆಶ್ರಯ ನೀಡಲು ಸಿದ್ಧವಾಗಿದ್ದು ಪರಿಧಿ-ಪರಿಮಿತಿಗಳ ಚೌಕಟ್ಟನ್ನು ಕಿತ್ತೊಗೆದು ವಿಶಾಲ ಮನೋಭಾವವನ್ನು ಮೈಗೂಡಿಸಿಕೊಂಡಿದ್ದರು. ಇವರ ಈ ಮಾತೃತ್ವಕ್ಕೆ ಸರಿಸಾಟಿಯಿಲ್ಲ. ಆದಾಗ್ಯೂ ಇವರು ವೈರಾಗ್ಯ ಮೂರ್ತಿಯಾಗಿದ್ದು, ಪ್ರಾಪಂಚಿಕ ಬದುಕಿನಲ್ಲಿಯೂ ತಮ್ಮನ್ನು ಸಮರ್ಪಿಸಿ ಕೊಂಡಿದ್ದರು. 'ಕೆಸರಿನಲ್ಲಿ ಅರಳಿದ ಕಮಲದಂತೆ' ಅವರ ಬದುಕು ಪ್ರಜ್ವಲಿಸುತ್ತಿದೆ.

ಪ್ರವಲಿ ೨ಲಿದಿಂಡ ಡಯಟಿದ್ಮಕ್ಕ್ರದ ಪ್ರಯಾಂತಿರುವ್ರಂದಿಯ ೪ಿಲ ತ್ರಯತ ಡಕ್ಕಿರಯ ಯಿಂಡ 'ತ್ರಯಲಿ' .ರದ್ವದಿಂಡಹ ಯದಲಿ ಪ್ರಯಾಂತಿಕ:ಶಂಲಿ ಡಯಳಿಂಗಿ೩ಅಕ್ರ ಯರಲಿ ಡಗಿಕ್ಕಡಂಗ ಪ್ರಾರ್ಕ್ಷತ .ರ್ಶ್ರಿತ್ರಿಡ್ಡಳಕ್ಕಿಲಿ ಯರಿಕ ಿರಿಟ ಕ್ತಿ ಯಾಂತ್ರಿತ್ರಯ ರದಲಿ ಗಿವರಿಕ ರಿದಂಡ ಹ್ಕಡಂಗ .ರ್ಶ್ರಿತಿಗಡಾಿಳಿ ಗ್ಕಿಗಯ ರಡಯಂತ್ರಯಾಿತ್ರ ಯಾದ್ರಯರಿಕ ಯಂಡ ಪ್ರಸ್ವಡಧಂಯ ವರಕಯಯ-ಕ್ರಿತ್ರಯ ರಯಂಯಣ-ದಿಂತ .ಗ್ಕರಿದ ಗಂಗ೩ಡಗ ದಂಯಂತ್ರಿತ್ರಿ ೨ದಿಂಡ 'ಧಯ' ಪ್ರಾಳಿಗಕ್ಕಡಂಗ ಗಿಗಣ .ಪ್ರದಹಶಂಡಯಟ್ಕಿತ .ರದ್ವತ್ರಿಯರಿಕ

ಡವರಿಗಿದಿತ್ರಿತಿ ದಗಡಾಿಪಿ ಕ್ತ್ರಿಕ್ಷಲಿ 'ಯಂತಯಯಗಣ' ದಣ್ಕತಿಥ ಕ್ಷಹ್ಗ ತಾಡಡಢ ತ್ರಯಟ ,ರದ್ವತ್ರಿರಯ ಕ್ಕಿಗ೩ತದ ರಡಯಂತ್ರಯಾಿತ್ರ ಗ್ಗಣಲಿ ,ಪ್ರಗಿರ ೨ಯಿಂಯಣ ಳಿಂತಂಗಿದಿಂತ !ರ್ಳಯಿದ ೨ಯಿಂಯಣ ಳಿಂತಂಗಿದಿಂತ' ಗಿರಶರಿಥ ಡ್ರಾಗಿ 'ರ್ತಿಳರ್ಭ್ರತ್ರಯ' ತ್ರಯರ್ತ್ಕಯದಗ ಗಿರಿಡಯಂತ್ರಯಾಿತ್ರ ತ್ರಯ್ವಡ '!ರ್ಳಯಿದ .ರಿತ್ಮ್ವಡ

ಗಯಗ ತ್ರಯಹ ಗಿಪಿಕ ಯಂಗಶಂಟ ತಿಪಿ ೪ಕರಯ ಳಿಗಣಂಯ ಯಡಯಂತ್ರಯಾಿತ್ರ ಯಂಯಂತಿದಾಿಡ ಯಂತ ಗ್ಕಿಗಯ ರಡಲ ಟಿಕಂಗ ಡಿ:ಯ ರರತ್ರಾ .ರದ್ವತ್ರಿಡಳಕಿ ,ಧಯ" .ಯಾಪಟಗಟಿದ್ಮ್ಪ್ರ ೨ಲಿದಂಳಿಗಳಯ ರಡಲಿ ಪ್ರಾದ್ರಿವ್ರಡ ತ್ರಿತ್ರಿಡಾಯ ."ಯಾದ್ರಿಗಾತಂದರಿಗಿ ಪ್ರಯಾಂತ್ರಿಕ ಕ್ಕಿಯಂದ್ಕಹ ಕ್ಷಗ ಳರದ್ವಟಿಯ ಕ್ರಿಯಯ ಯಂಗಿರಡಗ ಪ್ರಯಂಗದ್ವಯ್ವಡ ಡ್ರಯಂದ್ಕಹ ಅರಿಕ ಹತಂಡ ದಿಂಯ ದ್ವತ್ರಿಕ್ಕಿಡ ಕ್ಷದಿ ರಡಾ 'ತ್ರಿಣಗವ' ಪಿಕ ಯಂಂ .ರದ್ವತ್ರಿಧಯರಿತ ಗಿರಿಡಾ ಹಗ ಳಿಗ್ಕಕ್ಕಿದ್ಮ್ಪಯ .ರ್ಶ್ರಿತಿಳಿಣ ದಂಳಿಗ ಗಿಯಂಕಿಡಾಿಗ ೨ಡಣ ಪಿಕ ಯಂಳಶಯ ರಿದಕಿರಿಕಿಕ ಪ್ರಯಂಡಾಿಗ ರ್ಕಿಥ ಗಿಯಂ .ರದ್ವತ್ರಿಕ್ರಿಳಕಿಗಿಪಳಿ ಲ್ರಿಯಂಡಾಿಗ ರಹಪ

ರ್ಶಯಗ ಗಿರಿಡಲಿ .ರದ್ವತ್ರಿಯಪಿತ್ರಿ ಪ್ರಾರಡಲಿ ಲ್ರಿಯಂತ್ರಿರ ಡ್ರಟಿಡ ಯಡಳಿಕ ಪ್ರಟ್ಲರಿಗಡಿಗಗ ಣಗ ಪ್ರಿಷ್ಪಗ ಡ್ರಾಗಿ" ಟ್ರಿಕ ಪ್ರಾಳಿರ್ವ್ಷಿಹ ರಡಲಿ ಗಡಯವಯ ಪ್ರಾಳಿಗದಣ ಳಪರಡ ರಡಲಿ ಯಡಳಿಕ ತ್ರಿಯ .ರದ್ವತ್ರಿಪ್ರಡ "!ಲ್ಲರಿತ್ರಿಕ್ರಿಳಕಿ ಗಿರಿಡಯಂತ್ರಯಾಿತ್ರ ಲ್ರಿಯಂತ್ರಿರ ದಹ್ಗಡ ಳಾಗಿಣ ರದ್ವತ್ರಿಯರ್ತ್ಕಯದಗ ಯಂಳಕ್ತ್ರಿಗ್ಕಿ .ಯಂಂ ಳಿಗ್ಕಕ್ಕಿಡ ದ್ವತ್ರಿಯಾಟಿ ಿಧಂರ್ಡ ಪಿತ್ರಿ

ತ್ರಿತ ,ಗಿಯಂಡಾಿದ ,ಗಿಯಂತಿಳಿರ್ಭ್ರ ತ್ರಿಯ ಯಡಯಂಡಾಿದಿವರಶಾಿತ್ರ ಗಿ೨ಿ ಯಳಾಿಗಿ ಯಂತ್ರಲಿ ಗಿರಿಪವಂಯ ಗಿಳಿಯ ಗಿಯಂಯಣ ಯಂಯಂಯಂಯ ,ಗಿಯಂತಿಳಿರ್ಭ್ರ ಪ್ರಾಡಢಾಿಗಯ ಅತಡ ಯಗ್ಳಿಕಿ ಪ್ರ್ಮ್ಟಿಕಟ ೪ಗಕಿಡರಿದ-ಧರಿದ ಪ್ರಗಿಡ್ಮ್ಹಿ ಯಡಾ ಕ್ಷಗಣಲಿ .ಲ್ರಯಂಟಿತರಿಗ ಕ್ಕ್ರಿತ್ರಯ ಕಿತ ರಡಾ .ರದ್ವತಿಂಳಕಿಿಟಿಳಗ್ಗಡ ಿ೩ಿಡಗ ಪ್ರ್ಮ್ಯತ ಳಯಂ್ಲಿಗಕಿಯಟ ಕಟಿಂದ್ರ ,ಪ್ರಗಿಯಂ೩ಿಳಯ ಗ್ಗರ್ಡಿ .ದ್ವತ್ರಿಯರ್ತ್ರಿಷ್ಪ ಯಯಟ ರಡಲಿ 'ತಿಂದಳಯಕ ದಿಳಿರಲಿ ಲ್ರಿಗರಿಗಿ' .ರದ್ವತಿಂಳಕಿ

ಈ ಸಂಚಿಕೆಯ ಲೇಖಕರು

ಕೆ. ಸಿ. ಬಸವರಾಜು
ಹಿರಿಯ ಉಪನ್ಯಾಸಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಡಾ. ಸೋಮಶೇಖರಗೌಡ
ರೀಡರ್, ಭಾಷಾವಿಜ್ಞಾನ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಡಾ. ಡಿ. ಎಸ್. ಜಯಪ್ಪಗೌಡ
ಮಾನವಿಕ ಸಂಪಾದಕರು
ಕನ್ನಡ ವಿಶ್ವಕೋಶ ವಿಭಾಗ, ಕು.ಕ.ಅ.ಸಂ.
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಡಾ. ಟಿ. ಗೋವಿಂದರಾಜು
ಎಂ. ಎಫ್- ೩೨/ಅ
ನಂದಿನಿ ಬಡಾವಣೆ
ಬೆಂಗಳೂರು - ೫೬೦ ೦೮೬

ಪ್ರೊ. ಅಂಬಳಿಕೆ ಹಿರಿಯಣ್ಣ
ಪ್ರಾಧ್ಯಾಪಕರು, ಜಾನಪದ
ಕು.ಕ.ಅ.ಸಂ. ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಡಾ. ಎಂ.ಪಿ. ಮಂಜಪ್ಪಶೆಟ್ಟಿ, ಮಸಗಲಿ
ಸಹಾಯಕ ನಿರ್ದೇಶಕರು, ಸಂಪಾದನಾ ವಿಭಾಗ
ಕು.ಕ.ಅ.ಸಂ.
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಜಿ. ಶಿವಪ್ಪ
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಎಂ. ಅನುಸೂಯ
ಸಂಶೋಧನಾ ವಿದ್ಯಾರ್ಥಿನಿ
ತತ್ತ್ವಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬